# ಜನತಾವಾಣಿ

ಸಂಪಾದಕರು : ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ ಶುಕ್ರವಾರ, ಅಕ್ಟೋಬರ್ 22, 2021

ಸಂಪುಟ : 48 ಸಂಚಿಕೆ : 161 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 4.00 www.janathavani.com janathavani@mac.com


# ಉಪ ಚುನಾವಣಾ ಪ್ರಚಾರದಲ್ಲಿ ಸಕ್ರಿಯವಾಗದ ಬಿಎಸ್‌ವೈ



ಬೆಂಗಳೂರು, ಅ. 21 - ರಾಜ್ಯದ ಎರಡು ವಿಧಾನಸಭಾ ಕ್ಷೇತ್ರಗಳಿಗೆ ನಡೆಯುತ್ತಿರುವ ಉಪಚುನಾವಣೆಯಲ್ಲಿ ಬಿಜೆಪಿ ಹಿರಿಯ ನಾಯಕ ಹಾಗೂ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸಕ್ರಿಯವಾಗಿ ಪಾಲ್ಗೊಳ್ಳುತ್ತಿಲ್ಲ.

ಇದನ್ನರಿತ ರಾಜ್ಯ ಬಿಜೆಪಿ ಉಸ್ತುವಾರಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್, ಯಡಿಯೂರಪ್ಪರನ್ನು ಸಂಪರ್ಕಿಸಿ, ಉಪಚುನಾವಣೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವಂತೆ ವಿನಂತಿಸಿದರು. ಇದಕ್ಕೆ ಪ್ರತಿಕ್ರಿಯಿಸಿ ಯಡಿಯೂರಪ್ಪ, ನಾನು ಈಗ ಕೇವಲ ಶಾಸಕ ನನಗೆ ಪಕ್ಷದಲ್ಲಿ ಯಾವುದೇ ಹೊಣೆಗಾರಿಕೆ ಇಲ್ಲ, ರಾಜ್ಯದಲ್ಲಿ ಹೊಸ ನಾಯಕರು ಬೆಳೆಯಬೇಕು, ಅದನ್ನು ಗಮನದಲ್ಲಿಟ್ಟುಕೊಂಡು, ಅಧಿಕಾರ ಹಸ್ತಾಂತರಿಸಿದ್ದೀರಿ. ಅವರಿಗೇ ಪೂರ್ಣ ಜವಾಬ್ದಾರಿ ನೀಡಿ, ಒಬ್ಬ ಕಾರ್ಯಕರ್ತನಾಗಿ ನನ್ನ ಸಮಯಾವಕಾಶ ನೋಡಿಕೊಂಡು ಚುನಾವಣಾ ಪ್ರಚಾರದಲ್ಲಿ ಪಾಲ್ಗೊಳ್ಳುತ್ತೇನೆ ಎಂದು ಹೇಳಿ ಸಂಪರ್ಕ ಕಡಿತಗೊಳಿಸಿದ್ದಾರೆ.

ಈ ಬೆಳವಣಿಗೆಯಿಂದ ವಿಚಲಿತರಾದ ಅರುಣ್ ಸಿಂಗ್, ಮುಖ್ಯಮಂತ್ರಿ ಅವರನ್ನು ಸಂಪರ್ಕಿಸಿ ವಿಷಯ ತಿಳಿಸಿದ್ದಲ್ಲದೆ, ತಮ್ಮೆಲ್ಲಾ ಪ್ರವಾಸ ಕಾರ್ಯ ರದ್ದುಗೊಳಿಸಿ, ಉಪಚುನಾವಣಾ ಕ್ಷೇತ್ರಗಳಲ್ಲೇ ಬಿಡಾರ ಹೂಡಿ, ಅಭ್ಯರ್ಥಿಗಳ ಗೆಲುವಿಗೆ ಶ್ರಮಿಸಿ, ಇವರ ಗೆಲುವಿನ ಹೊಣೆಗಾರಿಕೆ ನಿಮ್ಮದೇ ಎಂದಿದ್ದಾರೆ.

ಇದಾದ ನಂತರ ರಾಜ್ಯ ಆರ್‌ಎಸ್‌ಎಸ್ ಪದಾಧಿಕಾರಿಗಳನ್ನು ಸಂಪರ್ಕಿಸಿ, ಎರಡೂ ಕ್ಷೇತ್ರಗಳಲ್ಲಿ ಕಾರ್ಯಕರ್ತರಿಗೆ (2ನೇ ಪುಟಕ್ಕೆ)

# 100 ಕೋಟಿ ದಾಟಿದ ಡೋಸ್

ನವದೆಹಲಿ, ಅ.21 - ಕೊರೊನಾ ಲಸಿಕಾ ಕಾರ್ಯಕ್ರಮದಲ್ಲಿ ಭಾರತ ಗುರುವಾರದಂದು ಮಹತ್ವದ ಮೈಲಿಗಲ್ಲು ಸ್ಥಾಪಿಸಿದ್ದು, 100 ಕೋಟಿ ಡೋಸ್ ಲಸಿಕೆ ನೀಡಿದ ಸಾಧನೆ ಮಾಡಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಸೇರಿದಂತೆ ಹಲವಾರು ಗಣ್ಯರು ಈ ಸಾಧನೆಗಾಗಿ ದೇಶಕ್ಕೆ ಶುಭ ಹಾರೈಸಿದ್ದಾರೆ. ಜನವರಿ 16 ರಿಂದ ಆರಂಭವಾದ ಲಸಿಕಾ ಅಭಿಯಾನ, ಇತ್ತೀಚಿನ ತಿಂಗಳುಗಳಲ್ಲಿ ಅತ್ಯಂತ ಚುರುಕುಗೊಂಡಿದೆ.

ಶತಕೋಟಿ ಲಸಿಕಾ ಸಂಭ್ರಮದ ದಿನದಂದು ಪ್ರಧಾನಿ ಮೋದಿ ಹಾಗೂ ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ಅವರು ರಾಮ ಮನೋಹರ ಲೋಹಿಯಾ ಆಸ್ಪತ್ರೆಯ ಲಸಿಕಾ ಕೇಂದ್ರಕ್ಕೆ ಭೇಟಿ ನೀಡಿ, ಆಸ್ಪತ್ರೆಯ ಸಿಬ್ಬಂದಿ ಹಾಗೂ ಕೆಲ ಫಲಾನುಭವಿಗಳ ಜೊತೆ ಸಂವಾದ ನಡೆಸಿದರು.

ಕೊವಿನ್ ವೆಬ್ ತಾಣದಲ್ಲಿ ನೀಡಿರುವ ಮಾಹಿತಿಯ



ಪ್ರಕಾರ ಇದುವರೆಗೂ 100.61 ಕೋಟಿ ಜನರಿಗೆ ಲಸಿಕೆ ನೀಡಲಾಗಿದೆ. ಈ ಪೈಕಿ 71 ಕೋಟಿ ಜನರು ಮೊದಲ ಡೋಸ್ ಹಾಗೂ 29.52 ಕೋಟಿ ಜನರು ಎರಡನೇ ಡೋಸ್ ಲಸಿಕೆ ಪಡೆದುಕೊಂಡಿದ್ದಾರೆ. ಗುರುವಾರದಂದು ತಡ ರಾತ್ರಿಯವರೆಗೆ 77.19 ಲಕ್ಷ ಜನರಿಗೆ ಲಸಿಕೆ ನೀಡಲಾಗಿದೆ.

ಈ ಸಾಧನೆಗಾಗಿ ವಿಶ್ವ ಆರೋಗ್ಯ ಸಂಘ ಟನೆಯ ಪ್ರಧಾನ ನಿರ್ದೇಶಕ ಡಾ. ಟೆಡ್ರೋಸ್ ಅಧನೋಮ್ ಘೆಬ್ರೆಯೆಸಸ್ ಅವರು ಮೋದಿ, ವಿಜ್ಞಾನಿಗಳು, ಆರೋಗ್ಯ ಕಾರ್ಯಕರ್ತರು ಹಾಗೂ ನಾಗರಿಕರಿಗೆ (5ನೇ ಪುಟಕ್ಕೆ)

## 100 ಕೋಟಿ ಡೋಸ್ ಲಸಿಕೆಯಿಂದ ರಕ್ಷಣಾ ಕವಚ : ಪ್ರಧಾನಿ ಮೋದಿ



**ನವದೆಹಲಿ, ಅ. 21 – ದೇಶದಲ್ಲಿ 100 ಕೋಟಿ ಡೋಸ್ ಕೊರೊನಾ ಲಸಿಕೆ ನೀಡಿರುವುದರಿಂದ ಕೊರೊನಾ ವಿರುದ್ಧದ ಹೋರಾಟಕ್ಕೆ ರಕ್ಷಣಾ ಕವಚ ದೊರೆತಂತಾಗಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.**

**ಶತಮಾನದ ಅತಿ ದೊಡ್ಡ ಮಹಾಮಾರಿ ಎದುರಿಸಲು ದೇಶ ಈಗ 100 ಕೋಟಿ ಲಸಿಕೆಗಳ ರಕ್ಷಣಾ ಕವಚ ಪಡೆದಿದೆ. ಈ ಸಾಧನೆ ಭಾರತಕ್ಕೆ, ಪ್ರತಿಯೊಬ್ಬ ನಾಗರಿಕನಿಗೆ ಸೇರಿದ್ದು ಎಂದು ಮೋದಿ ಹೇಳಿದ್ದಾರೆ. ಎಲ್ಲಾ ಲಸಿಕೆ ಉತ್ಪಾದನಾ ಕಂಪನಿಗಳು, ಲಸಿಕೆ ಸಾಗಣೆ ಹಾಗೂ ವಿತರಣೆಯಲ್ಲಿ ಭಾಗಿಯಾದ ಉದ್ಯೋಗಿಗಳು ಮತ್ತು ಆರೋಗ್ಯ ಕಾರ್ಯಕರ್ತರಿಗೆ ಪ್ರಧಾನಿ ಮೋದಿ ಧನ್ಯವಾದ ಸಲ್ಲಿಸಿದ್ದಾರೆ.**

# ಹೊನ್ನಾಳಿ ತಾ.ನಲ್ಲಿ 14 ಸಾವಿರ ವಿದ್ಯಾರ್ಥಿಗಳಿಗೆ ಬಿಸಿಯೂಟ




ಹೊನ್ನಾಳಿ, ಅ.21- ತಾಲ್ಲೂಕಿನ 122 ಹಿರಿಯ ಪ್ರಾಥಮಿಕ ಶಾಲೆಗಳು ಹಾಗೂ 44 ಪ್ರೌಢಶಾಲೆಗಳು ಸೇರಿದಂತೆ 166 ಶಾಲೆಗಳಿಂದ ಸುಮಾರು 14 ಸಾವಿರ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿಯೂಟಕ್ಕೆ ಚಾಲನೆ ನೀಡಲಾಗುತ್ತಿದೆ ಎಂದು ಅಕ್ಷರ ದಾಸೋಹದ ಸಹಾಯಕ ನಿರ್ದೇಶಕ ಕೆ.ಆರ್. ರುದ್ರಪ್ಪ ತಿಳಿಸಿದ್ದಾರೆ.

ಇಲ್ಲಿನ ಭಾರತೀಯ ವಿದ್ಯಾಸಂಸ್ಥೆಯಲ್ಲಿ ಮಧ್ಯಾಹ್ನ ಬಿಸಿಯೂಟದ ಸಿದ್ಧತೆಯ ತಯಾರಿ ಹಾಗೂ ಮಕ್ಕಳಿಗೆ ಬಿಸಿಯೂಟ ವಿತರಣೆಯ ಸಂದರ್ಭದಲ್ಲಿ ಭೇಟಿ ನೀಡಿ ಅವರು ಮಾತನಾಡಿದರು.

ಎಲ್ಲಾ ಅಕ್ಷರ ದಾಸೋಹದ ಸಿಬ್ಬಂದಿಗಳಿಗೆ ಎರಡನೇ ಲಸಿಕೆ ಹಾಕಿಸಲಾಗಿದೆ. 18 ತಿಂಗಳ ನಂತರ ಆರಂಭವಾಗಿರುವ ಬಿಸಿಯೂಟ ಕಾರ್ಯಕ್ಕೆ ಅಡುಗೆ ಸಿಬ್ಬಂದಿಗಳು ಉತ್ಸುಕತೆಯಿಂದ ಅಡುಗೆ ತಯಾರಿಕೆಗೆ ಮುಂದಾಗಿದ್ದು, ಪಟ್ಟಣದ ಹಳದಮ್ಮ ಶಾಲೆ ಚನ್ನಮಲ್ಲಿಕಾರ್ಜುನ ಹಾಗೂ ಹಿರೇಮಠದ ಶಾಲೆಗಳಿಗೆ ಭೇಟಿ ನೀಡಿದಾಗ ಕಂಡುಬಂದಿದ್ದು, ಇನ್ನುಳಿದ ಪಟ್ಟಣದ ಶಾಲೆಗಳಿಗೆ (5ನೇ ಪುಟಕ್ಕೆ)

## ಗೌರಿ ಲಂಕೇಶ್ ಹತ್ಯೆ : ಆರೋಪ ಪಟ್ಟಿ ಎತ್ತಿ ಹಿಡಿದ ಸುಪ್ರೀಂ



ನವದೆಹಲಿ, ಅ. 21 – ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆಗೆ ಸಂಬಂಧಿಸಿದಂತೆ ಆರೋಪಿಯೋರ್ವನ ವಿರುದ್ದದ ಕರ್ನಾಟಕ ಸಂಘಟಿತ ಅಪರಾಧ ನಿಯಂತ್ರಣ ಕಾಯ್ದೆಯು ಪ್ರಕರಣ ಕೈ ಬಿಟ್ಟಿದ್ದನ್ನು ಸುಪ್ರೀಂ ಕೋರ್ಟ್ ತಳ್ಳಿ ಹಾಕಿದೆ. ಕಳೆದ ವರ್ಷ ಏಪ್ರಿಲ್ ತಿಂಗಳಲ್ಲಿ ಕರ್ನಾಟಕ ಹೈಕೋರ್ಟ್ ಆರೋಪ ಪಟ್ಟಿ ಕೈ ಬಿಟ್ಟಿದ್ದನ್ನು ಪ್ರಶ್ನಿಸಿ ರಾಜ್ಯ ಸರ್ಕಾರ ಹಾಗೂ ಗೌರಿ ಲಂಕೇಶ್ ಸಹೋದರಿ ಕವಿತ ಲಂಕೇಶ್ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದರು.

## ನಗರದಲ್ಲಿ ಅಕ್ರಮ ಪಡಿತರ ಅಕ್ಕಿ ವಶ

ದಾವಣಗೆರೆ, ಅ.21- ರಾಷ್ಟ್ರೀಯ ಹೆದ್ದಾರಿಯಲ್ಲಿ ಅಕ್ರಮವಾಗಿ ಪಡಿತರ ಅಕ್ಕಿ ಸಾಗಾಟ ಮಾಡುತ್ತಿದ್ದ ವೇಳೆ ಇಲ್ಲಿನ ವಿದ್ಯಾನಗರ ಪೊಲೀಸರು ಲಕ್ಷಾಂತರ ರೂ. ಮೌಲ್ಯದ ಪಡಿತರ ಅಕ್ಕಿ ವಶಪಡಿಸಿಕೊಂಡಿದ್ದಾರೆ.

ಅಕ್ರಮವಾಗಿ ಪಡಿತರ ಅಕ್ಕಿಯನ್ನು ಸಾಗಾಟ ಮಾಡುತ್ತಿದ್ದಾಗ, ವಿದ್ಯಾನಗರ ಪಿಎಸ್‌ಐ ಪ್ರಸಾದ್, (5ನೇ ಪುಟಕ್ಕೆ)

## ಕೇಂದ್ರದಿಂದ ತುಟ್ಟಿಭತ್ಯೆ ಶೇ.3ರಷ್ಟು ಹೆಚ್ಚಳ

ನವದೆಹಲಿ,ಅ.21-ಕೇಂದ್ರ ಸರ್ಕಾರ ತನ್ನ 47.14 ಲಕ್ಷ ನೌಕರರು ಹಾಗೂ 68.62 ಲಕ್ಷ ಪಿಂಚಣಿದಾರರ ತುಟ್ಟಿ ಭತ್ಯೆಯನ್ನು ಶೇ.3ರಷ್ಟು ಹೆಚ್ಚಿಸಿ ಶೇ.31ಕ್ಕೆ ನಿಗದಿ ಪಡಿಸಿದೆ. ಈ ಬಗ್ಗೆ ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅನುರಾಗ್ ಸಿಂಗ್ ಮಾಹಿತಿ ನೀಡಿದ್ದಾರೆ.

## ಪಿಎಂ ಗತಿಶಕ್ತಿ ಯೋಜನೆ ಕೇಂದ್ರ ಸಂಪುಟದ ಸಮ್ಮತಿ

ನವದೆಹಲಿ, ಅ. 21 – ಬಹು ಮಾದರಿ ಸಂಪರ್ಕದ ಮೂಲಕ ಯೋಜನೆಗಳ ಮೇಲೆ ನಿಗಾ ವಹಿಸುವ ಪಿಎಂ ಗತಿಶಕ್ತಿ ರಾಷ್ಟ್ರೀಯ ಯೋಜನೆಗೆ ಕೇಂದ್ರ ಸಂಪುಟ ಒಪ್ಪಿಗೆ ನೀಡಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಅಕ್ಟೋಬರ್ 13ರಂದು 100 ಲಕ್ಷ ಕೋಟಿ ರೂ.ಗಳ ರಾಷ್ಟ್ರೀಯ ಮಾಸ್ಟರ್ ಪ್ಲಾನ್‌ನ ಗತಿ ಶಕ್ತಿ ಯೋಜನೆ ಅನಾವರಣಗೊಳಿಸಿದರು.

# ಶಿಕ್ಷಣ ಸಂಸ್ಥೆಗಳಿಂದ ಉದ್ಯೋಗಗಳ ಸೃಷ್ಟಿ

## ನೂತನ ಶಿಕ್ಷಣ ನೀತಿಯ ಮುಖ್ಯ ಉದ್ದೇಶ: ಪ್ರೊ. ತೇಜಸ್ವಿ ವಿ. ಕಟ್ಟೀಮನಿ



ದಾವಣಗೆರೆ, ಅ. 21- ಶಿಕ್ಷಣ ಸಂಸ್ಥೆಗಳನ್ನು ಉದ್ಯೋಗ ಸೃಷ್ಟಿಯ ತಾಣಗಳನ್ನಾಗಿ ಮಾಡುವುದು ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ ಮುಖ್ಯ ಉದ್ದೇಶ ಎಂದು ಆಂಧ್ರಪ್ರದೇಶ ವಿಜಯನಗರ ಕೇಂದ್ರೀಯ ಬುಡಕಟ್ಟು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ತೇಜಸ್ವಿ ವಿ. ಕಟ್ಟೀಮನಿ ಹೇಳಿದರು.

ದಾವಣಗೆರೆ ವಿಶ್ವವಿದ್ಯಾನಿಲಯದ ವತಿಯಿಂದ ಬಾಪೂಜಿ ಎಂಜಿನಿಯರಿಂಗ್ ಮತ್ತು ತಾಂತ್ರಿಕ ಕಾಲೇಜಿನ ಆವರಣ ದಲ್ಲಿನ ಎಸ್.ಎಸ್. ಮಲ್ಲಿಕಾರ್ಜುನ್ ಸಭಾಂಗಣದಲ್ಲಿ ಗುರುವಾರ ಏರ್ಪಡಿಸಿ ದ್ದ 'ರಾಷ್ಟ್ರೀಯ ನೂತನ ಶಿಕ್ಷಣ ನೀತಿ-2020 ವಿಚಾರ ಸಂಕಿರಣ ಮತ್ತು ಸಂವಾದ ಕಾರ್ಯಕ್ರಮ' ಉದ್ಘಾಟಿಸಿ ಅವರು ಮಾತನಾಡಿದರು.

ಪಠ್ಯ ತಯಾರಿಕೆಯಲ್ಲಿ ತೊಡಗಿದವರು ತಮ್ಮ ಕಥೆ, ಕವನಗಳನ್ನೇ ಸೇರಿಸುವುದು ಭಾರತೀಯ ಪರಂಪರೆಯಲ್ಲ. ಪಂಪ, ರನ್ನ, ಕುಮಾರ ವ್ಯಾಸ ಯಾರೂ ತಮ್ಮ ಹೆಸರುಗಳನ್ನು ಬರೆದುಕೊಂಡಿರಲಿಲ್ಲ ಎಂದ ಅವರು, ಪಠ್ಯದಲ್ಲಿ ಸ್ಥಳೀಯ ಇತಿಹಾಸದ ಬಗ್ಗೆ ಮಾಹಿತಿ ಇರಬೇಕು. ಸ್ಥಳೀಯವಾಗಿ ಉತ್ಪತ್ತಿಯಾಗುವ ತ್ಯಾಜ್ಯ ಹಾಗೂ ಅದರ ಬಳಕೆ, ಕೈಗಾರಿಕೆಗಳ ಬೆಳವಣಿಗೆ ಇತ್ಯಾದಿಗಳು ಸಂಶೋಧನೆಯ ಮುಖ್ಯ ಭಾಗವಾಗಬೇಕು ಎಂದು ಅಭಿಪ್ರಾಯಿಸಿದರು.

ಹೊಸ ಶಿಕ್ಷಣ ನೀತಿಯಲ್ಲಿ ತಂತ್ರಜ್ಞಾನದ ಬಳಕೆ, ಸ್ಥಳೀಯ ಸಂಪನ್ಮೂಲಗಳ ಸದುಪಯೋಗ, ಸಾಮಾಜಿಕ ಜವಾಬ್ದಾರಿ, ನೈತಿಕ ಮೌಲ್ಯಗಳ ಜೊತೆಗೆ ಉದ್ಯಮಗಳ ಒಡನಾಟದಲ್ಲಿ ಕಲಿಕೆಯನ್ನು ಒಳಗೊಳ್ಳುವಂತೆ ಮಾಡುತ್ತದೆ. ಸಂಶೋಧನೆ, ಪ್ರಯೋಗ, ಅನುಭವಗಳಿಗೆ ವಿಶೇಷ ಮನ್ನಣೆ ನೀಡಲಾಗುತ್ತದೆ. ಇದರಿಂದ ಪ್ರತಿಯೊಬ್ಬ ವಿದ್ಯಾರ್ಥಿಯೂ ಒಂದಿಲ್ಲಾ ಒಂದು ಕೌಶಲ ಕಲಿತು ಸ್ವಾವಲಂಬಿಯಾಗಲು ಸಹಕಾರಿ ಆಗಲಿದೆ.

ಹೊಸ ಶಿಕ್ಷಣ ನೀತಿಯು ಅಲಾವುದ್ದೀನ್‌ನ ಅದ್ಭುತ ದೀಪವೇನಲ್ಲ. ಆದರೆ (2ನೇ ಪುಟಕ್ಕೆ)

**ಪ್ರತಿ ಮೂರು ತಾಸಿಗೊಮ್ಮೆ ತಂತ್ರ ಜ್ಞಾನ ಬದಲಾಗುವ ಕಾಲದಲ್ಲಿ ಮಂತ್ರದಿಂದ ಮಾವಿನ ಕಾಯಿ ಬೀಳುಸುತ್ತೇವೆ ಎಂದರೆ ಯಾರೂ ನಂಬುವುದಿಲ್ಲ. ಇದು ಕೇವಲ ಭಾಷಣ, ಬೋಧನೆ ಮಾಡುವ ಕಾಲವಲ್ಲ. ಪಠ್ಯ ಪುಸ್ತಕಗಳ ಮೂಲಕ ಕೈ ಕೆಸರು ಮಾಡಿಕೊಳ್ಳುವ ಸಮಾಜ ನಿರ್ಮಾಣದ ಅಗತ್ಯವಿದೆ.**

**- ಪ್ರೊ. ತೇಜಸ್ವಿ ವಿ. ಕಟ್ಟೀಮನಿ,** ಕೇಂದ್ರೀಯ ಬುಡಕಟ್ಟು ವಿ.ವಿ. ಕುಲಪತಿ

# ಮಹಿಳೆಯರ ಆತ್ಮರಕ್ಷಣೆಗೆ ವಿಶೇಷ ತರಬೇತಿ : ಸಿಎಂ

ಬೆಂಗಳೂರು, ಅ. 21 - ಮಹಿಳೆಯರಿಗೆ ಆತ್ಮರಕ್ಷಣೆಗಾಗಿ ವಿಶೇಷ ತರಬೇತಿ ನೀಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೆಎಸ್‌ಆರ್‌ಪಿ ಹಾಗೂ ಪೊಲೀಸ್ ತರಬೇತಿ ಶಾಲೆಯಲ್ಲಿ ಕಾರ್ಯನಿರ್ವಹಿಸಿದ ನಿವೃತ್ತ ಅಧಿಕಾರಿಗಳ ಸೇವೆ ಹಾಗೂ ಅನುಭವ ಬಳಸಿಕೊಂಡು, ತರಬೇತಿ ನೀಡಲಾಗುವುದು ಎಂದರು.

ಸಮಾಜದಲ್ಲಿ ಶಾಂತಿ, ಸುವ್ಯವಸ್ಥೆ, ನಾಗರಿಕರ ಸುರಕ್ಷತೆಯಲ್ಲಿ ಪೊಲೀಸರ ಸೇವೆ, ತ್ಯಾಗವನ್ನು ಸ್ಮರಿಸಬೇಕು, ಪೊಲೀಸರು ಜನಸ್ನೇಹಿಯಾಗಿ ಕೆಲಸ ಮಾಡಬೇಕು ಎಂದರು. (3ನೇ ಪುಟಕ್ಕೆ)

## ಸರ್ಕಾರಿ ಬಸ್‌ಗಳಲ್ಲಿ ಕಾಯಿಪಲ್ಲೆ ಸಾಗಿಸಲು ಅನುಮತಿ : ಕೇಲಗಾರ



ರಾಣೇಬೆನ್ನೂರು, ಅ.21- ರಾಜ್ಯ ಸಾರಿಗೆ ಬಸ್‌ಗಳಲ್ಲಿ ತರಕಾರಿ ಮತ್ತು ಇತರೆ ಸಾಮಗ್ರಿಗಳನ್ನು ಸಾಗಿಸಲು ಅನುಮತಿ ಕೊಡಲಾಗುವುದು ಎಂದು ವಾಯುವ್ಯ ಸಾರಿಗೆ ನಿಗಮದ ಉಪಾಧ್ಯಕ್ಷ ಡಾ. ಬಸವರಾಜ ಕೇಲಗಾರ ತಿಳಿಸಿದ್ದಾರೆ.

ಇಂದಿಲ್ಲಿ ಮಾಧ್ಯಮದವರೊಂದಿಗೆ ಮಾತನಾಡುತ್ತಿದ್ದ ಅವರು, ಕೋವಿಡ್ ಸಂಕಷ್ಟದಿಂದ ಸಂಸ್ಥೆಗಳು 4 ಸಾವಿರ ಕೋಟಿ ರೂ. ನಷ್ಟ ಅನುಭವಿಸುತ್ತಿವೆ. ಸರ್ಕಾರ ಈಗ ಕೊಟ್ಟಿರುವ ಅನುದಾನದಿಂದ ನೌಕರರಿಗೆ ಅರ್ಧ ಸಂಬಳ ಕೊಡಲಾಗುತ್ತಿದ್ದು, ಮುಂದಿನ ದಿನಗಳಲ್ಲಿ ಉಳಿದ ಹಣ ಹಾಗೂ ನಿವೃತ್ತಿ ವೇತನದ ಜೊತೆಗೆ ಇತರೆ ಭತ್ಯೆಗಳನ್ನು ನೀಡಲಾಗುವುದು ಎಂದು ವಿವರಿಸಿದರು.

ಡೀಸೆಲ್ ಸೆಸ್ ಕಡಿಮೆ ಮಾಡುವ, ಕಾರ್ಗೋ (2ನೇ ಪುಟಕ್ಕೆ)

## ಪೆಟ್ರೋಲ್, ಡೀಸೆಲ್ 35 ಪೈಸೆ ಏರಿಕೆ

ನವದೆಹಲಿ, ಅ. 21 – ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಯನ್ನು ಗುರುವಾರ ಮತ್ತೆ 35 ಪೈಸೆಯಷ್ಟು ಹೆಚ್ಚಿಸಲಾಗಿದೆ. ಸತತ ಎರಡನೇ ದಿನ ತೈಲ ಬೆಲೆಯಲ್ಲಿ ಏರಿಕೆಯಾಗಿದೆ. ರಾಜಸ್ಥಾನದ ಗಂಗಾನಗರದಲ್ಲಿ ಪೆಟ್ರೋಲ್ ಬೆಲೆ ಲೀಟರ್‌ಗೆ ಅತಿ ಹೆಚ್ಚಿನ 118.59 ರೂ. ಹಾಗೂ ಡೀಸೆಲ್ ಬೆಲೆ ಲೀಟರ್‌ಗೆ 109.41 ರೂ. ಆಗಿದೆ.

# ಹರಿಹರ ಜಲಸಿರಿ ಕಾಮಗಾರಿ ಪೂರ್ಣ ಕಳಪೆ


ಹರಿಹರ, ಅ.21- ನಗರದಲ್ಲಿ ನಡೆಯುತ್ತಿರುವ ಯುಜಿಡಿ ಮತ್ತು ಜಲಸಿರಿ ಯೋಜನೆಯ ಕಾಮಗಾರಿ ಕಳಪೆ ಮಟ್ಟದಲ್ಲಿ ನಡೆಯುತ್ತಿದೆ. ಯೋಜನೆ ಪೂರ್ಣಗೊಳ್ಳದಿದ್ದರೂ ಗುತ್ತಿಗೆದಾರರಿಗೆ 62 ಕೋಟಿ ರೂ.ಗಳ ಸಂಪೂರ್ಣ ಹಣವನ್ನು ನೀಡಲಾಗಿದೆ. ಹೀಗಾಗಿ ಈ ಕಾಮಗಾರಿ ಬಗ್ಗೆ ಸಿಓಡಿ ಅಧಿಕಾರಿಗಳ ಗಮನಕ್ಕೆ ತರಲಾಗುತ್ತದೆ ಎಂದು ಶಾಸಕ ಎಸ್. ರಾಮಪ್ಪ ಹೇಳಿದರು.

ಇಲ್ಲಿನ ನಗರಸಭೆ ಸಭಾಂಗಣದಲ್ಲಿ ನಗರಸಭೆ ಅಧ್ಯಕ್ಷರಾದ ಶ್ರೀಮತಿ ರತ್ನ ಡಿ. ಉಜ್ಜೇಶ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಮಾತನಾಡಿದ ಅವರು, ಪೌರ ಕಾರ್ಮಿಕರಿಗೆ ವಿತರಿಸಿರುವ ಸೈಕಲ್ ಹಾಗೂ ಸಾರ್ವಜನಿಕರಿಗೆ ವಿತರಿಸಿರುವ ಹೊಲಿಗೆ ಯಂತ್ರದಲ್ಲೂ ಅಕ್ರಮ ನಡೆದಿದ್ದು ತನಿಖೆ ನಡೆಸಬೇಕು ಎಂದು ಆಗ್ರಹಿಸಿದರು.

ನಗರಸಭೆ ಸದಸ್ಯ ಶಂಕರ್ ಖಟಾವ್ಕರ್ ಮಾತನಾಡಿ, ನಗರದ ಅಭಿವೃದ್ಧಿಗೆ ಸರ್ಕಾರದ ಮಾರ್ಗಸೂಚಿ ಪ್ರಕಾರ ಪ್ರತಿ ತಿಂಗಳು ಸಭೆ ನಡೆಸಿ ಕುಂದುಕೊರತೆ ನಿವಾರಿಸಲು ಮುಂದಾಗಬೇಕು. ಆದರೆ ಕಳೆದ 5 ತಿಂಗಳ ಕಾಲ ವಿಳಂಬ ಮಾಡಲಾಗಿದೆ. ಸದಸ್ಯರು ಆಯ್ಕೆಯಾಗಿ ಎರಡು ವರ್ಷವಾದರೂ ನಗರದ ಯಾವುದೇ ವಾರ್ಡಿನಲ್ಲಿ ಅಭಿವೃದ್ಧಿ ಕೆಲಸಗಳು ನಡೆಯುತ್ತಿಲ್ಲ ಎಂದರು.

ನಗರಸಭೆಯಲ್ಲಿ ವ್ಯಾಪಕವಾಗಿ ಭ್ರಷ್ಟಾಚಾರ ನಡೆದರೂ ಕೇಳುವವರಿಲ್ಲ. ಕಳಪೆ (2ನೇ ಪುಟಕ್ಕೆ)

## ಸಿಓಡಿ ಗಮನಕ್ಕೆ ಶಾಸಕ ರಾಮಪ್ಪ



**ಹರಿಹರ ನಗರಸಭೆ ಸಾಮಾನ್ಯ ಸಭೆಯಲ್ಲಿ ಮಾತನಾಡಿದ ಶಾಸಕ ಎಸ್. ರಾಮಪ್ಪ, ಕಳಪೆ ಕಾಮಗಾರಿ ಬಗ್ಗೆ ಸಿಓಡಿ ಅಧಿಕಾರಿಗಳ ಗಮನಕ್ಕೆ ತರಲಾಗುವುದೆಂದು ಎಚ್ಚರಿಸಿದರು.**

# ಲಸಿಕೆ ಪಡೆಯದಿದ್ದರೂ ಪ್ರಮಾಣ ಪತ್ರ !


ದಾವಣಗೆರೆ, ಅ. 21- ನೀವು ಕೊರೊನಾ ಲಸಿಕೆ ಮೊದಲ ಡೋಸ್ ಹಾಕಿಸಿಕೊಂಡಿದ್ದೀರಾ? ಎರಡನೇ ಡೋಸ್ ತೆಗೆದುಕೊಳ್ಳುವುದು ಕೆಲ ದಿನ ತಡವಾಗಿದೆಯೇ? ಹಾಗಾದರೆ 'ನೀವು ಎರಡನೇ ಡೋಸ್ ಲಸಿಕೆಯನ್ನು ಯಶಸ್ವಿಯಾಗಿ ಪಡೆದಿದ್ದೀರಿ ನಿಮ್ಮ ಪ್ರಮಾಣ ಪತ್ರವನ್ನು ಡೌನ್ ಲೋಡ್ ಮಾಡಿಕೊಳ್ಳಿ' ಎಂಬ ಇಂಗ್ಲಿಷ್ ಸಂದೇಶವೊಂದು ನಿಮ್ಮ ಮೊಬೈಲ್‌ಗೆ ಬಂದಿರಬಹುದು ಅಥವಾ ಶೀಘ್ರವೇ ಬರಬಹುದು.

ಹೌದು, ಇತ್ತೀಚಿನ ದಿನಗಳಲ್ಲಿ ಕೋವಿಶೀಲ್ಡ್ ಅಥವಾ ಕೋವ್ಯಾಕ್ಸಿನ್ ಲಸಿಕೆ ಮೊದಲ ಡೋಸ್ ಪಡೆದು, ಎರಡನೇ ಡೋಸ್ ಪಡೆಯದ ಅನೇಕರಿಗೆ ಈ ರೀತಿಯ ಸಂದೇಶಗಳು ಆರೋಗ್ಯ ಇಲಾಖೆಯಿಂದಲೇ ಬರುತ್ತಿವೆ. ಎರಡನೇ ಡೋಸ್ ಪಡೆಯಬೇಕೆಂದಿದ್ದವರು ಈ ಸಂದೇಶ ನೋಡಿ ತಬ್ಬಿಬ್ಬಾಗುತ್ತಿದ್ದಾರೆ.

ಅಷ್ಟೇ ಅಲ್ಲ, ಆಧಾರ್ ಸಂಖ್ಯೆ ಅಥವಾ ಮೊಬೈಲ್ ನಂಬರ್ ನೀಡಿ ಮೊದಲ ಡೋಸ್ ಪಡೆದು ಎರಡನೇ ಡೋಸ್ ಲಸಿಕೆ ಪಡೆಯಲು ಬಂದ ಕೆಲವರಿಗೆ ತಾಂತ್ರಿಕ ಕಾರಣ ಹೇಳಿ ಮತ್ತೆ ಮೊದಲ ಡೋಸ್ ಎಂದೇ ಲಸಿಕೆ ಹಾಕಲಾಗಿದೆ. ಅಂತವರಿಗೂ ನಿಮ್ಮ ಎರಡನೇ ಡೋಸ್ ಲಸಿಕೆ ಯಶಸ್ವಿ ಎಂಬ ಸಂದೇಶಗಳು ಬಂದ ಉದಾಹರಣೆಗಳಿವೆ. ಈ ಬಗ್ಗೆ ಅಧಿಕಾರಿಗಳು ನೀಡುವ ಉತ್ತರ ಮಾತ್ರ 'ತಾಂತ್ರಿಕ ಕಾರಣ'

ಕೊರೊನಾ ನಿವಾರಣೆಗಾಗಿ ಜಿಲ್ಲಾಡಳಿತ ಹಾಗೂ ಆರೋಗ್ಯ ಇಲಾಖೆ ಅಧಿಕಾರಿಗಳು ಶ್ರಮಿಸುತ್ತಿರುವ ಪರಿಣಾಮ ಸದ್ಯ ಜಿಲ್ಲೆಯಲ್ಲಿ ಸೋಂಕು ಇಳಿಕೆಯಾಗಿದೆ. ಶೇ.80ರಷ್ಟು ಜನ ಲಸಿಕೆ ಪಡೆದಿದ್ದಾರೆ.

ಏತನ್ಮಧ್ಯೆ ಲಸಿಕೆ ಪಡೆಯದಿದ್ದರೂ ಬರುತ್ತಿರುವ ಈ ಸಂದೇಶಗಳು ಮೇಲಾಧಿಕಾರಿಗಳ ಒತ್ತಡ ಅಥವಾ ಅಂಕಿ-ಅಂಶಗಳಲ್ಲಿ ಗುರಿ (3ನೇ ಪುಟಕ್ಕೆ)




**ಭಗತ್ ಸಿಂಗ್ ನಗರದ ರುದ್ರಮ್ಮ ಎಂಬುವವರು ಆಗಸ್ಟ್ 16ರಂದು ಕೋವ್ಯಾಕ್ಸಿನ್ ಲಸಿಕೆ ಪಡೆದಿದ್ದರು. ಕಾರಣಾಂತರಗಳಿಂದ ಎರಡನೇ ಡೋಸ್ ಲಸಿಕೆ ಪಡೆಯುವುದು ವಿಳಂಬವಾಯಿತು. ಆದರೆ ಅಕ್ಟೋಬರ್ 12 ರಂದು ಎರಡನೇ ಡೋಸ್ ಪಡೆದಿರುವ ಬಗ್ಗೆ ಸಂದೇಶ ಬಂದಿದೆ.**

## '2ನೇ ಡೋಸ್ ಯಶಸ್ವಿ' ಸಂದೇಶಕ್ಕೆ ಜನತೆ ತಬ್ಬಿಬ್ಬು


## ಸವಿನೆನಪು



ದಿ|| ಶ್ರೀ ಲಾಲ್ಯಾನಾಯ್ಕ B.E. (Civil)

ನಿವೃತ್ತ ಕಾರ್ಯಪಾಲಕ ಅಭಿಯಂತರರು

ನಿಧನ : 22.10.2019

ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳಾದವು, ಸದಾ ನಿಮ್ಮ ಸ್ಮರಣೆ ಮತ್ತು ನೀವು ತೋರಿದ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ...

ಪುತ್ರರು-ಸೊಸೆ :
- ✦ ವಿಶ್ವನಾಥ್ ಜೆ.ಎಲ್. ಮತ್ತು ಶ್ರೀಮತಿ ಶ್ರೀದೇವಿ ಸಿ.ಎನ್.
- ✦ ಅಮರನಾಥ್ ಜೆ.ಎಲ್.

ಪುತ್ರಿಯರು-ಅಳಿಯಂದಿರು :
- ✦ ಶ್ರೀಮತಿ ರಜನಿ ಎನ್. ನಾಯ್ಕ ಮತ್ತು ಎನ್.ಯು. ನಾಗರಾಜ್
- ✦ ಶ್ರೀಮತಿ ಕಾತ್ಯಾಯಿನಿ ಜೆ.ಎಲ್. ಮತ್ತು ಸುರೇಶ್ ಎಲ್.
- ✦ ಶ್ರೀಮತಿ ಶಾಲಿನಿ ಜೆ.ಎಲ್. ಮತ್ತು ಸಂತೋಷ್ ರಾಠೋಡ್

ಮೊಮ್ಮಕ್ಕಳು :
- ✦ ದೇವ್ ಎನ್. ನಾಯ್ಕ್ ✦ ಶ್ರೇಷ್ಠಾ ಎನ್. ನಾಯ್ಕ್
- ✦ ಅರ್ಜುನ್‌ಲಾಲ್ ಪವಾರ್ ✦ ಆದಿತ್ಯ ಎಸ್.

# ಹರಿಹರದಲ್ಲಿ ಕೊರೊನಾ ವಾರಿಯರ್ಸ್‌ಗೆ ಬಿಜೆಪಿ ಸನ್ಮಾನ



ಹರಿಹರ, ಅ.21 - ದೇಶದಲ್ಲಿ ಇದುವರೆಗೆ ದಾಖಲೆಯ 100 ಕೋಟಿ ಕೋವಿಡ್ ಲಸಿಕೆಗಳನ್ನು ಒದಗಿಸಲಾಗಿದೆ. ಇದು ಪ್ರಧಾನಮಂತ್ರಿ ನರೇಂದ್ರ ಮೋದಿಯವರ ದಕ್ಷ ನಾಯಕತ್ವ, ಆರೋಗ್ಯ ಕಾರ್ಯಕರ್ತರ ಶ್ರಮ ಮತ್ತು ಶಿಸ್ತಿನ ನಾಗರಿಕರ ಭಾಗವಹಿಸುವಿಕೆಯ ಫಲಿತಾಂಶವಾಗಿದೆ ಎಂದು ಬಿಜೆಪಿ ಜಿಲ್ಲಾ ಅಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ ಹೇಳಿದರು.

ನಗರದ ಸಾರ್ವಜನಿಕ ಸರ್ಕಾರಿ ಆಸ್ಪತ್ರೆ ಆವರಣದಲ್ಲಿ ಕೊರೊನಾ ಸಂದರ್ಭದಲ್ಲಿ ಕಾರ್ಯನಿರ್ವಹಿಸಿದ ಸಿಬ್ಬಂದಿಗಳಿಗೆ ಬಿಜೆಪಿ ನಗರ ಘಟಕದ ವತಿಯಿಂದ ಇಂದು ಹಮ್ಮಿಕೊಂಡಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಲಸಿಕೆಯ ದಾಖಲೆಯಲ್ಲಿ ಈ ಸಾಂಕ್ರಾಮಿಕ ಯುಗದಲ್ಲಿ ಜನರು ಶಿಸ್ತನ್ನು ಕಾಪಾಡಿಕೊಳ್ಳುವ ರೀತಿ, ಕೊರೊನಾದ ಎಲ್ಲಾ ಮಾರ್ಗಸೂಚಿಗಳನ್ನು ಅನುಸರಿಸಿ ಮತ್ತು ಅವರ ಇಚ್ಛಾ ಶಕ್ತಿ, ಸ್ವಯಂ ಶಕ್ತಿ ಮತ್ತು ಅವರ ನಂಬಿಕೆಯನ್ನು ಉಳಿಸಿಕೊಂಡಿದ್ದಾರೆ ಎಂದು ಹೇಳಿದರು.

ಕೋವಿಡ್ ವಾರಿಯರ್ಸ್‌ಗಳಾಗಿ ಅನೇಕರು ದುಡಿದಿದ್ದರು. ಅಂತಹ ಕೊರೊನಾ ವಾರಿಯರ್‌ಗಳನ್ನು ಗುರುತಿಸಿ ಅವರನ್ನು ಗೌರವಿಸುವ ಕೆಲಸಗಳು ಪಕ್ಷದಿಂದ ನಡೆಯುತ್ತಿವೆ. ಅದರಂತೆ ವೈದ್ಯರು, ಆಸ್ಪತ್ರೆ ಸಿಬ್ಬಂದಿಗಳನ್ನು ಗುರುತಿಸಿ ಸನ್ಮಾನ ಮಾಡುತ್ತಿದ್ದೇವೆ ಎಂದರು.

ಬಿಜೆಪಿ ನಗರ ಘಟಕದ ಅಧ್ಯಕ್ಷ ಅಜಿತ್ ಸಾವಂತ್ ಮಾತನಾಡಿ, ಕೊರೊನಾದಂತಹ ಸಂದರ್ಭದಲ್ಲಿ ಎಲ್ಲರೂ ಸಹ ಬೆಚ್ಚಗೆ ಮನೆಯೊಳಗೆ ಬದುಕುಳಿದರೆ ಸಾಕು ಎಂದು ಕುಳಿತಿದ್ದರೆ ಕೊರೊನಾ ವಾರಿಯರ್‌ಗಳಾಗಿ ಸೇವೆ ಸಲ್ಲಿಸಿದಂತಹ ವೈದ್ಯರು, ಆಸ್ಪತ್ರೆ ಸಿಬ್ಬಂದಿಗಳು, ಆಶಾ ಕಾರ್ಯಕರ್ತರು ಇನ್ನೂ ಅನೇಕ ಮಹನೀಯರಿಗೆ ನಾವು ಎಷ್ಟೇ ಧನ್ಯವಾದ ಹೇಳಿದರೂ ಕಡಿಮೆ ಎಂದರು.

ಈ ಸಂದರ್ಭದಲ್ಲಿ ಆಡಳಿತ ಮುಖ್ಯ ವೈದ್ಯಾಧಿಕಾರಿ ಡಾ.ಎಲ್. ಹನುಮನಾಯ್ಕ, ವೈದ್ಯರಾದ ಡಾ.ಸವಿತಾ, ಡಾ.ಮಮತ, ಡಾ. ಕಿರಣ್, ಡಾ. ಭಕ್ತವತ್ಸಲ, ಡಾ. ನಾಗವೇಣಿ, ಡಾ. ರಾಜಪ್ಪ, ಸಿಬ್ಬಂದಿಗಳಾದ ಶೋಭಾ ದೊಡ್ಡಮನಿ, ಉಮ್ಲನಾಯ್ಕ, ತಿಪ್ಪೇಸ್ವಾಮಿ, ಮಂಜುನಾಥ್, ಅವರನ್ನು ಸನ್ಮಾನಿಸಿದರು.

ಈ ವೇಳೆ ನಗರ ಘಟಕ ಪ್ರಧಾನ ಕಾರ್ಯದರ್ಶಿ ಮಂಜಾನಾಯ್ಕ ಹೆಚ್, ಉಪಾಧ್ಯಕ್ಷ ತುಳಜಪ್ಪ ಭೂತೆ, ಯುವ ಮೋರ್ಚಾ ಅಧ್ಯಕ್ಷ ರವಿ ರಾಯ್ಕರ್, ಎಸ್‌ಟಿ ಮೋರ್ಚಾ ಅಧ್ಯಕ್ಷ ರವಿ ತಾವರಗಿ, ಮುಖಂಡರಾದ ಆನಂದ್ ಕುಮಾರ್, ಸುನೀಲ್ ಕುಮಾರ್, ಆನಂದ ಪಾಳೇಗಾರ್, ರಾಜಣ್ಣ, ಅನಿತಾ ಸಿಂಧೆ, ನಲ್ಲಿ ಮಂಜುನಾಥ, ಗಿರೀಶ್, ಮೋಹನ್ ಕುಲಕರ್ಣಿ, ಗಣೇಶ್, ಶಾಂತರಾಜ್, ಕೃಷ್ಣ, ಭರತ್, ಹಾಗೂ ಮತ್ತಿತರಿದ್ದರು.

# ಸಕ್ರಿಯವಾಗದ ಬಿಎಸ್‌ವೈ

**(1ನೇ ಪುಟದಿಂದ)** ಹೊಣೆಗಾರಿಕೆ ವಹಿಸಿ, ಪಕ್ಷದ ಅಭ್ಯರ್ಥಿಗಳ ಗೆಲುವಿಗೆ ಸಹಕರಿಸುವಂತೆ ಮನವಿ ಮಾಡಿದ್ದಾರೆ.

ವರಿಷ್ಠರ ಸಲಹೆಯಂತೆ ಮುಖ್ಯ ಮಂತ್ರಿ ಬಸವರಾಜ ಬೊಮ್ಮಾಯಿ, ಎರಡು ದಿನಗಳ ದೆಹಲಿ ಭೇಟಿ ರದ್ದುಪಡಿಸಿದ್ದಲ್ಲದೆ, ಬೆಂಗಳೂರಿನಲ್ಲಿನ ಅಧಿಕೃತ ಕಾರ್ಯಕ್ರಮಗಳನ್ನೂ ರದ್ದು ಮಾಡಿ, ಚುನಾವಣಾ ಪ್ರಚಾರಕ್ಕೆ ತೆರಳಿದರು.

ಅಷ್ಟೇ ಅಲ್ಲ, ತಮ್ಮ ಎಲ್ಲಾ ಸಂಪುಟ ಸಹೋದ್ಯೋಗಿಗಳಿಗೆ ಎರಡೂ ಕ್ಷೇತ್ರಗಳನ್ನು ಹಂಚಿ, ಉಪಚುನಾವಣೆ ಮುಗಿಯುವವರೆಗೂ ಕ್ಷೇತ್ರಗಳಲ್ಲೇ ಬಿಡಾರ ಹೂಡಿ, ಮತದಾರರ ಓಲೈಕೆಯಲ್ಲಿ ತೊಡಗಿಸಿಕೊಳ್ಳುವಂತೆ ಸೂಚಿಸಿದ್ದಾರೆ.

ಯಡಿಯೂರಪ್ಪ ಅವರು, ಎರಡೂ ಕ್ಷೇತ್ರಗಳಲ್ಲೂ ಸುತ್ತಾಡಿ ಪ್ರಚಾರ ಕೈಗೊಂಡಿದ್ದರೂ, ಎಲ್ಲಿಯೂ ಮತದಾರರನ್ನು ಒಲೈಸುವಷ್ಟು ಬಿರುಸಿನ ಪ್ರಚಾರ ಕೈಗೊಂಡಿಲ್ಲ.

ಇದರಿಂದ ಮುಖ್ಯಮಂತ್ರಿ ಅವರು ತಳಮಳಗೊಂಡು ಎರಡೂ ಕ್ಷೇತ್ರಗಳ ಗೆಲುವನ್ನುಪ್ರತಿಷ್ಠೆಯಾಗಿ ತೆಗೆದುಕೊಂಡಿದ್ದಲ್ಲದೆ ತಮ್ಮ ಸಹೋದ್ಯೋಗಿಗಳೊಂದಿಗೆ ನಿರಂತರ ಸಂಪರ್ಕ ಇಟ್ಟುಕೊಂಡು ಬಿರುಸಿನ ಪ್ರಚಾರ ಕೈಗೊಂಡಿದ್ದಾರೆ.

ಇದಕ್ಕೂ ಮಿಗಿಲಾಗಿ ಎರಡೂ ಕ್ಷೇತ್ರಗಳಲ್ಲಿ ಪಕ್ಷದ ಸರ್ಕಾರ ಕೈಗೊಂಡ ಅಭಿವೃದ್ಧಿ ಕಾರ್ಯಗಳ ಕುರಿತು ವಿವರ ನೀಡುವುದಲ್ಲದೆ, ಮುಂದಿನ ದಿನಗಳಲ್ಲಿ ಕೈಗೊಳ್ಳಲಿರುವ ಯೋಜನೆಗಳ ಬಗ್ಗೆಯೂ ಪ್ರತ್ಯೇಕ ಪ್ರಣಾಳಿಕೆ ಬಿಡುಗಡೆಗೆ ಮುಂದಾಗಿದ್ದಾರೆ.

# ಬಸಾಪುರದ ಸರ್ಕಾರಿ ಶಾಲೆಯಲ್ಲಿ ಅಕ್ಷರ ದಾಸೋಹ, ಬಿಸಿಯೂಟಕ್ಕೆ ಚಾಲನೆ



ದಾವಣಗೆರೆ, ಅ.21- ಮಹಾನಗರ ಪಾಲಿಕೆಯ 21ನೇ ವಾರ್ಡ್ ಬಸಾಪುರದ ಸರ್ಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಯ ಎಸ್.ಡಿ.ಎಂ.ಸಿ ಸದಸ್ಯರುಗಳು ಸ್ವತಃ ತಾವುಗಳೇ ಶಾಲೆಗೆ ಬಾಳೆ ಕಂಬ, ಮಾವು - ಹೂವಿನ ತೋರಣ ಕಟ್ಟಿ ಒಂದೂವರೆ ವರ್ಷಗಳ ನಂತರ ಪ್ರಾರಂಭವಾದ ಅಕ್ಷರ ದಾಸೋಹ ಬಿಸಿಯೂಟ ಕಾರ್ಯಕ್ರಮಕ್ಕೆ ಸಿದ್ಧತೆ ನಡೆಸಿದರು.

ಸದಸ್ಯರು ಸ್ವಂತ ಖರ್ಚಿನಲ್ಲಿ ಮೊದಲನೆಯ ದಿನ ಮಕ್ಕಳಿಗೆ ಸಿಹಿ ಊಟ ವ್ಯವಸ್ಥೆ ಮಾಡಿದ್ದು ಕಂಡು ಎಸ್.ಡಿ.ಎಂ.ಸಿ ಸದಸ್ಯರುಗಳಿಗೆ ಶಾಲೆಯ ಮತ್ತು ಮಕ್ಕಳ ಬಗ್ಗೆ ಇರುವ ಆಸಕ್ತಿಗೆ ಅಧಿಕಾರಿಗಳು ಹರ್ಷ ವ್ಯಕ್ತಪಡಿಸಿದರು.

ಗ್ರಾಮದ ಮುಖಂಡರಾದ ಎಂ.ಎಸ್. ಕೊಟ್ರಯ್ಯ ಅಕ್ಷರ ದಾಸೋಹದ ಬಿಸಿಯೂಟ ಯೋಜನೆಗೆ ಚಾಲನೆ ನೀಡಿದರು. ದಾವಣಗೆರೆ ಉತ್ತರ ವಲಯದ ಶಿಕ್ಷಣ ಸಂಯೋಜಕರಾದ ಶ್ರೀಮತಿ ಶಿವಲೀಲಾ, ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳಾದ ಶ್ರೀಮತಿ ಶಶಿಕಲಾ, ಶ್ರೀಮತಿ ಶೋಭಾ, ಆನೆಕೊಂಡ ಕ್ಲಸ್ಟರ್ ಸಮೂಹ ಸಂಪನ್ಮೂಲ ವ್ಯಕ್ತಿಯಾದ ಶೌಕತ್ ಅಲಿ, ಕೆ.ಎಲ್.ಹರೀಶ್, ಪ್ರಭಾರಿ ಮುಖ್ಯೋಪಾಧ್ಯಾಯ ಸಂತೋಷ್ ಕುಮಾರ್, ಎಸ್.ಡಿ.ಎಂ.ಸಿ ಉಪಾಧ್ಯಕ್ಷರಾದ ನಾಗವೇಣಿ, ಸದಸ್ಯರುಗಳಾದ ತಿಪ್ಪೇಶ್, ಮಹಾಂತೇಶ್, ನಿಂಗಪ್ಪ, ರಮೇಶ್, ಗುರುಸಿದ್ದಯ್ಯ, ಚಂದ್ರಶೇಖರ್, ಸಂತೋಷ್, ದೇವೀರಮ್ಮ, ಆಶಾ, ಸುನೀತಾ, ಭವ್ಯ, ಸುಮಿತ್ರ, ಶಕುಂತಲಾ, ಪುಷ್ಪ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ವೀರಶೈವ ಸಮಾಜವನ್ನು ಒಳ ಪಂಗಡಗಳ ಭೇದವಿಲ್ಲದೆ ಪಕ್ಷಾತೀತವಾಗಿ ಸಂಘಟಿಸುವೆ

## ಹರಪನಹಳ್ಳಿ ತಾ. ವೀರಶೈವ ಮಹಾಸಭಾದ ನೂತನ ಉಪಾಧ್ಯಕ್ಷ ಎಂ.ಬಿ.ಯಶವಂತಗೌಡ ಭರವಸೆ



ಹರಪನಹಳ್ಳಿ, ಅ.21- ವೀರಶೈವ ಸಮಾಜದಲ್ಲಿನ ಒಳ ಪಂಗಡಗಳ ಭೇದವಿಲ್ಲದೆ ಎಲ್ಲರನ್ನೂ ಒಗ್ಗೂಡಿಸಿ ಪ್ರೀತಿ, ವಿಶ್ವಾಸದಿಂದ ಸಮಾಜವನ್ನು ಪಕ್ಷಾತೀತವಾಗಿ ಸಂಘಟಿಸುವ ಮೂಲಕ ಅಖಿಲ ಭಾರತ ವೀರಶೈವ ಮಹಾಸಭಾವನ್ನು ಬಲಪಡಿಸುತ್ತೇನೆ ಎಂದು ಅಖಿಲ ಭಾರತ ವೀರಶೈವ ಮಹಾಸಭಾದ ತಾಲ್ಲೂಕು ನೂತನ ಉಪಾಧ್ಯಕ್ಷ ಎಂ.ಬಿ. ಯಶವಂತಗೌಡ ಹೇಳಿದರು.

ಪಟ್ಟಣದ ರಾಜಾ ಸೋಮಶೇಖರ ನಾಯಕ ಶಾಲಾ ಆವರಣದಲ್ಲಿ ಜರುಗಿದ ಪದಗ್ರಹಣ ಸಮಾರಂಭದಲ್ಲಿ ಅಧಿಕಾರ ಸ್ವೀಕರಿಸಿ ಅವರು ಮಾತನಾಡಿದರು.

ಜಿಲ್ಲಾ ಪಂಚಾಯ್ತಿ ಮಾಜಿ ಸದಸ್ಯರಾಗಿದ್ದ ಎಂ.ಟಿ. ಬಸವನಗೌಡ ಅವರ ನಿಧನದ ಬಳಿಕ ನನಗೆ ಕೊಟ್ಟಿರುವ ಜವಾಬ್ದಾರಿಯನ್ನು ಹಿರಿಯರು, ಅನುಭವಿಗಳ ಮಾರ್ಗದರ್ಶನದಲ್ಲಿ ಸಮಾಜ ಸಂಘಟನೆಗೆ ಶ್ರಮಿಸುತ್ತೇನೆ. ಈಗಾಗಲೇ ತಾಲ್ಲೂಕಿನ ಹಲವು ಗ್ರಾಮಗಳಿಗೆ ತೆರಳಿ ಸಮಾಜ ಸಂಘಟನೆ ಮತ್ತು ಅಲ್ಲಿಯ ಕಷ್ಟ ಸುಖಗಳಿಗೆ ಸ್ಪಂದಿಸುವ ಕೆಲಸ ಮಾಡುತ್ತಿದ್ದೇನೆ. ತಾಲ್ಲೂಕಿನ ಪದಾಧಿಕಾರಿಗಳು ಸಮಾಜದ ಬಾಂಧವರು ಸಮಾಜದ ಸಂಘಟನೆಗೆ ಕೈ ಜೋಡಿಸಬೇಕು ಎಂದು ಅವರು ಮನವಿ ಮಾಡಿದರು.

ಅಖಿಲ ಭಾರತ ವೀರಶೈವ ಮಹಾಸಭಾದ ತಾಲ್ಲೂಕು ಅಧ್ಯಕ್ಷ ಎಂ. ರಾಜಶೇಖರ್ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಉಪಾಧ್ಯಕ್ಷ ಪ್ರಭಾ ಅಜ್ಜಣ್ಣ, ಕಾರ್ಯದರ್ಶಿ ಮಲ್ಲಿಕಾರ್ಜುನಸ್ವಾಮಿ, ಗೊಂಗಡಿ ನಾಗರಾಜ, ಕಾರ್ಯಕಾರಿ ಸಮಿತಿ ಸದಸ್ಯರುಗಳಾದ ಪುಷ್ಪಾ ದಿವಾಕರ್, ಕಾನಹಳ್ಳಿ ರುದ್ರಪ್ಪ, ಬಸವರಾಜ, ಗುರುಸಿದ್ದನಗೌಡ, ಹಂಗ್ಲಿ ಮಂಜುನಾಥ್, ಬೆನ್ನೂರು ವೀಣಾ, ಅಕ್ಕಮಹಾದೇವಿ, ಪ್ರಭಾಕರ್, ಶೋಭಾ ಚಂದ್ರಶೇಖರ್, ಕೆ.ಎಂ. ಉಮಾದೇವಿ, ಕರಿಬಸಪ್ಪ, ದೊಡ್ಡ ಬಸವರಾಜ ಮುಲಾಲಿ, ಪಿ. ಕರಿಬಸಪ್ಪ, ಮಟ್ಟಿ ಮೃತ್ಯುಂಜಯ, ವಕೀಲರುಗಳಾದ ಮತ್ತಿಹಳ್ಳಿ ಅಜ್ಜಣ್ಣ, ಗಂಗಾಧರ ಗುರುಮಠ್, ಪ್ರಕಾಶ ಪಟೇಲ್, ಪಿ. ಬಸವನಗೌಡ ಇನ್ನಿತರರಿದ್ದರು.

# ಲಿಫ್ಟ್ ಗುಂಡಿಗೆ ಬಿದ್ದು ಬಾಲಕ ಸಾವು

ದಾವಣಗೆರೆ, ಅ.21- ನಿರ್ಮಾಣ ಹಂತದಲ್ಲಿದ್ದ ಕಟ್ಟಡದ ಲಿಫ್ಟ್‌ನ ಗುಂಡಿಗೆ ಬಿದ್ದು ಬಾಲಕ ಮೃತಪಟ್ಟಿರುವ ಘಟನೆ ನಗರದಲ್ಲಿ ನಡೆದಿದೆ.

ಸರಸ್ವತಿ ನಗರ 'ಎ' ಬ್ಲಾಕ್‌ನ ವಾಸಿ, ಎಲ್‌ಐಸಿ ಮ್ಯಾನೇಜರ್ ಡಿ. ಪ್ರಕಾಶ್ ನಾಯಕ್ ಮತ್ತು ವೀಣಾ ದಂಪತಿಯ ಮಗ ಮೋಹಿತ್ (6) ಮೃತಪಟ್ಟ ಬಾಲಕ.

ಆಟವಾಡುತ್ತಾ ಹೊರಗೆ ಹೋಗಿದ್ದ ಮೋಹಿತ್ ನಾಪತ್ತೆಯಾಗಿದ್ದ. ಸ್ಥಳೀಯರೆಲ್ಲಾ ಸೇರಿ ಹುಡುಕಾಟ ನಡೆಸಿದ್ದರು. ಪಕ್ಕದಲ್ಲಿ ನಿರ್ಮಾಣ ಹಂತದಲ್ಲಿದ್ದ ಮನೆಯೊಂದರ ಲಿಫ್ಟ್ ಗುಂಡಿಗೆ ಬಿದ್ದು ಮೃತಪಟ್ಟಿರುವ ಸ್ಥಿತಿಯಲ್ಲಿರುವ ಬಾಲಕ ಪತ್ತೆಯಾಗಿದ್ದಾನೆ.

ಲಿಫ್ಟ್ ಗುಂಡಿಗೆ ನೀರು ತುಂಬಿಸಿ ಅಡ್ಡಲಾಗಿ ಏನೂ ಇಡದೇ ಇದ್ದಿದ್ದರಿಂದ ಬಾಲಕ ಬಿದ್ದು ಮೃತಪಟ್ಟಿದ್ದಾನೆ ಎಂದು ಪ್ರಕಾಶ್ ನಾಯಕ್ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ.

ಈ ಸಂಬಂಧ ಕೆಟಿಜೆ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಮಲೇಬೆನ್ನೂರಿನಲ್ಲಿ ಇಂದು ವಾರಿಯರ್ಸ್‌ಗೆ ಸನ್ಮಾನ

ಸಮುದಾಯ ಆರೋಗ್ಯ ಕೇಂದ್ರದಲ್ಲಿ ಇಂದು ಬೆಳಿಗ್ಗೆ 10 ಗಂಟೆಗೆ ಜಿ.ಪಂ. ಮಾಜಿ ಸದಸ್ಯ ಹಾಗೂ ಬಿಜೆಪಿ ಮುಖಂಡ ಬಿ.ಎಂ. ವಾಗೀಶ್ ಸ್ವಾಮಿ ಅವರ ಹುಟ್ಟುಹಬ್ಬದ ಅಂಗವಾಗಿ ರೋಗಿಗಳಿಗೆ ಹಾಲು-ಹಣ್ಣು ವಿತರಣೆ ಮತ್ತು ಕೊರೊನಾ ವಾರಿಯರ್ಸ್‌ಗಳಿಗೆ ಸನ್ಮಾನ ಕಾರ್ಯಕ್ರಮವನ್ನು ವಾಗೀಶ್ ಸ್ವಾಮಿ ಅಭಿಮಾನಿ ಬಳಗದಿಂದ ಹಮ್ಮಿಕೊಳ್ಳಲಾಗಿದೆ ಎಂದು ಆರೋಗ್ಯ ರಕ್ಷಾ ಸಮಿತಿ ಸದಸ್ಯ ಬಿ. ಮಂಜುನಾಥ್ ತಿಳಿಸಿದ್ದಾರೆ.

# ನಿಟ್ಟುವಳ್ಳಿಯ ಸರ್ಕಾರಿ ಶಾಲೆಯಲ್ಲಿ ತರಗತಿ, ಬಿಸಿಯೂಟಕ್ಕೆ ಚಾಲನೆ



ದಾವಣಗೆರೆ, ಅ.21- ನಿಟುವಳ್ಳಿಯ ಸರ್ಕಾರಿ ಪ್ರೌಢ ಮತ್ತು ಪ್ರಾಥಮಿಕ ಶಾಲೆಯಲ್ಲಿ ಬಿಸಿಯೂಟದೊಂದಿಗೆ ತರಗತಿಗಳು ಆರಂಭವಾಗಿವೆ.

ಶಾಲೆಗಳಲ್ಲಿ ಬಿಸಿಯೂಟ ಸುಮಾರು ಒಂದು ವರ್ಷ ಎಂಟು ತಿಂಗಳ ನಂತರ ಪ್ರಾರಂಭವಾಗಿದ್ದು, ಇಂದು ಸಿಹಿ ಊಟವನ್ನು ಜಿಲ್ಲಾ ಪಂಚಾಯತ್ ಮುಖ್ಯ ಲೆಕ್ಕಾಧಿಕಾರಿ ಸೌಮ್ಯಶ್ರೀ ಮತ್ತು ಜಿಲ್ಲಾ ಪಂಚಾಯತ್ ಅಕ್ಷರ ದಾಸೋಹದ ಶಿಕ್ಷಣಾಧಿಕಾರಿ ಶ್ರೀಮತಿ ಪುಷ್ಪಲತಾ ಮಕ್ಕಳಿಗೆ ಸಿಹಿ ಊಟ ಬಡಿಸುವುದರ ಮೂಲಕ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಮುಖ್ಯ ಶಿಕ್ಷಕರಾದ ಸುರೇಶ್, ಚಂದ್ರಪ್ಪ, ಸಹ ಶಿಕ್ಷಕ ಜಯಪ್ಪ, ಎಸ್‌ಡಿಎಂಸಿ ಶಿವರುದ್ರಪ್ಪ ಮತ್ತು ಇತರರು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ 10ನೇ ತರಗತಿಯ ಕು. ವಾಣಿ ಮಾತನಾಡಿ, ಶಾಲೆ ಮತ್ತು ಊಟ ಎರಡೂ ಪ್ರಾರಂಭವಾಗಿರುವುದು ಸಂತಸವಾಗಿದೆ ಎಂದರು.

ಕು. ಟಿ. ಚೈತ್ರ ಮಾತನಾಡಿ, ನಮಗೆ ಮನೆಯಲ್ಲಿದ್ದು ಸಾಕಾಗಿತ್ತು. ವಿದ್ಯಾಭ್ಯಾಸಕ್ಕೂ ತೊಂದರೆಯಾಗಿತ್ತು. ಸರ್ಕಾರ ಮತ್ತು ಇಲಾಖೆ ಮಕ್ಕಳಿಗೆ ಶಾಲೆ ಮತ್ತು ಊಟ ಪ್ರಾರಂಭ ಮಾಡಿರುವುದರಿಂದ ನಮಗೆ ಓದಿ ಮುಂದೆ ಬರುವುದಕ್ಕೆ ಸಹಕಾರಿಯಾಗಿದೆ ಎಂದು ತಿಳಿಸಿದರು.

# ಕಾಯಿಪಲ್ಲೆ ಸಾಗಿಸಲು ಅನುಮತಿ

**(1ನೇ ಪುಟದಿಂದ)** ಮುಂತಾದ ವಿವಿಧ ಸೇವೆಗಳೊಂದಿಗೆ ಸಂಸ್ಥೆಯ ಆದಾಯ ಹೆಚ್ಚಿಸುವ ಪ್ರಯತ್ನ ಮಾಡಲಾಗುವುದು. ಮುಷ್ಕರದಲ್ಲಿ ವಜಾ ಆದ ಸಿಬ್ಬಂದಿ ಮರು ನೇಮಕ ಮುಂತಾದವುಗಳ ಬಗ್ಗೆ ಶೀಘ್ರವೇ ನಿರ್ಣಯ ಕೈಗೊಳ್ಳಲಾಗುವುದು ಎಂದು ಕೇಲಗಾರ ಹೇಳಿದರು. ಸಾರ್ವಜನಿಕರು ಸಂಸ್ಥೆಯ ಸೌಲಭ್ಯ ಪಡೆದುಕೊಂಡು ಸುರಕ್ಷಿತ ಪ್ರಯಾಣ ಹಾಗೂ ಸಂಸ್ಥೆಯ ಬಲವರ್ಧನೆಗೆ ಸಹಕರಿಸುವಂತೆ ಮನವಿ ಮಾಡಿದರು.

# ಶಿಕ್ಷಣ ಸಂಸ್ಥೆಗಳಿಂದ ಉದ್ಯೋಗಗಳ ಸೃಷ್ಟಿ

**(1ನೇ ಪುಟದಿಂದ)** ಪ್ರಸ್ತುತ ಜಾಗತಿಕ ಅಗತ್ಯಕ್ಕೆ ತಕ್ಕಂತೆ ನೀತಿಗಳನ್ನು ರೂಪಿಸಲಾಗಿದೆ. ನೂತನ ಶಿಕ್ಷಣ ನೀತಿಯಲ್ಲಿ ಪ್ರಮಾಣ ಪತ್ರಕ್ಕಿಂತ ವಿದ್ಯಾರ್ಥಿಯ ಕಲಿಕೆಯ ಗುಣಮಟ್ಟ, ಬದುಕಿಗೆ ಬೇಕಾಗಿರುವ ವೃತ್ತಿಯ ಕೌಶಲ್ಯ ಮತ್ತು ವ್ಯಕ್ತಿತ್ವ ವಿಕಸನದ ಶಿಕ್ಷಣವು ಹೆಚ್ಚು ಮಹತ್ವ ಪಡೆಯುತ್ತದೆ. ಆದ್ದರಿಂದ ಇದು ಭವಿಷ್ಯ ರೂಪಿಸುವ ಬದುಕಿನ ಶಿಕ್ಷಣವಾಗಿದೆ. ಮೌಲ್ಯಾಧಾರಿತ, ಸಾಮಾಜಿಕ ಕಳಕಳಿಯ ಸುಭದ್ರ ಭಾರತ ನಿರ್ಮಾಣದ ಪರಿಕಲ್ಪನೆಯ ನೂತನ ನೀತಿಯು ವಿದ್ಯಾರ್ಥಿಗಳ ಭವಿಷ್ಯಕ್ಕೆ ದಾರಿಯಾಗಲಿದೆ ಎಂದು ನುಡಿದರು.

ಬಿಐಇಟಿ ನಿರ್ದೇಶಕ ಪ್ರೊ.ವೈ. ವೃಷಭೇಂದ್ರಪ್ಪ ಮಾತನಾಡಿ, ಬೋಧನೆಯೇ ಪಾಠವಲ್ಲ. ಪ್ರಾಯೋಗಿಕ ಶಿಕ್ಷಣ ಅತ್ಯಗತ್ಯ. ಬೋಧನೆಗೆ ಶಿಕ್ಷಕರು ಇಲ್ಲವೆಂದು ಕೊರಗುವ ಬದಲಾಗಿ, ಲಭ್ಯವಿರುವ ಪ್ರಾಧ್ಯಾಪಕರೇ ಹೊಸ ವಿಷಯಗಳನ್ನು ಕಲಿತು ಬೋಧನೆಗೆ ಮುಂದಾಗುವಂತಾಗಬೇಕು. ಆಗಲೇ ಸಂಸ್ಥೆಗಳು ಬೆಳೆಯಲು ಸಾಧ್ಯ ಎಂದ ಅವರು, ನೂತನ ಶಿಕ್ಷಣ ನೀತಿ ಅನುಷ್ಠಾನಕ್ಕೆ ಮುನ್ನವೇ ಬಾಪೂಜಿ ಎಂಜಿನಿಯರಿಂಗ್ ಕಾಲೇಜು ಹಲವಾರು ಪ್ರಯೋಗಗಳನ್ನು ಮಾಡಿ ಯಶಸ್ವಿಯಾಗಿದೆ ಎಂದು ಉದಾಹರಣೆಗಳೊಂದಿಗೆ ವಿವರಿಸಿದರು.

ಅಧ್ಯಕ್ಷತೆ ವಹಿಸಿದ್ದ ದಾವಿವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ ಜ್ಞಾನ, ವೃತ್ತಿ ಮತ್ತು ಭವಿಷ್ಯ ಒಂದಕ್ಕೊಂದು ಪೂರಕವಾಗಿವೆ. ವಿದ್ಯಾರ್ಥಿಗಳ ಆಸಕ್ತಿ, ಒಲವು ಮತ್ತು ಕೌಶಲ್ಯಗಳನ್ನು ಆಧರಿಸಿ ಶಿಕ್ಷಣ ಕಲಿಯಲು ಮುಕ್ತ ಅವಕಾಶವನ್ನು ನೂತನ ಶಿಕ್ಷಣ ನೀತಿಯಲ್ಲಿ ಕಲ್ಪಿಸಲಾಗಿದೆ. ಶಿಕ್ಷಕರ ಸಹಕಾರ, ಸಹಭಾಗಿತ್ವದಿಂದ ಮಾತ್ರ ಯೋಜನೆ ಸಮರ್ಪಕವಾಗಿ ಅನುಷ್ಠಾನಕ್ಕೆ ಬರಲು ಸಾಧ್ಯ ಎಂದು ಹೇಳಿದರು.

ಬಿಐಇಟಿ ಕಾಲೇಜು ಪ್ರಾಚಾರ್ಯ ಪ್ರೊ. ಅರವಿಂದ್, ದಾವಿವಿ ಪರೀಕ್ಷಾಂಗ ಕುಲಸಚಿವೆ ಪ್ರೊ. ಅನಿತಾ ಎಚ್.ಎಸ್, ಹಣಕಾಸು ಅಧಿಕಾರಿ ಪ್ರಿಯಾಂಕ ಡಿ, ಸಿಂಡಿಕೇಟ್ ಸದಸ್ಯರಾದ ಡಾ. ರಾಮನಾಥ, ವಿಜಯಲಕ್ಷ್ಮಿ ಹಿರೇಮಠ, ಅಕಾಡೆಮಿಕ್ ಕೌನ್ಸಿಲ್ ಸದಸ್ಯರಾದ ಪ್ರೊ. ಅಂಗಡಿ, ಶಿವಕುಮಾರ ಉಪಸ್ಥಿತರಿದ್ದರು. ಕುಲಸಚಿವೆ ಪ್ರೊ. ಗಾಯತ್ರಿ ದೇವರಾಜ್ ಸ್ವಾಗತಿಸಿದರು. ಡಾ. ಪ್ರವೀಣ್ ನಿರೂಪಿಸಿದರು. ಡಾ. ಗೋಪಾಲ ಎಂ. ಅಡವಿರಾವ್ ವಂದಿಸಿದರು.

### ತರಾತುರಿಯಲ್ಲಿ ನೂತನ ಶಿಕ್ಷಣ ನೀತಿ ಜಾರಿ

**ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಕುರಿತ ಸಂವಾದ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ-2020ರ ಅನುಷ್ಠಾನದ ಟಾಸ್ಕ್‌ಫೋರ್ಸ್ ಸಮಿತಿ ಅಧ್ಯಕ್ಷ ಮತ್ತು ಕರ್ನಾಟಕ ಉನ್ನತ ಶಿಕ್ಷಣ ಮಂಡಳಿ ಉಪಾಧ್ಯಕ್ಷರೂ ಆದ ಪ್ರೊ. ಬಿ.ತಿಮ್ಮೇಗೌಡ ಅವರು ಆನ್‌ಲೈನ್ ಮೂಲಕ ಮಾತನಾಡಿದರು. ಪ್ರೊ. ಕೆ.ಎಂ. ರುದ್ರಪ್ಪ ಮಾತನಾಡಿ, ಕೇವಲ ಒಂದು ವರ್ಷದ ಪದವಿ ಪ್ರಮಾಣ ಪತ್ರದಿಂದ ಉದ್ಯೋಗ ಪಡೆದುಕೊಳ್ಳಲು ಸಾಧ್ಯವೇ? ಎಂದು ಪ್ರಶ್ನಿಸಿದರಲ್ಲದೆ, ನೂತನ ನೀತಿಯ ಬಗ್ಗೆ ಅಗತ್ಯ ತರಬೇತಿ ನೀಡಿಲ್ಲ. ಅಲ್ಲದೆ, ಪದವಿ ಕಾಲೇಜುಗಳಲ್ಲೂ ಸಂಶೋಧನೆಗೆ ಅವಕಾಶ ನೀಡಬೇಕು ಎಂದು ಒತ್ತಾಯಿಸಿದರು.**

**ನಿವೃತ್ತ ಪ್ರಾಂಶುಪಾಲ ಶಿವಪ್ರಕಾಶ್, ಸರ್ಕಾರಿ ಸವಲತ್ತುಗಳು ಕೇವಲ ಸರ್ಕಾರಿ ಕಾಲೇಜು ವಿದ್ಯಾರ್ಥಿಗಳಿಗೆ ಮಾತ್ರ ದೊರಕುತ್ತವೆ. ಅನುದಾನ ಹಾಗೂ ಅನುದಾನ ರಹಿತ ಕಾಲೇಜು ವಿದ್ಯಾರ್ಥಿಗಳು ಸರ್ಕಾರದ ಸವಲತ್ತುಗಳಿಂದ ವಂಚಿತರಾಗುತ್ತಿದ್ದಾರೆ ಎಂದರು. ಅಗತ್ಯ ಮೂಲ ಸೌಕರ್ಯ, ಅನುದಾನ ಇಲ್ಲದೆ ನೂತನ ಶಿಕ್ಷಣ ನೀತಿಯನ್ನು ತರಾತುರಿಯಲ್ಲಿ ಜಾರಿಗೆ ತರಲಾಗುತ್ತಿದೆ. ಎಂದರು.**

**ಸರ್ಕಾರಿ ಹಾಗೂ ಖಾಸಗಿ ಕಾಲೇಜುಗಳ ತಾರತಮ್ಯವನ್ನು ಸರಿದೂಗಿಸಲು ನೂತನ ಶಿಕ್ಷಣ ನೀತಿಯಲ್ಲಿ ಪ್ರಯತ್ನಿಸಲಾಗುತ್ತಿದೆ ಎಂದು ಪ್ರೊ. ತೇಜಸ್ವಿ ವಿ. ಕಟ್ಟೀಮನಿ ಹೇಳಿದರು.**

**ಎಲ್ಲವನ್ನೂ ತಯಾರು ಮಾಡಿಕೊಂಡು ನೂತನ ಶಿಕ್ಷಣ ನೀತಿ ಜಾರಿಗೆ ತರಲು ಭಾರತದಂತಹ ದೇಶದಲ್ಲಿ ಸಾಧ್ಯವಿಲ್ಲ. ಸದ್ಯ ಅಂಬೆಗಾಲಿಡಲಾಗುತ್ತಿದೆ. ಏಳು-ಬೀಳು ಸಹಜ. ಸಮಸ್ಯೆ ಸರಿಪಡಿಸಿಕೊಂಡು ಸಾಗಬೇಕಾಗುತ್ತದೆ. ಪ್ರಸ್ತುತ ವರ್ಷದ ವಿದ್ಯಾರ್ಥಿಗಳು ನೂತನ ನೀತಿಯಿಂದ ವಂಚಿತರಾಗಬಾರದೆಂಬ ಉದ್ದೇಶದಿಂದ ಈ ವರ್ಷವೇ ಜಾರಿಗೆ ತರಲಾಗುತ್ತಿದೆ ಎಂದು ಪ್ರೊ. ಬಿ.ತಿಮ್ಮೇಗೌಡ ಸ್ಪಷ್ಟಪಡಿಸಿದರು. ಡಾ. ಹದಡಿ ವೀರಪ್ಪ, ಡಾ. ಮುರುಗೇಂದ್ರಪ್ಪ, ಡಾ. ಭೀಮಣ್ಣ ಸುಣಗಾರ, ಡಾ. ರಂಗಸ್ವಾಮಿ, ಡಾ. ಶಿವಶಂಕರ್, ಡಾ. ಷಣ್ಮುಖಪ್ಪ ಕೆ. ಮತ್ತಿತರರು ಸಂವಾದದಲ್ಲಿ ಭಾಗವಹಿಸಿದ್ದರು.**

# ಜಲಸಿರಿ ಕಾಮಗಾರಿ ಪೂರ್ಣ ಕಳಪೆ



**(1ನೇ ಪುಟದಿಂದ)** ಗುಣಮಟ್ಟದ ಸೈಕಲ್ ಖರೀದಿಸಲಾಗಿದೆ. ಕೇಳಿದರೆ ಸಿಬ್ಬಂದಿಗಳು ಉಡಾಫೆ ಉತ್ತರ ನೀಡುತ್ತಾರೆ. ನೀರು ಶುದ್ಧೀಕರಣ ಮಾಡುವ ಆಲಂ ಖರೀದಿ ಹಣದಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂದು ಆರೋಪಿಸಿದರು.

ಕಿರ್ಲೋಸ್ಕರ್ ಗ್ರೀನ್ ಸಿಟಿ ಲೇ ಔಟ್‌ನ 50 ಎಕರೆ ವಸತಿ ನಿರ್ಮಾಣದಿಂದ ನಗರಸಭೆಗೆ ಇಲ್ಲಿಯವರೆಗೆ ಸುಮಾರು 10 ಕೋಟಿ ರೂ. ಭೂ ಕಂದಾಯ ಬರಬೇಕಾಗಿದೆ. ಮೂಲ ಸೌಕರ್ಯಗಳಿಲ್ಲದ ಈ ಪ್ರದೇಶದಲ್ಲಿನ ವಸತಿ ಯೋಜನೆಗೆ ನಗರಸಭೆಯ ವತಿಯಿಂದ ಯಾವುದೇ ರೀತಿಯ ಡೋರ್ ನಂಬರ್ ಕೊಡುವುದು ಬೇಡ ಎಂದು ಹೇಳಿದರು.

ಎ. ವಾಮನಮೂರ್ತಿ ಮಾತನಾಡಿ, ಸಾಮಾನ್ಯ ಸಭೆ ವಿಳಂಬ ಮಾಡುವುದರಿಂದ ಜನರ ಸಮಸ್ಯೆಗಳಿಗೆ ಸ್ಪಂದಿಸುವುದು ಕಷ್ಟವಾಗುತ್ತದೆ. ಮುಂದಿನ ದಿನಗಳಲ್ಲಿ ಪ್ರತಿ ತಿಂಗಳು ಸಭೆ ನಡೆಸುವಂತೆ ಹೇಳಿದರು.


ಸದಸ್ಯ ದಾದಾ ಖಲಂದರ್, ಜನರ ಕಷ್ಟಗಳಿಗೆ ಸ್ಪಂದಿಸದ ಆರೋಗ್ಯ ಇಲಾಖೆಯ ಕೆಲ ಸಿಬ್ಬಂದಿಗಳನ್ನು ಶೀಘ್ರ ವರ್ಗಾಯಿಸುವಂತೆ ಹೇಳಿದರು. ಸದಸ್ಯೆ ನಿಂಬಕ್ಕ ಚಂದಪೂರ್, ಕುರುಬ ಭವನ ನಿರ್ಮಾಣಕ್ಕೆ ಆದ್ಯತೆ ನೀಡಿ ಎಂದರು.

ಗುತ್ತೂರು ಜಂಬಣ್ಣ, ನಗರಸಭೆಯ ಅಧಿಕಾರಿಗಳು ಪರ್ಸೆಂಟೇಜ್ ವ್ಯವಸ್ಥೆಗೆ ನಿಂತಿದ್ದಾರೆ ಎಂದರು. ಸದಸ್ಯೆ ಅಶ್ವಿನಿ ಕೆ.ಜಿ. ಕೃಷ್ಣ ಮಾತನಾಡಿ, ಗಾಂಧಿ ವೃತ್ತದಲ್ಲಿ ತುಂಗಭದ್ರಾ ಪುತ್ಥಳಿ ನಿರ್ಮಾಣ ಮಾಡುವುದಕ್ಕೆ ಆದ್ಯತೆ ನೀಡಬೇಕು. ಟ್ರಾಫಿಕ್ ಸಿಗ್ನಲ್ ಲೈಟ್ ದುರಸ್ತಿ ಮಾಡಿ ಸಿ.ಸಿ. ಕ್ಯಾಮರಾ ಚಾಲನೆ ಮಾಡಬೇಕು ಎಂದು ಹೇಳಿದರು. ರಜನಿಕಾಂತ್ ಮಾತನಾಡಿ, ಪೌರಾಯುಕ್ತರು ಇತ್ತೀಚಿನ ದಿನಗಳಲ್ಲಿ ಸದಸ್ಯರ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ ಎಂದರು. ಉಷಾ ಮಂಜುನಾಥ್ ಮಾತನಾಡಿ, ಆದಷ್ಟು ಬೇಗ ಹೆಚ್ಚು ಪೌರ ಕಾರ್ಮಿಕರ ನೇಮಕಾತಿ ಮಾಡಿಕೊಳ್ಳುವಂತೆ ತಿಳಿಸಿದರು. ಸದಸ್ಯ ಹನುಮಂತಪ್ಪ, ಎಸ್.ಎಂ. ವಸಂತ್ ಮಾತನಾಡಿದರು.

ಪೌರಾಯುಕ್ತರಾದ ಶ್ರೀಮತಿ ಎಸ್. ಲಕ್ಷ್ಮಿ ಮಾತನಾಡಿ, ಜಲಸಿರಿ ಯೋಜನೆಯ ಕಾಮಗಾರಿ ಈಗಾಗಲೇ ಮೂರು ಝೋನ್ ಸಂಪೂರ್ಣವಾಗಿ ಮುಕ್ತಾಯವಾಗಿದೆ. ಇನ್ನೂ ಆರು ಝೋನ್ ಕಾಮಗಾರಿ ಶೀಘ್ರವೇ ಮುಗಿಯಲಿದೆ. ಸುಮಾರು 14 ಸಾವಿರ ನಲ್ಲಿ ಸಂಪರ್ಕ ಕಲ್ಪಿಸಲಾಗಿದೆ ಎಂದರು.

ನಗರಸಭೆಯ ಉಪಾಧ್ಯಕ್ಷ ಎಂ.ಎಸ್. ಬಾಬುಲಾಲ್, ಸದಸ್ಯರಾದ ಕೆ.ಜಿ. ಸಿದ್ದೇಶ್, ಪಿ.ಎನ್. ವಿರುಪಾಕ್ಷ, ನಾಗರತ್ನಮ್ಮ, ಮುಜಾಮಿಲ್, ಸುಮಿತ್ರಾ ಮರಿದೇವ್, ರೇಷ್ಮಾ ಬಾನು, ದಿನೇಶ್ ಬಾಬು, ಲಕ್ಷ್ಮಿ ಮೋಹನ್, ಆರ್.ಸಿ. ಜಾವೇದ್, ಶಾಹೀನಾ ಬಾನು, ಪಾರ್ವತಮ್ಮ ಐರಣಿ, ಕವಿತಾ ಮಾರುತಿ, ಬಿ.ಎಂ. ವಿಜಯಕುಮಾರ್, ಬಿ. ಅಲ್ತಾಫ್, ಪಕ್ಕೀರಮ್ಮ, ಸಿಬ್ಬಂದಿಗಳಾದ ಎಇಇ ಬಿರಾದಾರ ಲೀಲಾ ವೀರಪ್ಪ, ಆರ್ ಓ ಮಂಜುನಾಥ್, ತಿಪ್ಪೇಸ್ವಾಮಿ, ಕಿರಣ್, ರಮೇಶ್, ವಿನಾಯಕ, ವಸಂತ್ ಹಾಗೂ ಇತರರು ಸಭೆಯಲ್ಲಿ ಹಾಜರಿದ್ದರು.


## ಭಾವಪೂರ್ಣ ಶ್ರದ್ಧಾಂಜಲಿ




ದಿನಾಂಕ 21.10.2021ರಂದು ನಿಧನರಾದ ಅಕ್ಕಿ-ಭತ್ತದ ವರ್ತಕರಾಗಿದ್ದ

**ಶ್ರೀ ಬಿ. ಸೀತಾರಾಮ ಶೆಟ್ಟಿ**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಶಾಂತಿ ಸಿಗಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ಕರುಣಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.


✦ ಕೋರಿ ಹಿರಿಯಣ್ಣ, ಅಕ್ಕಿ ವರ್ತಕರು ✦ ಕೋರಿ ಸಿದ್ದೇಶ್
✦ ಕೋರಿ ಶಿವಕುಮಾರ್ ✦ ಎಸ್.ಬಿ. ಸತೀಶ್
✦ ಸುಧಾಕರ, ಮಧು ಟ್ರಾನ್ಸ್‌ಪೋರ್ಟ್ ✦ ಎಂ.ಡಿ.ದೊಡ್ಡಪ್ಪ


## ಬಿ. ಸೀತಾರಾಮ ಶೆಟ್ಟಿ ನಿಧನ



ದಾವಣಗೆರೆ ಪಿ.ಜೆ.ಬಡಾವಣೆ, 8ನೇ ಮೇನ್ ವಾಸಿ, ಅಕ್ಕಿ - ಭತ್ತದ ವರ್ತಕರಾಗಿದ್ದ ಬಿ.ಸೀತಾರಾಮ ಶೆಟ್ಟಿ (79) ಅವರು ದಿನಾಂಕ 21-10-21ರ ಗುರುವಾರ ರಾತ್ರಿ 8-50ಕ್ಕೆ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಅಳಿಯ, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಪಾರ್ಥಿವ ಶರೀರವನ್ನು ಅಂತಿಮ ದರ್ಶನಕ್ಕಾಗಿ ಅವರ ನಿವಾಸದಲ್ಲಿ ದಿನಾಂಕ 22-10-21ರ ಶುಕ್ರವಾರ ಬೆಳಿಗ್ಗೆ 7 ಗಂಟೆಯಿಂದ ಇಡಲಾಗುವುದು. ನಂತರ ಅಂತ್ಯಕ್ರಿಯೆಯನ್ನು ಮಧ್ಯಾಹ್ನ 12.30ಕ್ಕೆ ನಗರದ ಪಿ.ಬಿ.ರಸ್ತೆಯ ವೈಕುಂಠಧಾಮದಲ್ಲಿ ನೆರವೇರಿಸಲಾಗುವುದು.

## ಸವಿತಾ ಸಮಾಜದ ಕಾಶಿನಾಥ್ ಯಳವಾರ್ ನಿಧನ



ದಾವಣಗೆರೆ ದೇವರಾಜ ಅರಸು ಬಡಾವಣೆ 'ಸಿ' ಬ್ಲಾಕ್ 3ನೇ ಮೇನ್ 4ನೇ ಕ್ರಾಸ್ ವಾಸಿ ಕಾಶಿನಾಥ್ ಯಳವಾರ್ ಅವರು ದಿನಾಂಕ 21-10-2021ರ ಗುರುವಾರ ಬೆಳಿಗ್ಗೆ 7.30 ಕ್ಕೆ ನಿಧನರಾದರು. ತಂದೆ, ತಾಯಿ, ಪತ್ನಿ, ಓರ್ವ ಪುತ್ರಿ, ಇಬ್ಬರು ಪುತ್ರರು, ಐವರು ಸಹೋದರರು, ಇಬ್ಬರು ಸಹೋದರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 22-10-2021ರ ಶುಕ್ರವಾರ ಬೆಳಿಗ್ಗೆ 10.30ಕ್ಕೆ ಬೂದಾಳ್ ರಸ್ತೆಯ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಲಿದೆ.

# ಮಲೇಬೆನ್ನೂರಿನಲ್ಲಿ ಕುಡಿಯುವ ನೀರಿಗಾಗಿ ಪ್ರತಿಭಟನೆ




ಮಲೇಬೆನ್ನೂರು, ಅ.21 - ಪಟ್ಟಣದ 2, 3 ಮತ್ತು 5ನೇ ವಾರ್ಡ್‌ಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗಿದ್ದು, ರೊಚ್ಚಿಗೆದ್ದ ನಾಗರಿಕರು ಪುರಸಭೆ ಎದುರು ಬುಧವಾರ ಬೆಳಗ್ಗೆಯೇ ಖಾಲಿ ಕೊಡಗಳೊಂದಿಗೆ ಪ್ರತಿಭಟನೆ ನಡೆಸಿ ಗಮನ ಸೆಳೆದರು.

ಬೀರಲಿಂಗೇಶ್ವರ ದೇವಸ್ಥಾನ ರಸ್ತೆ ಸೇರಿದಂತೆ ಸುತ್ತ-ಮುತ್ತಲಿನ ನಿವಾಸಿಗಳು ಪುರಸಭೆ ಅಧಿಕಾರಿಗಳ ವಿರುದ್ಧ ಧಿಕ್ಕಾರ ಕೂಗಿ, ನೀರು ಕೊಡಿ, ಇಲ್ಲವೇ ಜಾಗ ಖಾಲಿ ಮಾಡಿ ಎಂದು ಆಗ್ರಹಿಸಿದರು. ಕುಡಿಯುವ ನೀರನ್ನು ಸಮರ್ಪಕವಾಗಿ ಪೂರೈಸುವಂತೆ ಹಲವು ಬಾರಿ ಮನವಿ ಮಾಡಿದ್ದರೂ, ಅಧಿಕಾರಿಗಳು ಸ್ಪಂದಿಸುತ್ತಿಲ್ಲ ಎಂದು 2ನೇ ವಾರ್ಡಿನ ಪೂಜಾರ್ ಬೀರಪ್ಪ, ಎಂ.ಆರ್. ಮಹಾದೇವಪ್ಪ ದೂರಿದರು.


ವಿಷಯ ತಿಳಿದ ತಕ್ಷಣ ಕಚೇರಿಗೆ ಆಗಮಿಸಿದ ಮುಖ್ಯಾಧಿಕಾರಿ ಡೊಂಬರ್ ಅವರು, ಪಟ್ಟಣದಲ್ಲಿ ಎದುರಾಗಿರುವ ನೀರಿನ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿದ್ದು, ವಾರದೊಳಗೆ ಸಮಸ್ಯೆ ಬಗೆಹರಿಸುವ ಭರವಸೆ ನೀಡಿದ ನಂತರ ಪ್ರತಿಭಟನೆ ಕೈಬಿಟ್ಟರು.

ಪುರಸಭೆ ಮಾಜಿ ಸದಸ್ಯ ಬಿ. ಸುರೇಶ್, ಕೆ.ಪಿ. ಗಂಗಾಧರ್, ಪಿ.ಹೆಚ್. ಶಿವಕುಮಾರ್, ಯಕ್ಕನಹಳ್ಳಿ ಗಿರೀಶ್, ಓ.ಜಿ. ಮಂಜುನಾಥ್, ತೋಟಿಗೇರ ರುದ್ರೇಶ್, ಪಿ.ಕೆಂಚಪ್ಪ ಮತ್ತಿತರರಿದ್ದರು.

# ವಲಸೆ ಹಕ್ಕಿಗಳ ಗಮ್ಯ ಸ್ಥಾನವಾದ ದಾವಣಗೆರೆ...


3




2


4


5

ಪ್ರಾಣಿಗಳಲ್ಲಿ ವಲಸೆ ಎಂದರೆ ಒಂದು ಜಾಗದಿಂದ ಇನ್ನೊಂದು ಜಾಗಕ್ಕೆ ಸೂಕ್ತ ಪರಿಸರ ಮತ್ತು ಆಹಾರಕ್ಕಾಗಿ ಹೋಗುವುದು ಮತ್ತು ಮೊದಲಿನ ಜಾಗಕ್ಕೆ ಹಿಂದಿರುಗುವುದು. ಪಕ್ಷಿಗಳಲ್ಲಿ ವಲಸೆ ಜೀವನ ಕ್ರಮ ಉನ್ನತ ಮಟ್ಟದ್ದಾಗಿದೆ. ಡಾ. ಸಲೀಂ ಅಲಿಯವರ ಪ್ರಕಾರ ಹಕ್ಕಿಗಳು ಗಡಿಯಾರದ ಲೋಲಕದಂತೆ ತಮ್ಮ ವಲಸೆ ಕಾರ್ಯಕ್ರಮ ಕೈಗೊಳ್ಳುತ್ತವೆ.

ಸಂತಾನಾಭಿವೃದ್ಧಿಗಾಗಿ ಒಂದು ಜಾಗ ವಾದರೆ, ಆಹಾರ ಮತ್ತು ಸೂಕ್ತ ಪರಿಸರಕ್ಕಾಗಿ ಇನ್ನೊಂದು ಜಾಗ. ಕಾಲಕ್ಕೆ ಸರಿಯಾಗಿ ಇವೆರಡು ಜಾಗಗಳ ಮಧ್ಯೆ ಹೋಗಿಬರುವುದೇ ವಲಸೆ. ಈ ರೀತಿಯ ಜೀವನ ಶೈಲಿಯಿಂದ ಅವುಗಳಿಗೆ ಸೂಕ್ತ ವಾತಾವರಣದಲ್ಲಿ ಬದುಕಲು ಮತ್ತು ಸಂತಾನಾಭಿವೃದ್ಧಿ ಮಾಡಲು ಸಹಾಯವಾಗುತ್ತದೆ. ವಲಸೆ ಬರುವ ಹೆಚ್ಚಿನ ಹಕ್ಕಿಗಳು ಚಳಿಗಾಲದಲ್ಲಿ ಉತ್ತರ ಗೋಲಾರ್ಧದಿಂದ ಸಮಶೀತೋಷ್ಣ ವಲಯದಲ್ಲಿರುವ ಭಾರತಕ್ಕೆ ಬರುತ್ತವೆ. ಆಹಾರ ಮತ್ತು ನೀರಿನ ಲಭ್ಯತೆಗನುಸಾರ ಸ್ಥಳೀಯ ವಲಸೆಗಳು ಸಾಧ್ಯ.

ಚಳಿಗಾಲದಲ್ಲಿ ಸೈಬೀರಿಯಾ, ಮಂಗೋಲಿಯಾ ಮತ್ತು ಯೂರೋಪಿನಲ್ಲಿ ನೀರು ಮಂಜುಗಡ್ಡೆಯಾಗುವಷ್ಟು ಚಳಿ. ಅಕ್ಟೋಬರ್ ಕೊನೆ ವಾರದಲ್ಲಿ ತಾಪಮಾನ ಶೂನ್ಯ ಡಿಗ್ರಿಗಿಳಿದು ನವೆಂಬರ್ ಹೊತ್ತಿಗೆ ಕೆರೆಗಳೆಲ್ಲಾ ಮಂಜುಗಡ್ಡೆಯಾಗಿರುತ್ತವೆ. ಇಲ್ಲಿ ವಾಸಿಸುವ ಹಕ್ಕಿಗಳಿಗೆ ಸ್ವಲ್ಪ ಉಷ್ಣ ಪ್ರದೇಶವಾದ ಭಾರತ ವಾಸಿಸಲು ಯೋಗ್ಯ ಪರಿಸರವನ್ನು ನೀಡುತ್ತದೆ. ಇದೇ ಕಾರಣಕ್ಕಾಗಿ ಹಲವಾರು ಪಕ್ಷಿ ಪ್ರಭೇದಗಳು ವಿವಿಧ ದೇಶಗಳಿಂದ ಭಾರತಕ್ಕೆ ಆಗಮಿಸುತ್ತವೆ. ಇವುಗಳಿಗೆ ಕರ್ನಾಟಕ ನೆಚ್ಚಿನ ತಾಣವೂ ಹೌದು. ದಾವಣಗೆರೆಯದ್ದು ಉಷ್ಣ ಹವಾಮಾನ. ತಾಪಮಾನ ಸರಾಸರಿ $28^0$ ಸಿ ಅಸುಪಾಸು. ಬಯಲು ಸೀಮೆಯ ಪ್ರದೇಶವಾದ ದಾವಣಗೆರೆಯೂ ಸಾಮಾನ್ಯವಾಗಿ ಉಷ್ಣ ವಾತಾವರಣವಿದ್ದರೂ ಚಳಿಯಿಂದ ಹೊರತಾಗಿಲ್ಲ. ಆದರೆ ಕೆಲವು ಹಕ್ಕಿಗಳಿಗೆ ಇದು ಅಪ್ಯಾಯಮಾನವಾದ ಬೆಚ್ಚಗಿನ ವಾತಾವರಣವನ್ನು ಕೊಡಬಲ್ಲದು. ನೀರು ಮತ್ತು ಆಹಾರಕ್ಕೆ ಅಲ್ಲಲ್ಲಿರುವ ಕೆರೆಗಳು ಮತ್ತು ಸುತ್ತಲಿನ ಕೃಷಿ ಭೂಮಿ ಆಸರೆ. ಹೇರಳವಾಗಿ ಕಾಳು, ಹುಳು ಮುಂತಾದವುಗಳು ಲಭ್ಯ. ಇಂತಹ ವಾತಾವರಣವನ್ನು ಅರಸಿ ಬರುವ ವಿದೇಶಿ ಹಕ್ಕಿಗಳು ಹಲವಾರು. ದಾವಣಗೆರೆಯ ಕೊಂಡಜ್ಜಿ ಕೆರೆ, ಕುಂದುವಾಡ ಕೆರೆ, ಹದಡಿ ಕೆರೆ, ದೇವರಬೆಳೆಕೆರೆ, ಆವರಗೆರೆ, ನಾಗನೂರು ಕೆರೆ, ಬೆಳವನೂರು ಕೆರೆ, ಅಣಜಿ ಕೆರೆ ಮುಂತಾದವುಗಳು ವಲಸೆ ಹಕ್ಕಿಗಳ ತಂಗುದಾಣ. ದಾವಣಗೆರೆಯಲ್ಲಿ ಇದುವರೆಗೂ 201 ಪ್ರಭೇದದ ಹಕ್ಕಿಗಳನ್ನು ದಾಖಲಿಸಲಾಗಿದೆ. ಅದರಲ್ಲಿ 59 ಪ್ರಭೇದಗಳು ವಲಸೆಗಾರ ಹಕ್ಕಿಗಳು. ಹೆಚ್ಚಿನ ವಲಸೆ ಹಕ್ಕಿಗಳು ದಾವಣಗೆರೆಗೆ ಚಳಿಗಾಲದಲ್ಲಿ ಬರುತ್ತವೆ. ಅಂದರೆ ಅಕ್ಟೋಬರ್‌ನಿಂದ ಮಾರ್ಚ್‌ವರೆಗೆ ಕಾಣಸಿಗುತ್ತವೆ.


6

ದಾವಣಗೆರೆಯಲ್ಲಿ ಸಾಮಾನ್ಯವಾಗಿ ಕಂಡು ಬರುವ ಸ್ಥಳೀಯ ಹಕ್ಕಿಗಳೆಂದರೆ ಬೆಳ್ಳಕ್ಕಿಗಳು (Egrets), ಬೆಳವ (Dove), ನವಿಲು (Peafowl), ಹುಂಡು ಕೋಳಿ (Water hen), ಜಂಬು ಕೋಳಿ (Moorhen), ಗೂಬೆಗಳು (Owl), ಗೀಜಗಗಳು (Weaver), ಕಳ್ಳಿಪೀರ (Bee eaters), ನೆಲಗುಬ್ಬಿಗಳು (Larks), ಮುನಿಯಗಳು, ಹರಟೆ ಮಲ್ಲರು (Babblers), ಮಿಂಚುಳ್ಳಿ (Kingfishers), ಗುಳುಮುಳುಕ (Little Grebe), ನೀರುಕಾಗೆಗಳು (Cormorants), ಹಾವಕ್ಕಿ (Darter), ಕೆಂಬರಲುಗಳು (Ibis), ಕೊಳದ ಬಕ (Pond heron), ಇರುಳು ಬಕ (Night heron), ನಾಮದ ಕೋಳಿ (Coot), ಸಿಳ್ಳೆಬಾತು (Whistling duck), ವರಟೆ (Spot-billed duck), ಮರಗಾಲು ಹಕ್ಕಿ (Stilt) ಮುಂತಾದವುಗಳು.

ದಾವಣಗೆರೆಯಲ್ಲಿ ದಾಖಲಾಗಿರುವ ವಲಸೆ ಹಕ್ಕಿಗಳೆಂದರೆ ಮಂಗೋಲಿಯಾದ ಪಟ್ಟೆ ಹೆಬ್ಬಾತು (Bar-headed geese), ಯೂರೋಪಿನ ಉಲಿಯಕ್ಕಿಗಳು (Warblers), ಕಂದು ಬಾತು (Ruddy shelduck), ನಾಮದ ಬಾತು (Wigeon), ಬಿಳಿಹುಬ್ಬಿನ ಬಾತು (Garganey), ಚಲುಕ ಬಾತು (Northern shoveler), ಸೋಲಾರಿ ಹಕ್ಕಿ (Teal), ವಿವಿಧ ಗೊರವಗಳು (Plovers/Sandpipers), ರಷ್ಯಾದ ಉಲ್ಲಂಕಿಗಳು (Snipe), ಸೈಬೀರಿಯಾದ ಕಲ್ಲುಚಟಕ ಹಕ್ಕಿ (Siberian stonechat) ಉತ್ತರ ಭಾರತದ ನವರಂಗ (Indian Pitta), ಕೆಂಪು-ಕಾಲಿನ ಗೊರವ (Redshank), ನೀಲಿ-ಬಾಲದ ಕಳ್ಳಿಪೀರ, ನೀಲಿ-ನೊಣಹಿಡುಕ (Verditer flycatcher), ಕೆಂಪು-ಎದೆಯ ನೊಣಹಿಡುಕ (Red-breasted flycatcher), ಸಣ್ಣ ಬಿಳಿಕತ್ತು (Lesser white-throat), ಹೆಜ್ಜಾರ್ಲೆ (Pelican), ಬಣ್ಣದ ಕೊಕ್ಕರೆ (Painted Stork), ಬಾಯ್ಕಳಕ ಕೊಕ್ಕರೆ (Open-bill), ಚಮಚದ ಕೊಕ್ಕು (Spoonbill), ಗುಬುಟು ಕೊಕ್ಕಿನ ಬಾತು (Knob-billed duck) ಮುಂತಾದವುಗಳು.

ಪ್ರಸಿದ್ಧ ಪಕ್ಷಿಧಾಮಗಳಲ್ಲಿ ಸಿಗದ ವಲಸೆ ಹಕ್ಕಿಗಳು ದಾವಣಗೆರೆಯಲ್ಲಿ ಕಾಣಸಿಕ್ಕಿವೆ. ದಾವಣಗೆರೆ ಸಹ ವಲಸೆ ಹಕ್ಕಿಗಳ ಗಮ್ಯ ಸ್ಥಾನವಾಗುತ್ತಿರುವುದು ನಿಜಕ್ಕೂ ಸಂತೋಷದ ಸಂಗತಿ. ಹಾಗೆಯೇ ಇಲ್ಲಿನ ಕೆರೆ-ಕಟ್ಟೆ, ಕೃಷಿ ಮತ್ತು ಕುರುಚಲು ಕಾಡನ್ನು ಸಂರಕ್ಷಿಸುವುದು ಸಹ ಮುಖ್ಯ. ಅರಣ್ಯ ಇಲಾಖೆ, ಜಿಲ್ಲಾಡಳಿತ ಮತ್ತು ಮಹಾನಗರ ಪಾಲಿಕೆಗಳು ಇಲ್ಲಿನ ಪರಿಸರವನ್ನು ಸೂಕ್ತ ರೀತಿಯಲ್ಲಿ ಕಾಪಾಡಿ ಹೆಚ್ಚಿನ ಗಿಡ, ಮರಗಳನ್ನು ನಿರ್ವಹಣೆ ಮಾಡಿದರೆ ಸುಂದರ, ಪರಿಸರ-ಸ್ನೇಹಿ ನಗರವಾದೀತು.

ಚಿತ್ರಗಳು: ಲೇಖಕರದ್ದು

ಲೇಖಕರು : **ಡಾ. ಎಸ್. ಶಿಶುಪಾಲ,**
ದಾವಣಗೆರೆ ವಿಶ್ವವಿದ್ಯಾಲಯದ
ಸೂಕ್ಷ್ಮ ಜೀವಿಶಾಸ್ತ್ರ ವಿಭಾಗದ
ಪ್ರಾಧ್ಯಾಪಕರು.

**ಚಿತ್ರ 1: ಮಂಗೋಲಿಯಾದ ಪಟ್ಟೆ ಹೆಬ್ಬಾತುಗಳು**
**ಚಿತ್ರ 2: ಯೂರೋಪಿನ ಸೂಜಿ ಬಾಲದ ಬಾತುಗಳು**
**ಚಿತ್ರ 3: ಯೂರೋಪಿನ ಹಸಿರು ಗದ್ದೆಗೊರವ**
**ಚಿತ್ರ 4: ಯೂರೋಪಿನ ಕಡಲ ಉಲ್ಲಂಕಿಗಳು**
**ಚಿತ್ರ 5: ಯೂರೋಪಿನ ಬಿಳಿ ಹುಬ್ಬಿನ ಬಾತುಗಳು.**
**ಚಿತ್ರ 6: ಸೈಬೀರಿಯಾದ ಕಲ್ಲುಚಟಕ ಹಕ್ಕಿ**

# ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಭಾಷಾನಗರ 1 ರಿಂದ 17ನೇ ಕ್ರಾಸ್, ರಿಂಗ್ ರಸ್ತೆ, ಶಿವನಗರ ಸ್ವಲ್ಪ ಭಾಗ, ಮಿಲ್ಲತ್ ಕಾಲೋನಿ, ಬೀಡಿ ಲೇಔಟ್, ರಜಾವುಲ್ಲಾ ಮುಸ್ತಾಫ ನಗರ, ರಜಾಕ್ ಸರ್ಕಲ್, ಭಾಷಾನಗರ ಮುಖ್ಯರಸ್ತೆ ಸುತ್ತಮುತ್ತ, ಬೀಡಿ ಲೇಔಟ್, ಶಿವನಗರ, ಇಎಸ್ಐ ಆಸ್ಪತ್ರೆ ಹಿಂಭಾಗ ಹಾಗೂ ಮುಂಭಾಗ ಮತ್ತು ಇತರೆ ಪ್ರದೇಶಗಳು.

ದೇವರಾಜ ಅರಸು ಬಡಾವಣೆ 'ಬಿ' ಬ್ಲಾಕ್ ಮತ್ತು 'ಸಿ' ಬ್ಲಾಕ್, ಎಸ್‌ಪಿ ಆಫೀಸ್, ಆರ್.ಟಿ.ಓ ಆಫೀಸ್, ವಿಜಯ ನಗರ ಬಡಾವಣೆ, ರಾಜೀವ್ ಗಾಂಧಿ ಬಡಾವಣೆ, ಎಸ್.ಪಿ.ಎಸ್. ನಗರ 2ನೇ ಹಂತ, ಎಸ್.ಎಮ್.ಕೆ. ನಗರ, ವಾಲ್ಮೀಕಿ ಸರ್ಕಲ್ ಸುತ್ತಮುತ್ತ, ಶಿವಾಲಿ ಚಿತ್ರ ಮಂದಿರದ ಅಕ್ಕ ಪಕ್ಕ ಹಾಗೂ ಟೀಚರ್ಸ್ ಕಾಲೋನಿ ಇತರೆ ಪ್ರದೇಶಗಳು.

ಕೊಂಡಜ್ಜಿ ರಸ್ತೆ, ಎಸ್.ಜೆ.ಎಮ್. ನಗರ, ಸೇವಾದಳ ಕಾಲೋನಿ, ಹೊಸಕ್ಯಾಂಪ್, ಎಸ್‌ಎಮ್‌ಕೆ ನಗರ 2ನೇ ಹಂತ, ವೀರಾಂಜನೇಯ ಪೆಟ್ರೋಲ್ ಬಂಕ್ ಹತ್ತಿರ, ಬಿ.ಜೆ.ಎಮ್ ಸ್ಕೂಲ್, ಆರ್‌ಟಿಓ ಆಫೀಸ್, ಬೂದಿಹಾಳ್ ರಸ್ತೆ, ಬಾಬು ಜಗಜೀವನ್‌ರಾಮ್ ನಗರ, ಗೌರಸಂದ್ರ ಮಾರಮ್ಮ ದೇವಸ್ಥಾನ ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳು.

ಹಗೇದಿಬ್ಬ ಸರ್ಕಲ್, ಗಾಂಧಿನಗರ ಅಂಬೇಡ್ಕರ್ ಸರ್ಕಲ್, ಮಹಾರಾಜ ಪೇಟೆ, ಬಸವರಾಜ ಪೇಟೆ, ಚೌಕಿಪೇಟೆ, ವಿಜಯಲಕ್ಷ್ಮಿ ರಸ್ತೆ, ದೊಡ್ಡಪೇಟೆ, ಕಾಳಿಕಾ ದೇವಿ ರಸ್ತೆ, ಎಸ್‌ಕೆಪಿ ರಸ್ತೆ, ಹಳೇಪೇಟೆ ಶ್ರೀ ವೀರಭದ್ರೇಶ್ವರ ದೇವಸ್ಥಾನದ ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳು.

ಶೇಖರಪ್ಪ ನಗರ ಮಸೀದಿ ಹಿಂಭಾಗ, ರಂಭಾಪುರಿ ರಸ್ತೆ, ಮಹಾವೀರ ಭವನ, ಆರ್‌ಎಮ್‌ಸಿ ಲಿಂಕ್ ರಸ್ತೆ, ಗುಜರಿ ಲೈನ್, ಬಂಬೂಬಜಾರ್, ಬಿ.ಟಿ ಲೇಔಟ್, ಎಲ್.ಬಿ.ಎಸ್. ನಗರ, ಆನೆಕೊಂಡ, ಇಮಾಂನಗರ, ಬಿಡಿಓ ಆಫೀಸ್, ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳು.

ಟಿ.ಸಿ ಲೇಔಟ್, ಎಲ್‌ಐಸಿ ಆಫೀಸ್, ಕೆ.ಆರ್.ರಸ್ತೆ, ಜಗಳೂರು ಬಸ್ ಸ್ಟಾಪ್, ಅರಳೀಮರ ಸರ್ಕಲ್, ನೂರಾನಿ ಆಟೋ ಸ್ಟ್ಯಾಂಡ್, ವೆಂಕಟೇಶ್ವರ ದೇವಸ್ಥಾನದ ಪಕ್ಕ, ಆನೆಕೊಂಡ ಹೊಸ ಲೇಔಟ್, ಉರ್ದು ಸ್ಕೂಲ್ ಹಿಂಭಾಗ, ಆಜಾದ್ ನಗರ 10 ರಿಂದ 16ನೇ ಕ್ರಾಸ್‌ವರೆಗೆ, ಅಕ್ಸಾ ಮಸೀದಿ ಹಿಂಭಾಗ, ಬೀಡಿ ಲೇಔಟ್, ಆಜಾದ್ ನಗರ ಪೊಲೀಸ್ ಸ್ಟೇಷನ್, ಹೆಗಡೆ ನಗರ, ರಜಾವುಲ್ಲಾ ಮುಸ್ತಾಫ ನಗರ ಸ್ವಲ್ಪಭಾಗ, ಅಮ್ಮಜಾನ್, ಬಾಬಾಜಾನ್, ಜೋಗಲ್‌ಬಾಬಾ ಲೇಔಟ್, ಮಾಗನಹಳ್ಳಿ ರಸ್ತೆ ಹಳ್ಳದವರೆಗೆ, ಕೆ.ಆರ್. ರಸ್ತೆ, ಜಗಳೂರು ಬಸ್‌ಸ್ಟ್ಯಾಂಡ್, ಜಗಳೂರು ರಸ್ತೆ, ಎಆರ್‌ಬಿ ಮಿಲ್, ಚಾಮರಾಜ ಪೇಟೆ, ವಾಟರ್ ಟ್ಯಾಂಕ್, ಎಸ್‌ಎಸ್ ಆಸ್ಪತ್ರೆ, ಅರಳೀಮರದ ಸರ್ಕಲ್, ಬೇತೂರ್ ರಸ್ತೆ, ಚರ್ಚ್ ರಸ್ತೆ, ಮುನ್ಸಿಪಲ್ ಕಾಲೇಜ್, ಕೊಹಿನೂರ್ ಹೋಟೆಲ್ ಹಿಂಭಾಗ, ಮಾಗಾನಹಳ್ಳಿ ರಸ್ತೆ, ಹಾಸಬಾವಿ ಸರ್ಕಲ್, ಮಿಲ್ಲತ್ ಸ್ಕೂಲ್ ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳು.

ಆವರಗೆರೆ ವಿದ್ಯುತ್ ಉಪಕೇಂದ್ರದಿಂದ ಪಿ.ಬಿ. ರಸ್ತೆ, ರವಿ ಮಿಲ್ ಎದುರುಗಡೆ, ರೈಲ್ವೇ ಅಂಡರ್‌ಬ್ರಿಡ್ಜ್ ಹತ್ತಿರ, ಎಪಿಎಮ್‌ಸಿ ಆವರಣ, ಶೇಖರಪ್ಪ ನಗರ 'ಬಿ' ಬ್ಲಾಕ್ ಒಳಗಡೆ, ಭಾರತ್ ಕಾಲೋನಿ ಗೇಟ್ ಹತ್ತಿರ, ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳು.

ಗೋಶಾಲೆ, ಪಿ.ಬಿ. ರಸ್ತೆ, ರವಿ ಮಿಲ್ ಕ್ವಾರ್ಟರ್ಸ್, ಮಹೀಂದ್ರಾ ಶೋ ರೂಂ ಹತ್ತಿರ ಇರುವ ವರ್ಕ್ ಷಾಪ್‌ಗಳು, ಕಾಮತ್ ಹೋಟೆಲ್ ಅಕ್ಕಪಕ್ಕ, ಸುಭಾಷ್ ರಿಫ್ರೆಶ್‌ಮೆಂಟ್ ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ಲಸಿಕೆ : ಪ್ರಮಾಣ ಪತ್ರ !

**(1ನೇ ಪುಟದಿಂದ)** ಸಾಧನೆಯನ್ನು ತೋರಿಸುವ ಉದ್ದೇಶದಿಂದ ಬರುತ್ತಿವೆಯೋ ಎಂಬ ಬಗ್ಗೆ ಸಾರ್ವಜನಿಕ ವಲಯದಲ್ಲಿ ಅನುಮಾನ ಮೂಡಿಸುತ್ತಿದೆ.

ಸದ್ಯ ಜಿಲ್ಲೆಯಲ್ಲಿ ಸಾಕಷ್ಟು ಪ್ರಮಾಣದ ಲಸಿಕೆ ಲಭ್ಯವಿದೆ. ಆದರೆ ಸೋಂಕು ಇಳಿಕೆಯಾದ ಹಿನ್ನೆಲೆಯಲ್ಲಿ ಜನರು ಲಸಿಕೆ ಪಡೆಯಲು ನಿರ್ಲಕ್ಷ್ಯ ವಹಿಸುತ್ತಿರುವುದು ಕಂಡು ಬರುತ್ತಿದೆ. ಜಿಲ್ಲೆಯಲ್ಲಿ 18 ವರ್ಷ ಮೇಲ್ಪಟ್ಟ ವರಿಗೆ ಲಸಿಕೆ ನೀಡಬೇಕಾದ ಗುರಿ ತಲುಪಲು ಇನ್ನೂ ಶೇ.20ಷ್ಟು ಮಂದಿ ಲಸಿಕೆ ಪಡೆಯಬೇಕಿದೆ. ಲಸಿಕಾ ಮೇಳಗಳನ್ನು ನಡೆಸಿ ಲಸಿಕೆ ನೀಡುತ್ತಿದ್ದರೂ ಜನರು ಲಸಿಕೆ ಪಡೆಯಲು ಮುಂದಾಗದಿರುವುದು 'ಯಶಸ್ವಿ ಲಸಿಕೆ' ಸಂದೇಶಗಳ ಅನುಮಾನಕ್ಕೆ ಪುಷ್ಠಿ ನೀಡುತ್ತಿದೆ.

ಪ್ರತಿ ಡೋಸ್ ಕೋವಿಶೀಲ್ಡ್ ಲಸಿಕೆಗೆ 780 ಹಾಗೂ ಕೋವ್ಯಾಕ್ಸಿನ್‌ಗೆ 1410 ರೂಗಳಷ್ಟಿದೆ. ಹೀಗಿರುವಾಗ ನಾವು ಎರಡನೇ ಲಸಿಕೆ ಪಡೆಯದಿದ್ದರೂ ನಮ್ಮ ಹೆಸರಿನಲ್ಲಿ ತೋರಿಸಿರುವ 'ಲಸಿಕೆ'ಯ ಪಾಡೇನು? ಎಂಬುದು ಪ್ರಶ್ನೆ.

## ಆತ್ಮರಕ್ಷಣೆಗೆ ವಿಶೇಷ ತರಬೇತಿ

**(1ನೇ ಪುಟದಿಂದ)** ಪ್ರತ್ಯೇಕವಾಗಿ ಮಾತನಾಡಿದ ಗೃಹ ಸಚಿವ ಆರಗ ಜ್ಞಾನೇಂದ್ರ, 16,000 ಪೊಲೀಸ್ ಹುದ್ದೆಗಳನ್ನು ಭರ್ತಿ ಮಾಡುವುದಾಗಿ ತಿಳಿಸಿದ್ದಲ್ಲದೆ, ಪೊಲೀಸ್ ವಸತಿ ನಿರ್ಮಾಣಕ್ಕಾಗಿ 2,000 ಕೋಟಿ ರೂ, ಮೀಸಲಿಡಲಾಗಿದೆ ಎಂದರು. ಈ ಹಣದಲ್ಲಿ 10,000 ವಸತಿ ಗೃಹಗಳನ್ನು ನಿರ್ಮಾಣ ಮಾಡಲಾಗುವುದು, ಇದಕ್ಕಾಗಿ ಗೃಹ-2025 ಯೋಜನೆಯನ್ನು ಜಾರಿಗೆ ತಂದಿದ್ದು ಇದರಡಿ ವಸತಿ ಸಮುಚ್ಛಯಗಳು ನಿರ್ಮಾಣವಾಗಲಿವೆ ಎಂದರು.

# ಇಂದು ಬೃಹತ್ ಲಸಿಕಾ ಮೇಳ

## ದಾವಣಗೆರೆ ತಾಲ್ಲೂಕಿನಲ್ಲಿ 46800 ಡೋಸ್ ಲಸಿಕೆ ಗುರಿ

ಕೋವಿಡ್-19 ಸೋಂಕು ತಡೆಗಟ್ಟುವ ನಿಟ್ಟಿನಲ್ಲಿ ಸರ್ಕಾರದ ಸೂಚನೆಯಂತೆ ಇಂದು ದಾವಣಗೆರೆ ತಾಲ್ಲೂಕಿನಲ್ಲಿ ಬೃಹತ್ ಲಸಿಕಾ ಮೇಳ ಆಯೋಜಿಸಲಾಗಿದ್ದು, ಇಂದು ಚಿಗಟೇರಿ ಜಿಲ್ಲಾ ಆಸ್ಪತ್ರೆ, ಮಹಾನಗರ ಪಾಲಿಕೆಯ ಎಲ್ಲಾ 45 ವಾರ್ಡ್‌ಗಳು, ತಾಲ್ಲೂಕಿನ 43 ಗ್ರಾಮ ಪಂಚಾಯತ್‌ಗಳು, ಪ್ರಾಥಮಿಕ ಹಾಗೂ ನಗರ ಆರೋಗ್ಯ ಕೇಂದ್ರಗಳಲ್ಲಿ ಒಟ್ಟು 46,800 ಡೋಸ್ ಕೋವಿಶೀಲ್ಡ್ ಹಾಗೂ ಕೋವ್ಯಾಕ್ಸಿನ್ ಲಸಿಕೆ ನೀಡುವ ಗುರಿ ಹೊಂದಲಾಗಿದೆ ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಎಲ್.ಡಿ. ವೆಂಕಟೇಶ್ ತಿಳಿಸಿದ್ದಾರೆ.

ದಾವಣಗೆರೆ ತಾಲ್ಲೂಕಿನಲ್ಲಿ 46,800 ಡೋಸ್ ಲಸಿಕೆ ನೀಡುವ ಗುರಿ ಹಾಕಿಕೊಳ್ಳಲಾಗಿದೆ. 18 ವರ್ಷ ಮೇಲ್ಪಟ್ಟ ಎಲ್ಲಾ ಅರ್ಹ ವ್ಯಕ್ತಿಗಳು ಮೊದಲ ಹಾಗೂ ಎರಡನೇ ಡೋಸ್ ಲಸಿಕೆಯನ್ನು ಹಾಕಿಸಿಕೊಳ್ಳಬಹುದಾಗಿದೆ. ಸಾರ್ವಜನಿಕರು ಲಸಿಕೆ ಪಡೆಯಲು ತೊಂದರೆಯಾಗದ ರೀತಿಯಲ್ಲಿ ಇದೇ ಮೊದಲ ಬಾರಿಗೆ ತಾಲ್ಲೂಕಿನ ಎಲ್ಲಾ ಗ್ರಾಮ ಪಂಚಾಯತಿ, ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ನಗರ ಆರೋಗ್ಯ ಉಪಕೇಂದ್ರಗಳು, ಜಿಲ್ಲಾ ಆಸ್ಪತ್ರೆ ಅಲ್ಲದೇ ಮಹಾನಗರ ಪಾಲಿಕೆ ವ್ಯಾಪ್ತಿಯ ಪ್ರತಿಯೊಂದು ವಾರ್ಡ್‌ನಲ್ಲಿಯೂ ನಿಗದಿತ ಸ್ಥಳದಲ್ಲಿ ಲಸಿಕೆ ನೀಡಲು ವ್ಯವಸ್ಥೆ ಮಾಡಲಾಗಿದೆ.

ದಾವಣಗೆರೆಯ 9 ನಗರ ಆರೋಗ್ಯ ಉಪಕೇಂದ್ರಗಳಲ್ಲಿ ಒಟ್ಟು 3800 ಡೋಸ್ ಕೋವಿಶೀಲ್ಡ್ ಹಾಗೂ 6400 ಡೋಸ್ ಕೋವ್ಯಾಕ್ಸಿನ್.

ಚಿಗಟೇರಿ ಜಿಲ್ಲಾ ಆಸ್ಪತ್ರೆಯಲ್ಲಿ 400 ಡೋಸ್ ಕೋವ್ಯಾಕ್ಸಿನ್, ಎಲ್ಲಾ 43 ಗ್ರಾಮ ಪಂಚಾಯತ್‌ಗಳಿಗೆ ತಲಾ 200 ರಂತೆ ಒಟ್ಟು 8,600 ಡೋಸ್ ಕೋವಿಶೀಲ್ಡ್, ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಒಟ್ಟು 5100 ಡೋಸ್ ಕೋವಿಶೀಲ್ಡ್, 9 ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಯ 45 ವಾರ್ಡ್‌ಗಳಲ್ಲಿ ತಲಾ 500 ಡೋಸ್‌ನಂತೆ ಒಟ್ಟು 22,500 ಡೋಸ್ ಸೇರಿದಂತೆ ಒಟ್ಟಾರೆ 46,800 ಡೋಸ್ ಕೋವಿಶೀಲ್ಡ್ ಲಸಿಕೆಯನ್ನು ಇಂದು ನಿಗದಿತ ಸ್ಥಳದಲ್ಲಿ ನೀಡಲಾಗುವುದು.

ಜಿಲ್ಲೆಯಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಕಡಿಮೆಯಾಗಿದೆ ಎಂದು ಭಾವಿಸಿ, ಲಸಿಕೆ ಪಡೆಯಲು ನಿರ್ಲಕ್ಷ್ಯ ತೋರಬಾರದು. ಎರಡೂ ಡೋಸ್ ಲಸಿಕೆ ಪಡೆದಲ್ಲಿ ಮಾತ್ರ ಕೋವಿಡ್‌ನಿಂದ ರಕ್ಷಣೆ ಪಡೆಯಲು ಸಾಧ್ಯವಾಗಲಿದ್ದು, ಇದುವರೆಗೂ ಲಸಿಕೆ ಪಡೆಯದೇ ಇರುವ 18 ವರ್ಷ ಮೇಲ್ಪಟ್ಟವರು ಮೊದಲನೇ ಡೋಸ್ ಹಾಗೂ ಈಗಾಗಲೇ ಮೊದಲ ಡೋಸ್ ಪಡೆದು ನಿಗದಿತ ಅವಧಿ ಪೂರ್ಣಗೊಂಡವರು ಎರಡನೇ ಡೋಸ್ ಲಸಿಕೆಯನ್ನು ತಪ್ಪದೇ ಪಡೆಯಬೇಕು ಎಂದು ವೆಂಕಟೇಶ್ ಕೋರಿದ್ದಾರೆ.

# ಕೇರಳ : ಸಿಪಿಐ (ಎಂ) ನಾಯಕನ ವಿರುದ್ಧ ಅಪಹರಣ ದೂರು ದಾಖಲಿಸಿದ ಪುತ್ರಿ

ತಿರುವನಂತಪುರಂ, ಅ. 21 – ಕೇರಳದ ಆಡಳಿತಾರೂಢ ಸಿಪಿಐ (ಎಂ)ನ ಹಿರಿಯ ನಾಯಕರೊಬ್ಬರ ವಿರುದ್ಧ ಮೊಮ್ಮಗುವಿನ ಅಪಹರಣದ ಪ್ರಕರಣ ದಾಖಲಿಸಲಾಗಿದೆ. ನವಜಾತ ಶಿಶುವನ್ನು ವರ್ಷದ ಹಿಂದೆ ತನ್ನಿಂದ ದೂರ ಮಾಡಲಾಗಿದೆ ಎಂದು ಸಿಪಿಐ (ಎಂ) ನಾಯಕನ ಮಗಳು ದೂರು ದಾಖಲಿಸಿರುವುದಾಗಿ ಅಧಿಕಾರಿಗಳು ಹೇಳಿದ್ದಾರೆ.

ಸಿಪಿಐ (ಎಂ) ನಾಯಕ ಪಿ.ಎಸ್. ಜಯಚಂದ್ರನ್ ವಿರುದ್ಧ ಅವರ ಮಗಳು ಅನುಪಮ ಎಸ್. ಚಂದ್ರನ್ ಅವರು ದೂರು ದಾಖಲಿಸಿದ್ದಾರೆ. ಏಪ್ರಿಲ್ ನಂತರ ಹಲವು ಬಾರಿ ದೂರು ನೀಡಿದರೂ ಪೊಲೀಸರು ಪ್ರಕರಣ ದಾಖಲಿಸಿಲ್ಲ ಎಂದೂ ಅವರು ಹೇಳಿದ್ದಾರೆ. ಆದರೆ, ಆರು ಜನರ ವಿರುದ್ಧ ಪ್ರಕರಣ ದಾಖಲಿಸಲಾಗಿದೆಯಾದರೂ ಕಾನೂನು ಅಭಿಪ್ರಾಯಕ್ಕಾಗಿ ಕಾಯುತ್ತಿರುವುದಾಗಿ ಪೆರೂರ್ಕಡ ಪೊಲೀಸರು ಹೇಳಿದ್ದಾರೆ.

ಈ ಬಗ್ಗೆ ಖಾಸಗಿ ಸುದ್ದಿ ವಾಹಿನಿಯೊಂದಿಗೆ ಮಾತನಾಡಿರುವ ಅನುಪಮ, ಕಾಣೆಯಾಗಿರುವ ತನ್ನ ಮಗುವಿನ ಬಗ್ಗೆ ದೂರು ನೀಡಿದಾಗ ಪೊಲೀಸರು ಈ ರೀತಿ ವರ್ತಿಸುತ್ತಾರೆಯೇ? ಅವರು ಇಂತಹ ಪ್ರಕರಣಗಳಲ್ಲಿ ಕಾನೂನು ಅಭಿಪ್ರಾಯಕ್ಕಾಗಿ ಕಾಯುತ್ತಾರೆಯೇ? ತನ್ನ ತಂದೆ ಹಾಗೂ ಕುಟುಂಬದ ಸದಸ್ಯರನ್ನು ರಕ್ಷಿಸಲು ಉದ್ದೇಶಪೂರ್ವಕವಾಗಿ ವಿಳಂಬ ಮಾಡಲಾಗುತ್ತಿದೆ ಎಂದು ಹೇಳಿದ್ದಾರೆ.

ಅಜಿತ್ ಜೊತೆ ತಾನು ಹೊಂದಿದ್ದ ಸಂಬಂದವನ್ನು ತಂದೆ - ತಾಯಿಗಳು ಒಪ್ಪಿರಲಿಲ್ಲ. ಮದುವೆ ಬಾಹಿರವಾಗಿ ಜನಿಸಿದ ಗಂಡು ಮಗವನ್ನು ಆಸ್ಪತ್ರೆಯಿಂದ ಬಿಡುಗಡೆಯಾದ ಮೂರು ದಿನಗಳ ನಂತರ ಅಪಹರಿಸಲಾಗಿದೆ ಎಂದವರು ಹೇಳಿದ್ದಾರೆ.

ಆದರೆ, ಮಗಳ ಒಪ್ಪಿಗೆಯೊಂದಿಗೆ ಮೊಮ್ಮಗುವನ್ನು ಸರ್ಕಾರಿ ಅನಾಥಾಶ್ರಮಕ್ಕೆ ನೀಡಿರುವುದಾಗಿ ಜಯಚಂದ್ರನ್ ತಿಳಿಸಿದ್ದಾರೆ. ಈ ಬಗ್ಗೆ ಅವರು ಲಿಖಿತ ಸಮ್ಮತಿಯ ಛಾಪಾ ಕಾಗದವನ್ನು ಹಾಜರುಪಡಿಸಿದ್ದಾರೆ. ಈ ಒಪ್ಪಿಗೆ ಪತ್ರ ಬಲವಂತದಿಂದ ಪಡೆದಿರುವುದು ಎಂದು ಅನುಪಮ ದೂರಿನಲ್ಲಿ ತಿಳಿಸಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

## ಜಾನಪದ ಗೀತೆ ಸ್ಪರ್ಧೆಯಲ್ಲಿ ಬಸವರಾಜ್ ಪ್ರಥಮ ಸ್ಥಾನ



ದಾವಣಗೆರೆ, ಅ.21- ವಿಶ್ವ ಹಿರಿಯ ನಾಗರಿಕರ ದಿನಾಚರಣೆ ಅಂಗವಾಗಿ ನಗರದ ಡಾ. ಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ ಹಿರೇಮಠದಲ್ಲಿ ಏರ್ಪಡಿಸಿದ್ದ ಸಾಂಸ್ಕೃತಿಕ ಸ್ಪರ್ಧೆಯ ಜಾನಪದ ಗೀತೆ ಗಾಯನ ಹಾಗೂ ಏಕಪಾತ್ರ ಅಭಿನಯದಲ್ಲಿ ಕ್ರಮವಾಗಿ ಪ್ರಥಮ, ದ್ವಿತೀಯ ಬಹುಮಾನ ಪಡೆದ ಡಿ. ಬಸವರಾಜ್ ಅವರಿಗೆ ಎಸ್.ಟಿ. ಕುಸುಮ ಶ್ರೇಷ್ಠಿ ಹಾಗೂ ಗುರುಮೂರ್ತಿ ಅವರು ಪ್ರಮಾಣ ಪತ್ರ ವಿತರಿಸಿದರು.

## ಚಹ ಅಂಗಡಿಯಲ್ಲಿ ಮತ್ತೆ ಕಳ್ಳತನ

ದಾವಣಗೆರೆ, ಅ.21- ಇಲ್ಲಿನ ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್‌ನ ಶ್ರೀ ಬೀರೇಶ್ವರ ವ್ಯಾಯಾಮ ಶಾಲೆ ಪಕ್ಕದಲ್ಲಿದ್ದ ನಾಗಣ್ಣ ಚಹ ಅಂಗಡಿಯಲ್ಲಿ ಬುಧವಾರ ತಡ ರಾತ್ರಿ ಮತ್ತೆ ಕಳ್ಳತನವಾಗಿದೆ. ಗಾಡಿಗೆ ಹಾಕಲಾಗಿದ್ದ ಎರಡೂ ಬೀಗಗಳನ್ನು ಒಡೆದು ಗ್ಯಾಸ್ ಸಿಲಿಂಡರ್, ಗ್ಯಾಸ್ ಸ್ಟೌವ್, ಪ್ಲಾಸ್ಕ್ ಇನ್ನಿತರೆ ಸಣ್ಣ-ಪುಟ್ಟ ಸಾಮಾನುಗಳನ್ನು ಕಳ್ಳರು ದೋಚಿದ್ದಾರೆ ಮಂಗಳವಾರ ತಡರಾತ್ರಿ ಇದೇ ಅಂಗಡಿ ಗಾಡಿಗೆ ಹಾಕಲಾಗಿದ್ದ ಮೂರು ಬೀಗಗಳನ್ನು ಹೊಡೆದು, ಸುಮಾರು ಎರಡು ಸಾವಿರ ರೂ. ನಗದು ಸೇರಿದಂತೆ 8 ಸಾವಿರ ಮೌಲ್ಯದ ವಿಮಲ್, ಸಿಗರೇಟ್ ಪ್ಯಾಕ್ ಗಳನ್ನು ಕಳ್ಳರು ದೋಚಿದ್ದನ್ನು ಸ್ಮರಿಸಬಹುದು. ಎರಡು ಬಾರಿ ಘಟಿಸಿದ ಈ ಕಳ್ಳತನದ ಕೃತ್ಯದಿಂದಾಗಿ ತೀವ್ರ ಘಾಸಿಗೊಳಗಾಗಿರುವ ನಾಗಣ್ಣ ಪೊಲೀಸರಿಗೆ ದೂರು ನೀಡುವುದಾಗಿ ಹೇಳಿದರು.

## ಸೇತುವೆಗೆ ಆಗ್ರಹಿಸಿ ಇಂದು ಹೆದ್ದಾರಿ ತಡೆ

ರಾಷ್ಟ್ರೀಯ ಹೆದ್ದಾರಿಯ ಮಲ್ಲಶೆಟ್ಟಿಹಳ್ಳಿ ಬಳಿ ಸೇತುವೆ ನಿರ್ಮಿಸಬೇಕೆಂದು ಒತ್ತಾಯಿಸಿ, ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯಿದ ಇಂದು ಬೆಳಿಗ್ಗೆ 11 ಕ್ಕೆ ಹೆದ್ದಾರಿ ತಡೆ ನಡೆಸಲಾಗುವುದು ಎಂದು ರೈತ ಸಂಘದ ಜಿಲ್ಲಾಧ್ಯಕ್ಷ ಮಲ್ಲಶೆಟ್ಟಿ ಹಳ್ಳಿ ಚನ್ನಬಸಪ್ಪ ತಿಳಿಸಿದರು.

## ಸಾರ್ವಜನಿಕ ಪ್ರಕಟಣೆ

ದಾವಣಗೆರೆ ತಾಲ್ಲೂಕು ಕೋಡಿಹಳ್ಳಿ ಗ್ರಾಮದ ಜಿರಾಯಿತು ಕಸುಬಿನ ಶ್ರೀ ಮಂಜುನಾಥ ಬಿನ್ ತೋಟನಗೌಡ ಕೊಟ್ಟ ಸಾರ್ವಜನಿಕ ಪ್ರಕಟಣೆ.

ನಾನು ಕೋಡಿಹಳ್ಳಿ ಗ್ರಾಮದ ರಿ.ಸ.ನಂ. 52/3 ರಲ್ಲಿ 4 ಎಕರೆ, 0.08 ಗುಂಟೆ ಜಮೀನಿನ ಮಾಲೀಕನಿರುತ್ತೇನೆ. ನನಗೆ ಹಣದ ಅವಶ್ಯಕತೆ ಇದ್ದ ಕಾರಣ ನಾನು ದಾವಣಗೆರೆ ನಗರದ ತರಳಬಾಳು ಬಡಾವಣೆ ಮನೆ. ನಂ. 1752/31ನೇ ಮನೆಯಲ್ಲಿ ವಾಸವಾಗಿರುವ ಹಾಗೂ ಬಂಡೇಬೊಮ್ಮನಹಳ್ಳಿ ಗ್ರಾಮ, ಹೊಳಲ್ಕೆರೆ ತಾಲ್ಲೂಕು ವಾಸವಾಗಿರುವ ಶ್ರೀ ಬಿ.ಆರ್. ಪ್ರಕಾಶ್ ಬಿನ್ ಬಿ.ಸಿ. ರುದ್ರಪ್ಪ ಇವರಿಂದ ರೂ. 10,00,000/- (ರೂಪಾಯಿ ಹತ್ತು ಲಕ್ಷ ಮಾತ್ರಗಳನ್ನು ಸಾಲವಾಗಿ ತೆಗೆದುಕೊಂಡಿರುತ್ತೇನೆ. ಸಾಲದ ಅಸಲು ಮತ್ತು ಬಡ್ಡಿಯ ಭದ್ರತೆಗಾಗಿ ಶ್ರೀ ಬಿ.ಆರ್. ಪ್ರಕಾಶ್ ಇವರು ನನ್ನಿಂದ ದಿನಾಂಕ: 24-12-2020 ರಂದು ನಾಮಕಾವಸ್ಥೆ ಕ್ರಯ ಪತ್ರ ಬರೆಯಿಸಿಕೊಂಡಿರುತ್ತಾರೆ. ಅದೇ ದಿವಸ ಅಸಲು ಮತ್ತು ಬಡ್ಡಿ ಪಾವತಿ ಮಾಡಿದ ಕೂಡಲೇ ವಾಪಸ್ಸು ಕ್ರಯಪತ್ರವನ್ನು ಬರೆದುಕೊಡುವುದಾಗಿ ಕರಾರನ್ನು ಸಹ ಬರೆದುಕೊಟ್ಟಿರುತ್ತಾರೆ. ಕರಾರಿನ ಅನ್ವಯ ನಾನು ಅಸಲು ಮತ್ತು ಬಡ್ಡಿ ಹಣವನ್ನು ತೆಗೆದುಕೊಂಡು ಕ್ರಯಪತ್ರ ಬರೆದುಕೊಡಬೇಕೆಂದು ಕ್ರಮವನ್ನು ತೆಗೆದುಕೊಂಡಿರುತ್ತೇನೆ. ಈ ಮಧ್ಯೆ ಶ್ರೀ ಬಿ.ಆರ್. ಪ್ರಕಾಶ್ ಇವರು ಮೇಲೆ ಹೇಳಿದ ಜಮೀನನ್ನು ಪರಭಾರೆ ಮಾಡುವ ಪ್ರಯತ್ನದಲ್ಲಿ ಇದ್ದಾರೆಂದು ತಿಳಿದುಬಂದಿರುತ್ತದೆ.

ಆದ್ದರಿಂದ ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ಷೆಡ್ಯೂಲ್‌ನಲ್ಲಿ ವಿವರಿಸಿದ ಜಮೀನಿನ ಬಾಬ್ತು ಶ್ರೀ ಬಿ.ಆರ್. ಪ್ರಕಾಶ್ ಬಿನ್ ಬಿ.ಸಿ. ರುದ್ರಪ್ಪ ಇವರೊಡನೆ ಸಾರ್ವಜನಿಕರು ಯಾವುದೇ ವ್ಯವಹಾರ ಮಾಡಬಾರದಾಗಿ ಕೊಟ್ಟ ಸಾರ್ವಜನಿಕ ಪ್ರಕಟಣೆ.

ಒಂದು ವೇಳೆ ಸಾರ್ವಜನಿಕರು ಷೆಡ್ಯೂಲ್ ಜಮೀನಿನ ಬಾಬ್ತು ಶ್ರೀ ಬಿ.ಆರ್. ಪ್ರಕಾಶ್ ಇವರೊಂದಿಗೆ ಯಾವುದೇ ರೀತಿಯ ವ್ಯವಹಾರ ಮಾಡಿದಲ್ಲಿ ಮುಂದೆ ಉಂಟಾಗುವ ತೊಂದರೆ ಮತ್ತು ನಷ್ಟಕ್ಕೆ ಅವರವರೇ ಜವಾಬ್ದಾರರಾಗಿರುತ್ತಾರೆ ತಿಳಿಯುವುದು.

**ಷೆಡ್ಯೂಲ್ :** ದಾವಣಗೆರೆ ತಾಲ್ಲೂಕು, ಕೋಡಿಹಳ್ಳಿ ಗ್ರಾಮದ ರಿ.ಸ.ನಂ. 52/3, ಖರಾಬು ಸಹಿತ ವಿಸ್ತೀರ್ಣ, 4 ಎಕರೆ, 0.08 ಗುಂಟೆ (4-0.08) ವುಳ್ಳ ಜಮೀನಿನ ಚಕ್ಕುಬಂದಿ : ಪೂರ್ವಕ್ಕೆ - ಗುತ್ತೂರು ದಾರಿ. ಪಶ್ಚಿಮಕ್ಕೆ - ಅಮರಾವತಿ ಗಡಿ. ಉತ್ತರಕ್ಕೆ - ಶ್ರೀ ಗೌಡರ ಬಸಪ್ಪನವರ ಜಮೀನು. ದಕ್ಷಿಣಕ್ಕೆ - ಶ್ರೀ ಬ್ರಹ್ಮಪ್ಪನವರ ಜಮೀನು.

**ಜೆ. ಎನ್. ವಸಂತಕುಮಾರ್,** B.Sc. LL.B.,
ವಕೀಲರು
ಡೋರ್ ನಂ. 304, ದೀಕ್ಷಿತ್ ರೋಡ್,
ದಾವಣಗೆರೆ - 577 002.

**ಎಂ.ಟಿ. ಮಂಜುನಾಥ**

# ಇಂದಿನಿಂದ ರಾಜ್ಯಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟ


ದಾವಣಗೆರೆ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಇಂದಿನಿಂದ ಮೂರು ದಿನ ರಾಜ್ಯಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟ ನಡೆಯಲಿದೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಸರ್ಕಾರಿ ನೌಕರರ ಸಂಘದ ಸಂಯುಕ್ತಾಶ್ರಯದಲ್ಲಿ 35 ಕ್ಕೂ ಹೆಚ್ಚು ಕ್ರೀಡೆಗಳು ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳು ಜರುಗಲಿದ್ದು, ರಾಜ್ಯದ ವಿವಿಧ ಜಿಲ್ಲೆಗಳಿಂದ ಸುಮಾರು 7150 ಪುರುಷ ಮತ್ತು ಮಹಿಳಾ ಕ್ರೀಡಾಪಟುಗಳು ಈಗಾಗಲೇ ಹೆಸರು ನೋಂದಾಯಿಸಿಕೊಂಡಿದ್ದಾರೆ.

1.50 ಕೋಟಿ ರೂ. ವೆಚ್ಚದಲ್ಲಿ ಈ ಕ್ರೀಡಾಕೂಟ ನಡೆಯಲಿದ್ದು, ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಆಕರ್ಷಕ ಟ್ರೋಫಿ ನೀಡಲಾಗುವುದು.

ಅಥ್ಲೆಟಿಕ್ಸ್, ವಾಲಿಬಾಲ್, ಕಬಡ್ಡಿ, ಫುಟ್ ಬಾಲ್, ಹಾಕಿ, ಥ್ರೋಬಾಲ್, ಟೆನ್ನಿಸ್, ಚೆಸ್, ಕೇರಂ, ಷಟಲ್ ಬ್ಯಾಡ್ಮಿಂಟನ್, ಬ್ಯಾಸ್ಕೆಟ್ ಬಾಲ್, ಪವರ್ ಲಿಫ್ಟಿಂಗ್, ಕುಸ್ತಿ, ಕ್ರಿಕೆಟ್, ಈಜು ಸೇರಿದಂತೆ ವಿವಿಧ ಕ್ರೀಡೆಗಳು ನಡೆಯಲಿವೆ.

ಕರ್ನಾಟಕ, ಹಿಂದೂಸ್ತಾನಿ ಸಂಗೀತ, ಲಘು ಶಾಸ್ತ್ರೀಯ ಸಂಗೀತ, ಕರ್ನಾಟಕ ಲಘು ಶಾಸ್ತ್ರೀಯ ಸಂಗೀತ, ಜಾನಪದ ಗೀತೆ, ಭರತ ನಾಟ್ಯ, ಕಥಕ್, ಕೂಚುಪುಡಿ, ಒಡಿಸ್ಸಿ ಮುಂತಾದ ನೃತ್ಯ ಸ್ಪರ್ಧೆಗಳು ಜರುಗಲಿವೆ.



ಕ್ರೀಡೆಗಳು ಜಿಲ್ಲಾ ಕ್ರೀಡಾಂಗಣ, ಬಿಐಇಟಿ ಕಾಲೇಜು ಮೈದಾನ, ಜಿಎಂಐಟಿ ಕಾಲೇಜು ಮೈದಾನ, ತರಳಬಾಳು ಪದವಿ ಪೂರ್ವ ಕಾಲೇಜು, ಮೋತಿ ವೀರಪ್ಪ ಕಾಲೇಜು ಮೈದಾನಗಳು, ಆಫೀಸರ್ಸ್ ಕ್ಲಬ್, ನೇತಾಜಿ ಸುಭಾಸ್ ಚಂದ್ರಬೋಸ್ ಒಳಾಂಗಣ ಕ್ರೀಡಾಂಗಣ, ಎಂಬಿಎ ಕಾಲೇಜು ಕ್ರೀಡಾಂಗಣ, ಗುರುಭವನ, ಮಾಗನೂರು ಬಸಪ್ಪ ಕಾಲೇಜು ಮೈದಾನ, ಆಂಜನೇಯ ಬಡಾವಣೆಯ ಒಳಾಂಗಣ ಕ್ರೀಡಾಂಗಣ, ಹೈಸ್ಕೂಲ್ ಮೈದಾನ, ಸರ್ಕಾರಿ ನೌಕರರ ಭವನ ಸೇರಿದಂತೆ ವಿವಿಧ ಕಡೆಗಳಲ್ಲಿ ಕ್ರೀಡಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು ನಡೆಯಲಿವೆ.

ಇಂದಿನಿಂದ ಮೂರು ದಿನ ಪ್ರತಿ ದಿನ ಸಂಜೆ 6.30 ಕ್ಕೆ ಜಿಲ್ಲಾ ಕ್ರೀಡಾಂಗಣದಲ್ಲಿ 'ಸಂಗೀತ ಸಂಜೆ' ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಇಂದು ಖ್ಯಾತ ಗಾಯಕ ವಿಜಯ್ ಪ್ರಕಾಶ್, ಶಮಿತಾ ಮಲ್ನಾಡ್, ಚೈತ್ರಾ ಮತ್ತು ಸಂಗಡಿಗರು ಕಾರ್ಯಕ್ರಮ ನಡೆಸಿಕೊಡಲಿದ್ದಾರೆ.

ನಾಳೆ ಶನಿವಾರ ಸಂಜೆ 6.30 ಕ್ಕೆ ಚಿತ್ರರಂಗದ ಕಲಾವಿದರು, ಕಾಮಿಡಿ ಕಿಲಾಡಿಗಳು, ಸರಿಗಮಪ ಖ್ಯಾತಿಯ ಹೆಸರಾಂತ ಕಲಾವಿದರ ಹಾಸ್ಯ, ನೃತ್ಯ ಮತ್ತು ಗಾಯನದ ಮನೋರಂಜನಾ ಮಹಾಸಂಗಮ ನಡೆಯಲಿದೆ. ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್. ಷಡಾಕ್ಷರಿ, ಜಿಲ್ಲಾಧ್ಯಕ್ಷ ಬಿ. ಪಾಲಾಕ್ಷಿ ಮತ್ತು ಸಂಘದ ಸರ್ವ ಪದಾಧಿಕಾರಿಗಳ ನೇತೃತ್ವದಲ್ಲಿ ಮೂರು ದಿನಗಳ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧಾ ಕಾರ್ಯಕ್ರಮಗಳು ನಡೆಯಲಿವೆ.

**ಉದ್ಘಾಟನಾ ಸಮಾರಂಭ:** ಇಂದು ಸಂಜೆ 4.30 ಕ್ಕೆ ಜಿಲ್ಲಾ ಕ್ರಿಡಾಂಗಣದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಮಾರಂಭವನ್ನು ಉದ್ಘಾಟಿಸುವರು. ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್. ಷಡಾಕ್ಷರಿ ಅಧ್ಯಕ್ಷತೆ ವಹಿಸಲಿದ್ದಾರೆ.

ಕ್ರೀಡಾ ಸಚಿವ ಕೆ.ಸಿ. ನಾರಾಯಣಗೌಡ ಕ್ರೀಡಾಜ್ಯೋತಿ ಸ್ವೀಕರಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಧ್ವಜಾರೋಹಣ ನೆರವೇರಿಸಲಿದ್ದು, ಸಂಸದ ಜಿ.ಎಂ. ಸಿದ್ದೇಶ್ವರ ಕ್ರೀಡಾ ಪ್ರತಿಜ್ಞಾ ವಿಧಿ ಸ್ವೀಕರಿಸಲಿದ್ದಾರೆ.

ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ, ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್.ವಿ. ರಾಮಚಂದ್ರ, ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮದ ಅಧ್ಯಕ್ಷ ಮಾಡಾಳು ವಿರೂಪಾಕ್ಷಪ್ಪ, ಡಾ. ಬಾಬು ಜಗಜೀವನರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಪ್ರೊ. ಲಿಂಗಣ್ಣ, ಶಾಸಕರಾದ ಡಾ. ಶಾಮನೂರು ಶಿವಶಂಕರಪ್ಪ, ಎಸ್. ರಾಮಪ್ಪ, ಎಸ್.ಎ. ರವೀಂದ್ರನಾಥ್, ಮೇಯರ್ ಎಸ್.ಟಿ. ವೀರೇಶ್, ದೂಡಾ ಅಧ್ಯಕ್ಷ ದೇವರಮನಿ ಶಿವ ಕುಮಾರ್ ಮುಂತಾದ ಗಣ್ಯರು ಭಾಗವಹಿಸಲಿದ್ದಾರೆ.

# ಕಣ್ಣಿಲ್ಲದ ಲೋಕಕ್ಕೆ ಕಣ್ಣು ಕೊಟ್ಟ ಡಾಕ್ಟರ್

ಎಷ್ಟೋ ಜನರಿಗೆ ಹುಟ್ಟುತ್ತಲೇ ಕಣ್ಣಿರುವುದಿಲ್ಲ. ಅದು ಮನುಷ್ಯನ ಸಾಧ್ಯತೆಯನ್ನು ಮೀರಿಸಿದ ನಿಸರ್ಗದ ಸೃಷ್ಟಿ.

ಅದರ ಮುಂದೆ ಮನುಷ್ಯ ನಿಸ್ಸಹಾಯಕ. ಆದರೆ, ಇನ್ನು ಕೆಲವು ಜನರಿಗೆ ಕಣ್ಣಿರುತ್ತವೆ. ಲೋಕದ ಮೇಲಿನ ಎಲ್ಲವೂ ಕಾಣುತ್ತವೆ ಕೂಡಾ. ಆದರೆ, ಅವರಲ್ಲಿ ಕಾಣಬೇಕಾದ್ದನ್ನೇ ಕಾಣಲೊಪ್ಪದೆ ಮನಸಿನ ತುಂಬಾ ಅಹಮ್ಮಿನ ಕುರುಡುತನ ಆವರಿಸಿಬಿಟ್ಟಿರುತ್ತದೆ.

ಈ ಅಹಮ್ಮಿಗೆ ಜಾತಿ ಮೇಲರಿಮೆ, ಶ್ರೀಮಂತಿಕೆ, ಅಧಿಕಾರ ಮುಂತಾದ ಅಹಂಕಾರಗಳು ಸೇರಿದರಂತೂ ಮುಗಿದೇ ಹೋಯಿತು. ಹೃದಯವಿದ್ದರೂ ಅದು ಕಲ್ಲಿನಂತಿರುತ್ತದೆ. ಅಲ್ಲಿ ಮನುಷ್ಯತ್ವ ಮಿಡಿಯುವುದೇ ಇಲ್ಲ.


ಈ ವಿಕಾರಗಳೆಲ್ಲವೂ ಜಾತಿಗ್ರಸ್ತ ಭಾರತದಲ್ಲಿ ಅತ್ಯಂತ ಸಹಜವೆಂಬಂತೆ ಈ ಹೊತ್ತಿಗೂ ನಡೆಯುತ್ತಲೇ ಇರುತ್ತವೆ.

ಇದೆಲ್ಲವನ್ನೂ ಯಾಕೆ ಹೇಳಬೇಕಾಯ್ತೆಂದರೆ, ಕೆಲವೇ ದಶಕಗಳ ಹಿಂದೆ ಮುಟ್ಟಿಸಿಕೊಳ್ಳಬಾರದವರೆಂದು ಹಣೆಪಟ್ಟಿ ಹಚ್ಚಿಸಿಕೊಂಡು ಅಸ್ಪೃಶ್ಯರೆಂದು ಊರಾಚೆ ತಳ್ಳಲ್ಪಟ್ಟ ಸಮುದಾಯದ ಹುಡುಗನೊಬ್ಬನಿದ್ದ. ಆತ ಹುಟ್ಟಿ ಬೆಳೆದದ್ದು ದಲಿತರ ಕೇರಿ. ನೋವುಗಳೇ ತುಂಬಿದ ಕೇರಿಯಾಚೆಗೆ ಆತ ಜಿಗಿಯಬಯಸಿದ. ಜಾತಿ, ಬಡತನ, ಅಸ್ಪೃಶ್ಯತೆಗಳ ಕಾರಣಕ್ಕೆ ಅತಿ ಕ್ರೂರ ಅವಮಾನಗಳನ್ನು ಅನುಭವಿಸಿದ. ಆದರೆ, ಅದೆಲ್ಲವನ್ನೂ ಮೀರಿ ಬೆಳೆದ. ಅಗಾಧ ಓದಿನ ಬಲದಿಂದ ಅಪಾರ ಜ್ಞಾನ ಪಡೆದ.

ವಿಶೇಷವೆಂದರೆ ತಾನು ಪಡೆದ ಆ ಜ್ಞಾನ, ಪ್ರತಿಭೆಗಳೆಲ್ಲವನ್ನೂ ನೊಂದ ಜನರ ನೋವು ನಿವಾರಣೆಗೆ ಬಳಸಿದ. ತನ್ನನ್ನು ಜಾತಿ ಕಾರಣಕ್ಕೆ ನೋಯಿಸಿದವರೂ ಸಹ ಕಣ್ಣು ಕಳಕೊಂಡು ಕಟ್ಟ ಕಡೆಯದಾಗಿ ದೈನೇಸಿಯಾಗಿ ಬಂದು ತನ್ನೆದುರು ನಿಂತಾಗಲಂತೂ ಇನ್ನಷ್ಟು ಮಾನವ ಪ್ರೀತಿಯಿಂದ ಅವರನ್ನು ಮುಟ್ಟಿ ಮಾತಾಡಿಸಿ ಸಂತೈಸಿದ. ಅವರಿಗೆ ಕಣ್ಣು ಕೊಟ್ಟ.

ಅಲ್ಲಿ ಆಧುನಿಕ ಅಂಗುಲಿಮಾಲರ ಕ್ರೌರ್ಯದ ಎದುರು ಬುದ್ಧನ ಕರುಣೆ ಮರುಹುಟ್ಟು ಪಡೆದಿತ್ತು.

ಆ ಮಹಾನ್ ಕರುಣೆಯೇ ಡಾ.ಬಿ.ಎಂ.ತಿಪ್ಪೇಸ್ವಾಮಿಗಳಾಗಿ ರೂಪ ತಳೆದಿತ್ತು.




ಕನ್ನಡದ ಮೇರು ಲೇಖಕ ಪಿ.ಲಂಕೇಶರ ಅತ್ಯಂತ ಮನಮಿಡಿಯುವಂತ ರೂಪಕಾತ್ಮಕವಾದ ಬರೆಹ 'ಮುಟ್ಟಿಸಿಕೊಂಡವನು' ಬರೆದದ್ದು, ಇದೇ ತಿಪ್ಪೇಸ್ವಾಮಿಗಳ ಬಗೆಗೆ.

ಅಪರಿಮಿತ ಜ್ಞಾನ ಮತ್ತು ಮಾನವೀಯತೆಗಳು ಏಕೀಭವಿಸಿದ ತಿಪ್ಪೇಸ್ವಾಮಿಯವರು ದಾವಣಗೆರೆ ಚಿತ್ರದುರ್ಗ ಭಾಗದ ಹಳ್ಳಿಗಾಡಿನ ಜಾತಿ ಮೀರಿ ಬಡವರ ಬದುಕಿಗೆ ನೆರವಾದರು.

ಕಾಯಿಲೆಗಳು ಮತ್ತು ನೋವುಗಳು ಮನುಷ್ಯನ ಅಹಮ್ಮಿನ ಕೋಟೆಗಳನ್ನು ನುಚ್ಚು ನೂರು ಮಾಡುವ ಬಲಶಾಲಿ ಆಯುಧಗಳು. ಸಾವು ಮತ್ತು ಬದುಕಿನ ಹೋರಾಟದ ಹೊಸ್ತಿಲಿಗೆ ಬಂದು ನಿಂತಾಗಲಂತೂ ಮನುಷ್ಯ ತನ್ನ ಜೀವ ಉಳಿದರೆ ಸಾಕೆನ್ನುವ ಅನಿವಾರ್ಯತೆಗೆ ಸಿಲುಕುತ್ತಾನೆ. ಆಗ ಆತನಲ್ಲಿ ಅಪ್ಪಟ ಮನುಷ್ಯನೊಬ್ಬ ಬದುಕುಳಿಯಲಿಕ್ಕಾಗಿ ಚಡಪಡಿಸುತ್ತಾನೆ. ಅದುವರೆಗೆ ಜಾತಿಯನ್ನು ಕಾಪಾಡಿಕೊಂಡಿದ್ದವನು ತನಗೆ ಎರಗಿದ ಕಾಯಿಲೆಯಿಂದ ತನ್ನನ್ನು ಪಾರು ಮಾಡಲು ಬರುವ ವೈದ್ಯ ಯಾವ ಜಾತಿಯಾದರೇನು, ತನ್ನ ಜೀವ ಉಳಿದರೆ ಸಾಕೆನ್ನುವ ತಹತಹದಲ್ಲಿರುತ್ತಾನೆ. ಹಾಗೆ ನೋಡಿದರೆ, ಭಾರತದಂತಹ ದೇಶದಲ್ಲಿ ಪ್ರತಿ ಜಾತಿವಂತನೂ ತನ್ನ ಜಾತಿಮೀರಿ ವಿಶ್ವಮಾನವನಾಗುವುದು ಸಾವಿನ ದವಡೆಯಲ್ಲಿ ಸಿಕ್ಕಿಕೊಂಡಾಗ ಮಾತ್ರ.

ಅಂತಹ ಸಾವಿನ ದವಡೆಗೆ ಸಿಕ್ಕಿಕೊಂಡ ಸರ್ವ ಜಾತಿಗಳ ಸಾವಿರ ಸಾವಿರ ಜನರನ್ನು ತಿಪ್ಪೇಸ್ವಾಮಿಗಳು ಉಳಿಸಿದ್ದಾರೆ. ದಾವಣಗೆರೆ, ಚಿತ್ರದುರ್ಗದ ಹಳ್ಳಿಗಾಡಲ್ಲಿ ಅಡ್ಡಾಡುವಾಗ ಜನ ಈಗಲೂ ಕೃತಜ್ಞತೆಯಿಂದ ನೆನೆಯುವುದನ್ನು ನೋಡಿದರೆ ಡಾಕ್ಟರ್ ಎಂತಹ ಮನುಷ್ಯ ಪ್ರೇಮಿ ಎಂಬುದು ತಿಳಿಯುತ್ತದೆ. ಈಗಲೂ ಅವರ ಹೆಸರು ಜನರ ನೆನಪಿನಲ್ಲಿ ಡಾಕ್ಟರು ಅಂತ ಮಾತ್ರ ಉಳಿದಿದೆ.

ಕಣ್ಣಿನ ಕಾರಣಕ್ಕಾಗಿ ಅಷ್ಟೇ ಅಲ್ಲ, ಬಡವರ ಹುಡುಗರ ಓದಿಗೆ, ಹಸಿದಾಗ ಅನ್ನಕ್ಕೆ, ತಲೆ ಮೇಲೊಂದು ಸೂರಿಗೆ. ಹೀಗೆ ತಿಪ್ಪೇಸ್ವಾಮಿಯವರು ತಾನು ಬದುಕಿದ್ದಷ್ಟೂ ದಿನ ಹತ್ತಾರು ವಿಧದಲ್ಲಿ ನೆರವಾದರು. ಡಾ. ತಿಪ್ಪೇಸ್ವಾಮಿಗಳು ದಲಿತ ಲೋಕ ಕಂಡ ಅತಿ ದೊಡ್ಡ ಕಣ್ಣಿನ ಡಾಕ್ಟರ್. ಕಣ್ಣಿಲ್ಲದ ಲೋಕಕ್ಕೆ ಕಣ್ಣಾದ ಮಹಾಮಾನವ.

ಆ ಕಾಲಕ್ಕೆ ಅಕ್ಷರಸ್ಥರೇ ಇಲ್ಲದ ಜಾತಿಯಲ್ಲಿ ಓದಿ ಜನಪರ ವೈದ್ಯರಾಗಿ ಹೆಸರಾದ ಕಾರಣಕ್ಕೆ ರಾಜಕಾರಣದ ಅಂಗಳಕ್ಕೆ ಪ್ರವೇಶ ದೊರೆಯಿತು. ಶಾಸಕರಾಗಿ ಅಧಿಕಾರವೂ ದಕ್ಕಿತು. ಅಧಿಕಾರ ಸಿಕ್ಕಿದ್ದಕ್ಕೆ ಡಾಕ್ಟರ್ ಎಂದೂ ಹಿಗ್ಗಲಿಲ್ಲ. ಸಮಕಾಲೀನ ವೃತ್ತಿರಾಜಕಾರಣಿಗಳ ಹಾಗೆ ದರ್ಪ, ದವಲತ್ತು ತೋರಿದವರಲ್ಲ. ಇತರರ ಹಾಗೆ ತನ್ನದೇ ಆದ ಪಟಾಲಂ ಕಟ್ಟಲಿಲ್ಲ. ಸ್ವಂತಕ್ಕೆ, ತನ್ನ ಮಕ್ಕಳು ಮರಿಗಾಗಿ ಆಸ್ತಿ ಮಾಡಲಿಲ್ಲ. ಸಾಯುವವರೆಗೂ ತಾನು ಅಧಿಕಾರದಲ್ಲಿರಬೇಕೆಂಬ ವ್ಯಸನ ಡಾಕ್ಟರಿಗೆ ಎಂದಿಗೂ ಇರಲಿಲ್ಲ.

ಬದಲಿಗೆ ಆ ಅಧಿಕಾರವನ್ನೂ ಕೂಡಾ ನೊಂದವರ ನೆರವಿಗೆ ಬಳಸಿದರು.

ದಲಿತ ರಾಜಕಾರಣವು ತಾತ್ವಿಕವಾಗಿ ಹೇಗೆ ಜನಪರವಾಗಿ ಹಾಗೂ ಪ್ರಜಾಸತ್ತಾತ್ಮಕವಾಗಿ ಇರಬೇಕೆಂಬ ಆಶಯದ ಪ್ರತಿರೂಪವಾಗಿದ್ದವರು ತಿಪ್ಪೇಸ್ವಾಮಿಯವರು. ಅಂಬೇಡ್ಕರ್ ಕಂಡ ದಲಿತ ರಾಜಕೀಯದ ಆಶಯಗಳನ್ನು ಕನ್ನಡ ನೆಲದಲ್ಲಿ ತನ್ನ ಬದುಕಿನುದ್ದಕ್ಕೂ ಅಳವಡಿಸಿಕೊಂಡು ಬದುಕಿದ್ದ ಕೆಲವೇ ಕೆಲವರಲ್ಲಿ ತಿಪ್ಪೇಸ್ವಾಮಿಯವರು ಮೊದಲಿಗರೆಂದರೆ ತಪ್ಪೇನಲ್ಲ.

ಸರಳತೆ, ಸಜ್ಜನಿಕೆಯ ವ್ಯಕ್ತಿತ್ವದ ಡಾಕ್ಟರ್ ತಿಪ್ಪೇಸ್ವಾಮಿಯವರು ನಿಜವಾದ ಅರ್ಥದಲ್ಲಿ People's Doctor and People's Politician.

ಅಂತಹ ಮೇರು ವ್ಯಕ್ತಿತ್ವದ ತಿಪ್ಪೇಸ್ವಾಮಿ ಅವರು ನೆನಪು ಮಾತ್ರ. (ಅಗಲಿದ ದಿನ 16.10.1990)

- ಬಿ.ಎಲ್. ರಾಜು, ಪ್ರಾಧ್ಯಾಪಕರು

## ನಗೆ ಮತ್ತು ಪ್ರೀತಿ...

ಭಾರತದಂತಹ ಬಹುಮುಖದ, ಬಹುಸ್ತರದ ದೇಶದಲ್ಲಿ ತಿಪ್ಪೇಸ್ವಾಮಿಯಂತವರು ಬದುಕಿದ್ದೇ ಒಂದು ಕುತೂಹಲಕರ ವಿಷಯವಾಗಬಲ್ಲದು. ಅವರು ಅಕ್ಷರದಿಂದ ವಂಚಿತರಾದ, ಜಾತಿ ಪದ್ಧತಿಯ ಕ್ರೂರವ್ಯವಸ್ಥೆಯ ಹೊರಗೇ ಉಳಿದಿದ್ದ ಪಂಚಮ ಸಮುದಾಯದಿಂದ ಬಂದವರು. ಅಂತವರು ತಮ್ಮ ಹುಟ್ಟೂರನ್ನು ಬಿಟ್ಟು ಅಕ್ಕನ ಊರಿಗೆ ಹೋಗಿ ಶಾಲೆಗೆ ಸೇರದಿದ್ದರೆ, ಅಲ್ಲಿ ಕೂಡಾ ಜನರ ಅಸೂಯೆ, ಅವಮಾನಗಳನ್ನು ಸಹಿಸಿಕೊಂಡು ವಿದ್ಯೆ ಗಳಿಸಲೇಬೇಕೆಂಬ ನಿಶ್ಚಲ ಗುರಿಯಿಂದ ಮುಂದುವರೆಯದಿದ್ದರೆ ತಿಪ್ಪೇಸ್ವಾಮಿ ತಮ್ಮ ಹುಟ್ಟಿದೂರಾದ ಹಿರೇಹಳ್ಳಿಯಲ್ಲಿ ದನ ಕಾಯುತ್ತಾ ಜೀವನ ಸಾಗಿಸಬೇಕಾಗುತ್ತಿತ್ತು.

20ನೇ ಶತಮಾನದಲ್ಲಿನ ಭಾರತದ ಅಲ್ಲೋಲ ಕಲ್ಲೋಲ ಸಾಮಾಜಿಕ ವಾತಾವರಣದಲ್ಲಿ ತಿಪ್ಪೇಸ್ವಾಮಿಯವರು ಅನ್ಯಜಾತಿಯವರಿಂದ ಪಡೆದ ಸಹಕಾರ, ಪ್ರೀತಿ, ನಿರ್ಲಕ್ಷ್ಯ, ಅವಮಾನ ಇತ್ಯಾದಿ ದಾಖಲೆಯೇ ಒಂದು ಬೃಹತ್ ಕೃತಿಗೆ ವಸ್ತುವಾಗಬಲ್ಲದು. ಯಾಕೆಂದರೆ ತಿಪ್ಪೇಸ್ವಾಮಿ ಜಟಿಲ ಪರಿಸರದಲ್ಲಿ ವಿಶಿಷ್ಟ ಜೀವನ ಶೈಲಿ, ಸಾಮಾಜಿಕ ಕಾಳಜಿಯನ್ನು ಆರಿಸಿಕೊಂಡವರು.

ತಿಪ್ಪೇಸ್ವಾಮಿ ನಾನು ಬಲ್ಲ ಅತ್ಯಂತ ಆರೋಗ್ಯ ವಂತ ಮನಸ್ಸಿನ ವ್ಯಕ್ತಿ. ಅವರು ಎಲ್ಲರಂತೆಯೇ ಇದ್ದರು. ಅವರು ನಗಬಲ್ಲವರಾಗಿದ್ದರು. ಜಾತಿ, ವರ್ಗ ಯಾವುದನ್ನೂ ಪರಿಗಣಿಸದೆ ತಮ್ಮ ಪ್ರೀತಿಯನ್ನು ನೀಡಬಲ್ಲವರಾಗಿದ್ದರು. ನಗೆ ಮತ್ತು ಪ್ರೀತಿ ಅವರ ವ್ಯಕ್ತಿತ್ವದ 'main springs' ಎಂದು ನನಗೆ ಅನ್ನಿಸುತ್ತದೆ.

- ಪಿ.ಲಂಕೇಶ್

ಕೃಪೆ : 'ಮುಟ್ಟಿಸಿಕೊಂಡವರು: ಡಾ. ಬಿ.ಎಂ. ತಿಪ್ಪೇಸ್ವಾಮಿ ನೆನಪಿನ ಪುಸ್ತಕ' (1998)

ಸಂಪಾದಕರು : ಬಿ.ವಿ. ವೀರಭದ್ರಪ್ಪ, ಬಿ.ಟಿ. ಜಾಹ್ನವಿ.

# ಬಂಧುಗಳನ್ನೇ ಕಸಾಪ ಅಧ್ಯಕ್ಷರಾಗಿಸುವ ಹುನ್ನಾರ : ಸ್ವಾಮಿ ಕುರ್ಕಿ ಆರೋಪ



ಹರಿಹರ, ಅ.21- ಇತ್ತೀಚಿನ ದಿನಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಕೆಲವೇ ಕೆಲವು ಸ್ವಹಿತಾಸಕ್ತರ ಕಪಿ ಮುಷ್ಟಿಯ ತಾಣವಾಗಿದೆ. ಸಾಹಿತ್ಯ ಸೇವೆ ಮರೆತು ಕೆಲವರು ವಾಮಮಾರ್ಗ ಬಳಸಿ ಅಧಿಕಾರ ಪಡೆಯಲು ವಿವಿಧ ರೀತಿಯ ಕುತಂತ್ರ ನಡೆಸುವ ಮೂಲಕ ತಮ್ಮ ಬಂಧುಗಳನ್ನೇ ಅಧ್ಯಕ್ಷರನ್ನಾಗಿ ಮಾಡಿಕೊಳ್ಳುವ ವ್ಯವಸ್ಥಿತ ಸಂಚು ನಡೆಯುತ್ತಿದ್ದು, ಇದನ್ನು ಶುದ್ಧಿ ಮಾಡಲು ಹೊಸ ಆಲೋಚನೆಯ ಯುವ ಕ್ರಿಯಾಶೀಲ ಸಾಹಿತ್ಯಾಸಕ್ತರು ಮುಂದೆ ಬರಬೇಕಿದೆ ಎಂದು ಕಸಾಪ ದಾವಣಗೆರೆ ಜಿಲ್ಲಾ ಅಧ್ಯಕ್ಷ ಸ್ಥಾನದ ಅಭ್ಯರ್ಥಿ ಆರ್. ಶಿವಕುಮಾರ ಸ್ವಾಮಿ ಕುರ್ಕಿ ತಿಳಿಸಿದರು.

ನಗರದ ಕಾಟ್ವೆ ಭವನದಲ್ಲಿ ಕಸಾಪ ಸಮಾನ ಮನಸ್ಕ ಆಜೀವ ಸದಸ್ಯರು ಹಮ್ಮಿಕೊಂಡಿದ್ದ ಚುನಾವಣಾ ಪ್ರಚಾರ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ತಾನು ಜಿಲ್ಲಾ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾಗಿ ಬಂದರೆ ಗ್ರಾಮೀಣ ಪ್ರದೇಶಗಳಲ್ಲಿ ಕನ್ನಡದ ಬೆಳವಣಿಗೆಗೆ ಪೂರಕವಾದ ಕೆಲಸವನ್ನು ಮಾಡಲಾಗುವುದು. ಮೊದಲಿನಂತೆ ಸೇವಾವಧಿ 3 ವರ್ಷಕ್ಕೆ ಹಾಗೂ ಆಜೀವ ಸದಸ್ಯತ್ವ ಶುಲ್ಕ 250 ರೂ.ಗೆ ಇಳಿಸಿ ಸಾಮಾನ್ಯರೂ ಸದಸ್ಯತ್ವ ಪಡೆವಂತೆ ಮಾಡಲು ಪ್ರಯತ್ನಿಸಲಾಗುವುದು. ಅಲ್ಲದೇ ಪ್ರತಿ ತಾಲ್ಲೂಕಲ್ಲೂ ಕನ್ನಡ ಭವನ ನಿರ್ಮಿಸಲು ಶ್ರಮಿಸುವುದಾಗಿ ಅವರು ಹೇಳಿದರು.

ಹರಿಹರ ತಾಲ್ಲೂಕು ಪಂಚಾಯ್ತಿ ಮಾಜಿ ಅಧ್ಯಕ್ಷ ಟಿ.ಜೆ. ಮುರುಗೇಶ್ವರಪ್ಪ, ನಗರಸಭೆ ನಾಮನಿರ್ದೇಶನ ಸದಸ್ಯರಾದ ಮಾಲತೇಶ ಭಂಡಾರಿ, ಡಾ.ಎ.ಕೆ. ಜಯ ಪ್ರಕಾಶ ಶೆಟ್ಟಿ, ಹನಗವಾಡಿ ಸರ್ಕಾರಿ ಪ್ರೌಢಶಾಲೆ ಮುಖ್ಯ ಶಿಕ್ಷಕ ಕುಬೇಂದ್ರಪ್ಪ, ಇಂಜಿನಿಯರ್ ಅಸೋಸಿಯೇಷನ್ ಅಧ್ಯಕ್ಷ ಶಿವಪ್ರಕಾಶ ಕೆ. ಶಾಸ್ತ್ರಿ, ಕಡರನಾಯ್ಕನಹಳ್ಳಿ ಪ್ರೌಢಶಾಲಾ ಶಿಕ್ಷಕ ಎ. ಶಿವಪ್ಪ, ರಾಜಗೊಂಡನಹಳ್ಳಿ ಸರ್ಕಾರಿ ಪ್ರೌಢಶಾಲಾ ಕನ್ನಡ ಶಿಕ್ಷಕ ಕೆ. ನಾಗಪ್ಪ, ರಾಜಗೊಂಡನಹಳ್ಳಿ ಶಿಕ್ಷಕ ಕಟ್ಟಿ ಚನ್ನಕೇಶವ, ಉಪನ್ಯಾಸಕ ಡಿ.ಎಸ್. ವೆಂಕಟೇಶರಾವ್, ಇಂಜಿನಿಯರ್ ಕೆ.ಬಿ. ರಾಜಶೇಖರ್ ಮತ್ತಿತರರು ಸಭೆಯಲ್ಲಿ ಉಪಸ್ಥಿತರಿದ್ದರು.

ಸೃಜನ ಬುಕ್ ಹೌಸ್ ಮಾಲೀಕ ಜೆ.ಇ. ಗುರುಪ್ರಸಾದ್ ಸ್ವಾಗತಿಸಿದರು. ವರ್ತಕರ ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಕೆ. ಶ್ರೇಷ್ಠಿ ಕಾರ್ಯಕ್ರಮ ನಿರೂಪಿಸಿದರು.

# ಎಸ್‌ಡಿಪಿ ಪದಾಧಿಕಾರಿಗಳಿಗೆ ನಾಯಕತ್ವದ ತರಬೇತಿ




ದಾವಣಗೆರೆ, ಅ.21- ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ ಪಕ್ಷದ ಜಿಲ್ಲಾ ಘಟಕದ ನೂತನ ಪದಾಧಿಕಾರಿಗಳಿಗೆ ಪಕ್ಷದ ವತಿಯಿಂದ ನಗರದ ಖಾಸಗಿ ಸಭಾಂಗಣದಲ್ಲಿ ಯಶಸ್ವೀ ನಾಯಕತ್ವದ ಕುರಿತು ತರಬೇತಿ ಕಾರ್ಯಾಗಾರ ನಡೆಸಲಾಯಿತು.

ಜಿಲ್ಲಾಧ್ಯಕ್ಷ ಇಸ್ಮಾಯಿಲ್ ಜಬಿ ಉಲ್ಲಾ, ರಾಜ್ಯ ಸಮಿತಿ ಸದಸ್ಯ ಫಯಾಜ್ ದೊಡ್ಡಮನೆ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸೈಯದ್ ಅಷ್ಫಾಕ್, ಜಿಲ್ಲಾ ಉಪಾಧ್ಯಕ್ಷ ರಿಯಾಜ್ ಅಹಮದ್ ರಿಜ್ವಿ, ನಗರ ಅಧ್ಯಕ್ಷ ಸಿಕಂದರ್ ಅಲಿ ಮತ್ತು ಇತರರು ಕಾರ್ಯಾಗಾರದಲ್ಲಿ ಉಪಸ್ಥಿತರಿದ್ದರು.

# ಮಲೇಬೆನ್ನೂರಿನಲ್ಲಿ ದೊಡ್ಡ ಎಡೆ ಜಾತ್ರೆ



ಮಲೇಬೆನ್ನೂರು, ಅ.21 - ಪಟ್ಟಣದ ಶ್ರೀ ಬೀರಲಿಂಗೇಶ್ವರ ದೇವಸ್ಥಾನದಲ್ಲಿ ಮರಿ ಬನ್ನಿ ಅಂಗವಾಗಿ ಸ್ವಾಮಿಯ ದೊಡ್ಡ ಎಡೆ ಜಾತ್ರೆ ಗುರುವಾರ ಅಪಾರ ಭಕ್ತರ ಸಮ್ಮುಖದಲ್ಲಿ ಸಂಭ್ರಮದಿಂದ ಜರುಗಿತು.

ಬೆಳಿಗ್ಗೆ ಜವಳ, ಬಾಯಿ ಬೀಗ, ಹರಕೆ ಸಲ್ಲಿಸುವ ಕಾರ್ಯಕ್ರಮಗಳು, ನಂತರ ದೇವಸ್ಥಾನದಲ್ಲಿದ್ದ ಪಟ್ಟಣದ ಎಲ್ಲಾ ದೇವರುಗಳಿಗೆ ವಿಶೇಷ ಪೂಜೆಯೊಂದಿಗೆ ದೇವಿ ಪುರಾಣ ಮುಕ್ತಾಯ ಮಾಡಲಾಯಿತು. ನಂತರ ಪೂಜಾರರು ಮತ್ತು ಈರುಗಾರರ ಸಮ್ಮುಖದಲ್ಲಿ ಸ್ವಾಮಿ ದೊಡ್ಡ ಎಡೆ ಪೂಜೆ ಶ್ರದ್ಧಾ-ಭಕ್ತಿಯಿಂದ ನೆರವೇರಿತು.

ರಟ್ಟಿಹಳ್ಳಿ ಕಬ್ಬಿಣ ಕಂಥಿ ಮಠದ ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮೀಜಿ, ಶಾಸಕ ಎಸ್. ರಾಮಪ್ಪ, ಸಮಾಜದ ಮುಖಂಡರಾದ ಪೂಜಾರ್ ಬಸಪ್ಪ, ಪಿ. ಹಾಲಪ್ಪ, ಪೂಜಾರ್ ರೇವಣಪ್ಪ, ಪಿ.ಎಸ್. ಹನುಮಂತಪ್ಪ, ಪೂಜಾರ್ ಹಾಲೇಶಪ್ಪ, ಪೂಜಾರ್ ಜಯ್ಯಪ್ಪ, ಎಪಿಎಂಸಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ಜಿ.ಪಂ. ಮಾಜಿ ಸದಸ್ಯರಾದ ಎಂ. ನಾಗೇಂದ್ರಪ್ಪ, ಬಿ.ಎಂ. ವಾಗೀಶ್ ಸ್ವಾಮಿ, ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್, ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ಮುಖಂಡರಾದ ಕುಂಬಳೂರು ವಿರುಪಾಕ್ಷಪ್ಪ, ನಂದಿಗಾವಿ ಶ್ರೀನಿವಾಸ್, ಐರಣಿ ಅಣ್ಣಪ್ಪ, ಭೋವಿ ಕುಮಾರ್, ಪುರಸಭೆ ಮುಖ್ಯಾಧಿಕಾರಿ ಡೊಂಬರ, ಉಪ ತಹಶೀಲ್ದಾರ್ ಆರ್.ರವಿ, ಪಿಎಸ್ಐ ರವಿಕುಮಾರ್, ದೇವಸ್ಥಾನದ ಅಧ್ಯಕ್ಷ ಪೂಜಾರ್ ನಾಗಪ್ಪ, ಕಾರ್ಯದರ್ಶಿ ಕೆ.ಪಿ. ಗಂಗಾಧರ್ ಮತ್ತಿತರರು ಭಾಗವಹಿಸಿದ್ದರು.

# ಶಾಲೆಗಳಲ್ಲಿ ಮೌಲ್ಯಾಧಾರಿತ ಶಿಕ್ಷಣ ಅಗತ್ಯ: ಸುಜಾತ ಕೃಷ್ಣ

ದಾವಣಗೆರೆ, ಅ.21- ಸಮಾಜದಲ್ಲಿ ಸತ್ಪ್ರಜೆಗಳನ್ನಾಗಿ ರೂಪಿಸುವ ಮಹತ್ತರ ಕಾರ್ಯ ಶಿಕ್ಷಕರಿಂದ ಮಾತ್ರ ಸಾಧ್ಯ. ಮಕ್ಕಳಲ್ಲಿ ಮೌಲ್ಯಗಳನ್ನು ಬಿತ್ತಿದಾಗ ಸಂಸ್ಕಾರವಂತರಾಗಿ ರೂಪುಗೊಳ್ಳುತ್ತಾರೆ. ಶಾಲೆಗಳಲ್ಲಿ ಮೌಲ್ಯಾಧಾರಿತ ಶಿಕ್ಷಣ ನೀಡುವ ಅಗತ್ಯವಿದೆ ಎಂದು ಈಶ್ವರಮ್ಮ ಶಾಲಾ ಆಡಳಿತ ಮಂಡಳಿ ಅಧ್ಯಕ್ಷೆ ಶ್ರೀಮತಿ ಕೆ.ಆರ್. ಸುಜಾತ ಕೃಷ್ಣ ಹೇಳಿದರು.

ನಗರದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್) ಸಭಾಂಗಣದಲ್ಲಿ ಈಶ್ವರಮ್ಮ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆ ಹಾಗೂ 'ಜ್ಞಾನಜ್ಯೋತಿ' ವನಿತಾ ಶಿಕ್ಷಕಿಯರ ವೇದಿಕೆ, ವನಿತಾ ಸಮಾಜದ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಶಾಲಾ ಶಿಕ್ಷಕರ ಮೌಲ್ಯ ಶಿಕ್ಷಣ ತರಬೇತಿ ಕಾರ್ಯಾಗಾರದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜೀವನ ಮೌಲ್ಯಾಧಾರಿತ ಶಿಕ್ಷಣವನ್ನು ಶಾಲೆಗಳಲ್ಲಿ ಮೊದಲು ಆರಂಭಿಸಿದ ಸತ್ಯಸಾಯಿ ಶಿಕ್ಷಣ ಸಂಸ್ಥೆಗಳಿಗೆ ಸಲ್ಲುತ್ತದೆ. ಈ ನಿಟ್ಟಿನಲ್ಲಿ ಮಾಜಿ ಶಿಕ್ಷಣ ಸಚಿವೆ ಶ್ರೀಮತಿ ನಾಗಮ್ಮ ಕೇಶವಮೂರ್ತಿ ಅವರ ಶಿಕ್ಷಣದ ಬಗೆಗಿನ ಅಪಾರ ಕಾಳಜಿಯಿಂದಾಗಿ ಈಶ್ವರಮ್ಮ ಶಾಲೆಯಲ್ಲಿ ಮೌಲ್ಯಾಧರಿತ ಶಿಕ್ಷಣವನ್ನು ಮಕ್ಕಳಿಗೆ ಕಲಿಸಿಕೊಡಲು ಪ್ರಾರಂಭಿಸಲಾಯಿತು ಎಂದರು.



ಕಾರ್ಯಾಗಾರ ಉದ್ಘಾಟಿಸಿದ ಡಯಟ್ ಪ್ರಾಚಾರ್ಯ ಹೆಚ್.ಕೆ. ಲಿಂಗರಾಜ್ ಮಾತನಾಡಿ, ಮಹಾನ್ ಶಿಕ್ಷಕರು ಮಹಾನ್ ವಿದ್ಯಾರ್ಥಿಗಳನ್ನು ರೂಪಿಸಲು ಸಾಧ್ಯವಿದೆ. ಕೇವಲ ದೃಷ್ಟಿ ಇದ್ದರೆ ಸಾಲದು, ದೃಷ್ಟಿಕೋನ ಮುಖ್ಯ. ಈ ನಿಟ್ಟಿನಲ್ಲಿ ಶಿಕ್ಷಕರು ಮಕ್ಕಳಿಗೆ ಮೌಲ್ಯಯುತ ಶಿಕ್ಷಣ ನೀಡುವ ಅಗತ್ಯತೆ ಇದೆ ಎಂದರು. ಜ್ಞಾನಜ್ಯೋತಿ ವನಿತಾ ಶಿಕ್ಷಕಿಯರ ವೇದಿಕೆ ಅಧ್ಯಕ್ಷೆ ಮಲ್ಲಮ್ಮ ನಾಗರಾಜ್ ಮಾತನಾಡಿದರು. ವಿದ್ಯಾ ಹೆಗಡೆ ಪ್ರಾರ್ಥಿಸಿದರು. ಈಶ್ವರಮ್ಮ ಶಾಲಾ ಪ್ರಾಂಶುಪಾಲರಾದ ಕೆ.ಎಸ್. ಪ್ರಭುಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡಿ, ಸ್ವಾಗತಿಸಿದರು. ಶಿಕ್ಷಕಿ ಶ್ವೇತ ನಿರೂಪಿಸಿದರು. ಜ್ಞಾನಜ್ಯೋತಿ ವನಿತಾ ಶಿಕ್ಷಕಿಯರ ವೇದಿಕೆಯ ನೀಲಗುಂದ ಜಯಮ್ಮ, ಶಶಿರೇಖ, ಅರುಂಧತಿ ರಮೇಶ್ ಮತ್ತಿತರರು ಉಪಸ್ಥಿತರಿದ್ದರು.

ನಂತರರ ನಡೆದ ಕಾರ್ಯಾಗಾರದಲ್ಲಿ 'ಶಿಕ್ಷಣ ನೀತಿಗಳು ನಡೆದು ಬಂದ ದಾರಿ' ಕುರಿತು ಡಯಟ್ ಪ್ರಾಚಾರ್ಯ ಹೆಚ್.ಕೆ. ಲಿಂಗರಾಜ್, 'ಸಮರ್ಥ ಶಿಕ್ಷಕ ರಾಷ್ಟ್ರದ ಅಭಿವೃದ್ಧಿಯ ನೇತಾರ' ವಿಷಯದ ಬಗ್ಗೆ ನಿವೃತ್ತ ಪ್ರಾಂಶುಪಾಲರಾದ ಎ.ಪಿ. ಸುಜಾತ, 'ಶಿಕ್ಷಣ ಮತ್ತು ಮುನ್ನಡೆ' ಕುರಿತು ಶಿಕ್ಷಣಾಧಿಕಾರಿ ಡಾ. ಪುಷ್ಪಲತಾ, 'ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಪಠ್ಯ ಮತ್ತು ಬೋಧನಾ ಕ್ರಮ'ದ ಬಗ್ಗೆ ಶಿಕ್ಷಣ ತಜ್ಞ ಡಾ. ಹೆಚ್.ವಿ. ವಾಮದೇವಪ್ಪ ಮಾತನಾಡಿದರು.

**ಸೈಟ್, ಮನೆ ಮಾರಾಟಕ್ಕಿವೆ**
ವಿದ್ಯಾನಗರ 40x60 1ನೇ ಬಸ್ ಸ್ಟಾಪ್ ಉತ್ತರ, 22x60 ಪಶ್ಚಿಮ, ಸಿದ್ದವೀರಪ್ಪ 30x40 ಹಳೇ ಮನೆ ಪೂರ್ವ 30x40 ಸೈಟ್, 60x40 ಸೈಟ್, ಬಾಪೂಜಿ ಸ್ಕೂಲ್ ಹಿಂಭಾಗ 40x50 ಕಾರ್ನರ್ ಸೈಟ್, 30x50 (ಬಾಡಿಗೆ ಬರುವಂತಹ ಮನೆ), 30x40 ಬಂಟ್ಸ್ ಛೌಟ್ರಿ ಹತ್ತಿರ, 30x40 ಹೊಸ ಮನೆ, ಡ್ಯೂಪ್ಲೆಕ್ಸ್, ಸಪ್ತಗಿರಿ ಸ್ಕೂಲ್ ಹತ್ತಿರ, ಜೆ.ಹೆಚ್. ಪಟೇಲ್, 40x60 ರೋಡ್, KHB 40x60 ಪೂರ್ವ, 30x40 ಪಶ್ಚಿಮ
ಬೂಸ್ನೂರು ಕಿರಣ್ (ಏಜೆಂಟ್)
98440 63409, 97315 63409

**ಮನೆ ಬಾಡಿಗೆಗೆ ಇದೆ**
ನಿಜಲಿಂಗಪ್ಪ ಬಡಾವಣೆ, ನ್ಯಾಷನಲ್ ಕಾನ್ವೆಂಟ್ ಎದುರು, "ಕಾಯಕ ಸಿರಿ" ಗ್ರೌಂಡ್ ಫ್ಲೋರ್‌ನಲ್ಲಿ, 2 ಬೆಡ್ ರೂಂ ಮನೆ ಬಾಡಿಗೆಗೆ ಇದೆ. (ಸಸ್ಯಹಾರಿಗಳಿಗೆ ಮೊದಲ ಆದ್ಯತೆ)
63621 06700

**ಬಾಡಿಗೆಗೆ ಇದೆ (FOR RENT)**
Car Wash water Service Station. ಕಾರ್ ವಾಷ್ ವಾಟರ್ ಸರ್ವೀಸ್ ಸ್ಟೇಷನ್, Near BIET, Davangere.
98868 44501

**WANTED**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಮಹಿಳಾ/ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ.
ಸಂಪರ್ಕಿಸಿ
ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರೋಡ್, ದಾವಣಗೆರೆ-1

**ಮನೆ ಬಾಡಿಗೆಗೆ ಇದೆ**
ಎಸ್.ಕೆ.ಪಿ ರಸ್ತೆ, ಗಣೇಶ ಪೇಟೆ, ಬೇವಿನ ಮರದ ಎದುರು
3 ಬೆಡ್ ರೂಂ ಮನೆ ಬಾಡಿಗೆಗೆ ಇದೆ.
(ಸಸ್ಯಹಾರಿಗಳಿಗೆ ಮೊದಲ ಆದ್ಯತೆ)
ವಿಚಾರಿಸಿ
99807 25505

**ಶಿಕ್ಷಕ/ಕಿಯರು ಬೇಕಾಗಿದ್ದಾರೆ**
B.Sc. B.Ed - (CBZ)
B.Sc. / M.Sc
B.A. B.Ed. Sub: Social Science or English.
ACM. SCHOOL
Devaraj Urs Lay-out 'C' Block 2nd cross. DVG
8970321855, 8296502675

**ಸೈಟ್‌ಗಳು ಮಾರಾಟಕ್ಕಿವೆ**
ಬನಶಂಕರಿ 30x60, 30x60 ಪಶ್ಚಿಮ, ಸಿದ್ದವೀರಪ್ಪ ಬಡಾವಣೆ 40x70, 49x50, 48x58, ಎಸ್.ಎಸ್. ಲೇಔಟ್ 30x40, 30x40 ಪೂರ್ವ, ಎಂಸಿಸಿ ಬ್ಲಾಕ್ 40x60, 40x60, 40x60 ಪೂರ್ವ ಮಾರಾಟಕ್ಕಿವೆ.
ಸೈಟ್ ಕೊಳ್ಳುವವರು, ಮಾರುವವರು ಸಂಪರ್ಕಿಸಿ
ಪ್ರಶಾಂತ: 99726 70257
ರಿಯಲ್ ಎಸ್ಟೇಟ್ ಏಜೆಂಟ್

**ವಾಣಿಜ್ಯ ಮಳಿಗೆ ಬಾಡಿಗೆಗಿದೆ**
ದಾವಣಗೆರೆ ಹದಡಿ ರಸ್ತೆ ಶ್ರೀ ಲಕ್ಷ್ಮಿ ಗ್ರಾನೈಟ್ಸ್ ಹತ್ತಿರ ವಾಹನ ಪಾರ್ಕಿಂಗ್ ಸೌಲಭ್ಯವಿರುವ, ಲಿಫ್ಟ್ & ಅವಶ್ಯ ವಿದ್ಯುಚ್ಛಕ್ತಿವುಳ್ಳ, ಸದಾ ನೀರಿನ ಸೌಕರ್ಯವುಳ್ಳ ಸೆಲ್ಲರ್, ಗ್ರೌಂಡ್ ಫ್ಲೋರ್, ಮೊದಲನೇ ಮಹಡಿ, 2ನೇ ಮಹಡಿ ವಾಣಿಜ್ಯ ಮಳಿಗೆಗಳು ಬಾಡಿಗೆಗೆ ಇವೆ. ವಿಚಾರಿಸಿ
94806 52219

**ಉಚಿತ ತಪಾಸಣೆ ಶಿಬಿರ**
ಮುಟ್ಟು ಪ್ರಾರಂಭದಿಂದ ಮುಟ್ಟು ನಿಂತ ಮಹಿಳೆಯರ ಆರೋಗ್ಯದಲ್ಲಿ ಬಹಳಷ್ಟು ಏರುಪೇರುಗಳು ಆಗುತ್ತವೆ. ಅದನ್ನು ಸರಿದೂಗಿಸಲು ಆಯುರ್ವೇದದ ತಜ್ಞ ವೈದ್ಯರಿಂದ ಸೂಕ್ತ ಪರಿಹಾರ ಮತ್ತು ಸಲಹೆಯನ್ನು ಪ್ರತಿ ಭಾನುವಾರ ಉಚಿತವಾಗಿ ನೀಡಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
8618642929, 08192-252228

**WANTED DELIVERY BOYS**
FALBUM
Online Food Delivery
Part time / Full time
Earnings Rs. 5000/- Weekly.
90198-70872

**ದೋಸೆ ಭಟ್ಟರು ಬೇಕಾಗಿದ್ದಾರೆ**
ದೋಸೆ ಹೋಟೆಲ್‌ನಲ್ಲಿ ಕೆಲಸ ಮಾಡಲು ದೋಸೆ ಭಟ್ಟರು ಬೇಕಾಗಿದ್ದಾರೆ. ಆಕರ್ಷಕ ವೇತನ ಕೊಡಲಾಗುವುದು.
76195 54656, 99457 32220, 98866 43353

**ಸೌಂದರ್ಯವರ್ಧಕ ಚಿಕಿತ್ಸೆ**
ವಿಶಿಷ್ಟವಾದ ಆಯುರ್ವೇದದ ಗಿಡ ಮೂಲಿಕೆಗಳಿಂದ ನೈಸರ್ಗಿಕವಾಗಿ ನಿಮ್ಮ ಮುಖದ ಕಾಂತಿಯನ್ನು ಹೆಚ್ಚಿಸಿಕೊಳ್ಳಿ. ಕಡಿಮೆ ಮೌಲ್ಯದಲ್ಲಿ ಇದು ನಿಮ್ಮ ದಾವಣಗೆರೆಯಲ್ಲಿ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
8618642929, 08192-252228

**ವಾಣಿಜ್ಯ ಮಳಿಗೆ, 5 ರೂಮ್ ಬಾಡಿಗೆಗೆ ಇವೆ**
ದಾವಣಗೆರೆ ಹೃದಯ ಭಾಗದಲ್ಲಿ ನೂತನವಾಗಿ ಕಟ್ಟಿದ 17x27 ಅಡಿಯ ವಾಣಿಜ್ಯ ಮಳಿಗೆ ಹಾಗೂ ಕಾಲೇಜು ವಿದ್ಯಾರ್ಥಿನಿಯರಿಗೆ, ಕೆಲಸದ ಮಹಿಳೆಯರಿಗೆ ಅನುಕೂಲವಿರುವ 5 ರೂಂ (ಅಟ್ಯಾಚ್ಡ್) ಗಳು ಕೆಟಿಜೆ ನಗರ 12ನೇ ಕ್ರಾಸ್, 3ನೇ ಮೇನ್, ಹಳೇ ಖಜಾನೆ ಪಕ್ಕ, ದಾವಣಗೆರೆ ಇಲ್ಲಿ ಬಾಡಿಗೆಗಿವೆ.
ಸಂಪರ್ಕಿಸಿ: 98440- 24995

**WANTED FEMALE**
We Need Computer Teachers
(Any Degree + 1year Computer Course)
@ Davangere-4
97393 20843

**ಶಿಕ್ಷಕಿಯರು ಬೇಕಾಗಿದ್ದಾರೆ**
D.Ed., B.Sc., B.Ed., B.Com., M.Com., M.Sc., Any Degree
LITTLE CHAMPS GURUKULAM
Near HKR Circle, College Road, Nittuvalli, Davangere.
9060906039, 9844332559

**ಮನೆ ಮಾರಾಟಕ್ಕಿದೆ (ಹೊಸ ಮನೆ)**
ಎಸ್.ಎಸ್ ಹೈಟೆಕ್ ಹಾಸ್ಪಿಟಲ್ ಹಿಂಭಾಗ, ಸಿದ್ಧಗಂಗಾ ಬಡಾವಣೆ
30×40 North face
ಹೊಸ ಮನೆ ಮಾರಾಟಕ್ಕಿದೆ.
94489 23785
95359 67499

**ಕ್ಲಿಯರೆನ್ಸ್ ಸೇಲ್**
Upto 30% ಡಿಸ್ಕೌಂಟ್
ಶೂಟಿಂಗ್ಸ್, ಶರ್ಟಿಂಗ್ಸ್
ನಾಕೋಡಾ'ಸ್ ಮೆನ್ಸ್ ಅವಿನ್ಯೂ
# 9/1-ಬಿ, ಚೌಕಿಪೇಟೆ, ದಾವಣಗೆರೆ.

**WANTED**
Tele Callers, Executives, PUC/Diploma Fluency in English & kannada for outbond Process.
Timing: 10.00am to 5.00 pm
Contact: 83106 28910

**WANTED**
Staff Nurses, Physiotherapist, Lab Technician, Receptionist
contact
98440 65638

**ಬೇಕಾಗಿದ್ದಾರೆ**
2nd PUC ಆದ ಯುವಕರು ಗೋಲ್ಡ್ ಕಂಪನಿಯಲ್ಲಿ Marketing Executive ಆಗಿ ಕಾರ್ಯ ನಿರ್ವಹಿಸಲು ಬೇಕಾಗಿದ್ದಾರೆ. ಆಸಕ್ತರು ಕೂಡಲೇ ಸಂಪರ್ಕಿಸಿ.
63644 69938

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ. SSLC, PUC Degree, Pharmacy & BHMS (Government & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ರಾಂ ಅಂಡ್ ಕೋ ಸರ್ಕಲ್, ಗಣೇಶ ದೇವಸ್ಥಾನದ ಹಿಂಭಾಗ, ಸೋಮು ಮೆಡಿಕಲ್ಸ್ ಮೇಲೆ, ದಾವಣಗೆರೆ.
87490 24789, 94837 64859

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ,**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಪೂಜಿಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ನೇರ ಪರೀಕ್ಷೆಗಳು**
ಮನೆಯಲ್ಲೇ ಓದಿ ನೇರ ಪರೀಕ್ಷೆ ಬರೆಯುವ ಅವಕಾಶ
PUC, SCIENCE, COMMERCE, ARTS
ಉನ್ನತ ಶಿಕ್ಷಣಕ್ಕೆ/ಸರ್ಕಾರಿ ಕೆಲಸಕ್ಕೆ ಮತ್ತು ಮುಂಬಡ್ತಿ ಪಡೆಯಲು ಉಪಯೋಗವಾಗುತ್ತದೆ. ಕೊನೆಯ ದಿ:23.10.2021
ಮಾನಸ ಎಜುಕೇಷನ್ ಟ್ರಸ್ಟ್(ರಿ.)
ಎಲ್.ಕೆ.ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ.
97402 58276

**HOUSE RENT / LEASE**
2 BHK houses available at
SANGAM APARTMENT
Mahalakshmi Layout
Near Kundavada Kere and GMIT, Davangere.
96388 17967, 73380 43912

**WANTED**
Computer Service, Electrician, Printer Service, CCTV Service, Engineer Require
R Computers
87221 13803, 89711 05878, 84311 11921

# ಘನತ್ಯಾಜ್ಯ ನಿರ್ವಹಣಾ ಘಟಕಕ್ಕೆ ಭೇಟಿ



ದಾವಣಗೆರೆ, ಅ.21- ಆವರಗೊಳ್ಳ ಗ್ರಾಮದ ಹೊರ ವಲಯದಲ್ಲಿರುವ ಪಾಲಿಕೆಯ ಘನತ್ಯಾಜ್ಯ ವಸ್ತು ನಿರ್ವಹಣಾ ಘಟಕಕ್ಕೆ ಪಾಲಿಕೆ ಸಾರ್ವಜನಿಕ ಆರೋಗ್ಯ, ಶಿಕ್ಷಣ ಮತ್ತು ಸಾಮಾಜಿಕ ಸ್ಥಾಯಿ ಸಮಿತಿ ಅಧ್ಯಕ್ಷ ಎಲ್.ಡಿ. ಗೋಣೆಪ್ಪ, ಸದಸ್ಯರಾದ ಶ್ರೀಮತಿ ವೀಣಾ ನಂಜಪ್ಪ ಭೇಟಿ ನೀಡಿ ಪರಿಶೀಲಿಸಿದರು.

ಈ ಸಂದರ್ಭದಲ್ಲಿ ಪಾಲಿಕೆ ಸಹಾಯಕ ಕಾರ್ಯಪಾಲಕ ಅಭಿಯಂತರ (ಪರಿಸರ) ಎಸ್. ಆರ್. ಜಗದೀಶ್ ಮತ್ತಿತರರು ಉಪಸ್ಥಿತರಿದ್ದರು.

# ಕೊಮಾರನಹಳ್ಳಿ : ವಿಜೃಂಭಣೆಯ ಮೆರವಣಿಗೆ



ಮಲೇಬೆನ್ನೂರು, ಅ.21- ಕೊಮಾರನಹಳ್ಳಿ ಗ್ರಾಮದಲ್ಲಿ ಇದೇ ಮೊದಲ ಬಾರಿಗೆ ವಾಲ್ಮೀಕಿ ನಾಯಕ ಸಮಾಜದವರು ಆದಿಕವಿ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಿದರು.

ಬೆಳಿಗ್ಗೆ ಗ್ರಾಮದ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ವಾಲ್ಮೀಕಿ ಜಯಂತಿಯನ್ನು ಆಚರಿಸಿದರು.

ಸಮಾಜದ ಮುಖಂಡರಾದ ಪಾರಿ ರಂಗಪ್ಪ, ಶೇಖರಪ್ಪ, ಹನುಮಂತಪ್ಪ, ಗ್ರಾ.ಪಂ. ಸದಸ್ಯೆ ನೇತ್ರಾವತಿ ಹನುಮಂತಪ್ಪ, ದಿಶಾ ಸಮಿತಿ ಸದಸ್ಯ ಐರಣಿ ಅಣ್ಣಪ್ಪ, ಐರಣಿ ಮಹೇಶ್ವರಪ್ಪ, ಹೋಟೆಲ್ ಪರಮೇಶ್ವರಪ್ಪ, ಸಿ. ರಂಗನಾಥ್, ಅಣಬೂರು ನಾಗರಾಜ್, ಶಿವ ರಾಜ್, ಜಿ. ಸುನೀಲ್, ವಿಜಯ್, ಚೇತನ್, ಪಾರಿ ಮನೋಹರ್, ಮಲೇಬೆನ್ನೂರಿನ ಪಾಳೇಗಾರ್ ನಾಗರಾಜ್ ಸೇರಿದಂತೆ ಅನೇಕರು ಭಾಗವಹಿಸಿದ್ದರು.

ಸಂಜೆ ವಾಲ್ಮೀಕಿ ಭಾವಚಿತ್ರದ ಮೆರವಣಿಗೆ ಸಂಭ್ರಮದಿಂದ ಜರುಗಿತು. ಜಾಂಜ್ ಮೇಳ ಮೆರವಣಿಗೆಗೆ ಮೆರಗು ತಂದಿತು. ಎಪಿಎಂಸಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ಗ್ರಾ.ಪಂ. ಸದಸ್ಯ ಮಡಿವಾಳರ ಬಸವರಾಜ್, ಯು. ಪರಮೇಶ್ವರಪ್ಪ, ಎಸ್.ಹೆಚ್. ಹಾಲೇಶ್, ಎಸ್.ಡಿ. ರಂಗನಾಥ್, ಉದ್ದಣ್ಣರ ಅಣ್ಣಪ್ಪ, ಜಿ. ಸುನೀಲ್, ಶಿಕ್ಷಕ ಡಿ.ಆರ್. ಚೇತನ್, ಮಲೇಬೆನ್ನೂರು ಗ್ರಾ.ಪಂ. ಮಾಜಿ ಅಧ್ಯಕ್ಷ ಭೋವಿ ಕುಮಾರ್ ಸೇರಿದಂತೆ ಪಾರಿ ಕುಟುಂಬದವರು ಹಾಗೂ ಗ್ರಾಮಸ್ಥರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

# ಕಪ್ಪು ಬಟ್ಟೆ ಧರಿಸಿ ಶಿಕ್ಷಕರ ಪ್ರತಿಭಟನೆ



**ಹರಿಹರ**

ಹರಿಹರ, ಅ.21 - ತಮ್ಮ ಬೇಡಿಕೆಗಳಿಗೆ ಸರ್ಕಾರ ಸ್ಪಂದಿಸದೇ ಇರುವುದರಿಂದ ರಾಜ್ಯ ಪ್ರಾಥ ಮಿಕ ಶಾಲಾ ಶಿಕ್ಷಕರ ಸಂಘವು ಗುರುವಾರ ದಿಂದ ವಿವಿಧ ರೀತಿಯಲ್ಲಿ ಪ್ರತಿಭಟನೆ ಆರಂಭಿಸಿದೆ.

ಪದವೀಧರ ಶಿಕ್ಷಕರ ಸಮಸ್ಯೆ ಸರಿಪಡಿಸ ಬೇಕು, ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡಬೇಕು, ಮುಖ್ಯ ಗುರುಗಳಿಗೆ ಬಾಕಿ ವೇತನ ಬಡ್ತಿ ನೀಡಬೇಕು, ಗ್ರಾಮೀಣ ಕೃಪಾಂಕ ಸಮಸ್ಯೆ ಸರಿಪಡಿಸಬೇಕು ಎಂಬುದು ಶಿಕ್ಷಕರ ಸಂಘದ ಹಕ್ಕೊತ್ತಾಯಗಳಾಗಿವೆ.

ಈಗಾಗಲೇ ತರಬೇತಿಗಳನ್ನು ಬಹಿಷ್ಕರಿಸ ಲಾಗಿದ್ದು, ಇಂದಿನಿಂದ ಅ.29 ವರೆಗೂ ಕೈಗೆ ಕಪ್ಪು ಪಟ್ಟಿ ಧರಿಸಿ ಶೈಕ್ಷಣಿಕೆ ಚಟುವಟಿಕೆಗಳನ್ನು ನಿರ್ವಹಿ ಸುತ್ತೇವೆ, ಆಗಲೂ ಸರ್ಕಾರ ಬೇಡಿಕೆಗಳಿಗೆ ಸ್ಪಂದಿಸದಿದ್ದರೆ ಇದೇ ದಿನಾಂಕ 30 ರಿಂದ ಬಿಸಿಯೂಟದ ಮಾಹಿತಿ ಅಪ್ ಡೇಟ್ ಮಾಡು ವುದಿಲ್ಲ. ಬಳಿಕ ಧರಣಿ ಸತ್ಯಾಗ್ರಹ ಆರಂಭಿಸಲಾಗುವುದೆಂದು ಹರಿಹರ ಬಿಇಓ ಸಿದ್ದಪ್ಪ ಅವರಿಗೆ ಮನವಿ ಸಲ್ಲಿಸಿದ ನಂತರ ಹರಿಹರ ತಾ. ಪ್ರಾಥಮಿಕ ಶಾಲಾ-ಶಿಕ್ಷಕರ ಸಂಘದ ಅಧ್ಯಕ್ಷ ಹೆಚ್. ಚಂದ್ರಪ್ಪ 'ಜನತಾವಾಣಿ'ಗೆ ತಿಳಿಸಿದ್ದಾರೆ.

ಸಂಘದ ಗೌರವಾಧ್ಯಕ್ಷ ಗದಿಗೆಪ್ಪ ವೈ. ಹಳೇಮನಿ, ಉಪಾಧ್ಯಕ್ಷ ಕರಿಬಸಪ್ಪ ಕುಪ್ಪೇಲೂರು, ಸಹ ಕಾರ್ಯದರ್ಶಿಗಳಾದ ಮಮತಾ, ನಾಗರಾಜ್, ಸಂಘಟನಾ ಕಾರ್ಯದರ್ಶಿ ಕೆ. ರುದ್ರಪ್ಪ, ಖಜಾಂಚಿ ವಿನೋದ್, ಅಂಗಡಿ ಮಲ್ಲಿಕಾರ್ಜುನ, ಚನ್ನಬಸಪ್ಪ, ಮಂಜಪ್ಪ ಬಿದರಿ, ಸಿದ್ಧಪ್ಪ ಸಂಗಣ್ಣನವರ್, ಮಾಜಿ ಅಧ್ಯಕ್ಷ ಸೈಯದ್ ನಜೀರ್ ಅಹ್ಮದ್ ಸೇರಿದಂತೆ, ಇತರರು ಹರಿಹರ ಕ್ಷೇತ್ರ ಶಿಕ್ಷಣಾಧಿಕಾರಿ ಸಿದ್ದಪ್ಪ ಅವರಿಗೆ ಮನವಿ ಸಲ್ಲಿಸಿದರು.

# ಸೇವೆಯೊಂದಿಗೆ ಕಪ್ಪು ಪಟ್ಟಿ ಧರಿಸಿ ಶಿಕ್ಷಕರ ಪ್ರತಿಭಟನೆ

## ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಸರ್ಕಾರದ ಗಮನ ಸೆಳೆದ ಪ್ರಾಥಮಿಕ ಶಾಲಾ ಶಿಕ್ಷಕರು



ದಾವಣಗೆರೆ ದಕ್ಷಿಣ ವಲಯದ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದಿಂದ ಮನವಿ ಸಲ್ಲಿಸಲಾಯಿತು.



ದಾವಣಗೆರೆ ಉತ್ತರ ವಲಯದ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದಿಂದ ಮನವಿ ಸಲ್ಲಿಸಲಾಯಿತು.

ದಾವಣಗೆರೆ, ಅ.21- ತಮ್ಮ ವಿವಿಧ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರು ಇಂದು ಕೈಗೆ ಕಪ್ಪು ಪಟ್ಟಿ ಧರಿಸಿ, ತಮ್ಮ ಸೇವೆಯ ಜೊತೆಯಲ್ಲಿಯೇ ಸರ್ಕಾರದ ಗಮನ ಸೆಳೆದರು.

ಕರ್ನಾಟಕ ರಾಜ್ಯ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕರೆ ಮೇರೆಗೆ ಹೋರಾಟ ಕೈಗೊಂಡಿರುವ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರು, ಮಕ್ಕಳ ಶೈಕ್ಷಣಿಕ ಪ್ರಗತಿಗೆ ಯಾವುದೇ ಕುಂಠಿತವಾಗದಂತೆ ಬೇಡಿಕೆಗಳ ಈಡೇರಿಕೆಗೆ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ದಾವಣಗೆರೆ ದಕ್ಷಿಣ, ಉತ್ತರ ವಲಯ, ಹರಿಹರ, ಜಗಳೂರು, ನ್ಯಾಮತಿ, ಹೊನ್ನಾಳಿ ಸೇರಿದಂತೆ, ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘಗಳ ನೇತೃತ್ವದಲ್ಲಿ ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಪ್ರಾಥಮಿಕ ಶಾಲಾ ಶಿಕ್ಷಕರು ತಮ್ಮ ಬೇಡಿಕೆಗಳುಳ್ಳ ಮನವಿ ಸಲ್ಲಿಸಿದ್ದಾರೆ.

ಪದವೀಧರ ಶಿಕ್ಷಕರ ಸಮಸ್ಯೆ ಬಗೆಹರಿಸಬೇಕು, ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿ, ಸೇವಾವಧಿಯಲ್ಲಿ ಶಿಕ್ಷಕರು ಬಯಸುವ ಜಿಲ್ಲೆಗೆ ಒಂದು ಬಾರಿ ವರ್ಗಾವಣೆ ಮಾಡಬೇಕು, ಮುಖ್ಯ ಗುರುಗಳಿಗೆ 15, 20, 25 ವರ್ಷಗಳ ವೇತನ ಬಡ್ತಿ ನೀಡಬೇಕು, ನೂತನ ಪಿಂಚಣಿ ಯೋಜನೆ ರದ್ದುಗೊಳಿಸಬೇಕು, ಗ್ರಾಮೀಣ ಕೃಪಾಂಕ ಶಿಕ್ಷಕರ ಸಮಸ್ಯೆ ಹಾಗೂ ದೈಹಿಕ ಶಿಕ್ಷಕರ ಸಮಸ್ಯೆ ಬಗೆಹರಿಸಬೇಕು ಎಂಬಿತ್ಯಾದಿ ಬೇಡಿಕೆಗಳ ಈಡೇರಿಸಬೇಕೆಂಬುದು ಆಗ್ರಹವಾಗಿದೆ.

ಸರ್ಕಾರ ನಮ್ಮ ನ್ಯಾಯಯುತ ಬೇಡಿಕೆಗಳಿಗೆ ಸ್ಪಂದಿಸಿಲ್ಲ. ಇದಕ್ಕಾಗಿ ಇಂದಿನಿಂದ ಇದೇ ದಿನಾಂಕ 29 ರವರೆಗೆ ತರಬೇತಿ ಬಹಿಷ್ಕಾರದೊಂದಿಗೆ ಕಪ್ಪು ಪಟ್ಟಿ ಧರಿಸಿ ಶೈಕ್ಷಣಿಕ ಚಟುವಟಿಕೆ ನಿರ್ವಹಣಾ ಚಳುವಳಿ ಮಾಡಲಾಗುವುದು. ಈ ಹೋರಾಟಕ್ಕೂ ಸರ್ಕಾರ ನಮ್ಮ ಬೇಡಿಕೆಗಳನ್ನು ಈಡೇರಿಸದಿದ್ದರೆ ಮುಂದಿನ ಹೋರಾಟವಾಗಿ ಇದೇ ದಿನಾಂಕ 30ರಿಂದ ನವೆಂಬರ್ 10 ರವರೆಗೆ ಮಧ್ಯಾಹ್ನದ ಬಿಸಿ ಊಟದ ಮಾಹಿತಿ ಅಪ್ಡೇಟ್ ಮಾಡದೆ ಅಸಹಕಾರ ವ್ಯಕ್ತಪಡಿಸುವುದು. ನವೆಂಬರ್ 11 ರಿಂದ 18 ರವರೆಗೆ ಸ್ಯಾಟ್ಸ್ ಮಾಹಿತಿ ಅಪ್ಡೇಟ್ ಮಾಡದೆ, ರಾಜ್ಯದ ಶಿಕ್ಷಕರ ಸಮಸ್ಯೆಗಳ ಕುರಿತು ಗಮನ ಸೆಳೆಯಲು ರಾಜ್ಯ ಸಂಘ ತೀರ್ಮಾನಿಸಿದೆ.

**ದಕ್ಷಿಣ ವಲಯ ಮನವಿ:** ದಾವಣಗೆರೆ ದಕ್ಷಿಣ ವಲಯದ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಈ. ಬಸವರಾಜ್, ಗದ್ದಿಗೆಪ್ಪ ಮ್ಯಾಚರ್, ಎನ್.ಎಂ. ಕರಿಬಸಪ್ಪ, ಪಿ.ಎಂ. ನಾಗರಾಜ್, ಹೆಚ್.ಎಸ್. ನಾಗರಾಜ್, ಜಿ. ಶಿವಕುಮಾರ್, ಪಲ್ಲವಿ, ಸುಧಾ, ರುದ್ರಮ್ಮ, ನಾಗವೇಣಿ, ಶೈಲಜಾ ಮತ್ತಿತರರು ದಕ್ಷಿಣ ಕ್ಷೇತ್ರ ಶಿಕ್ಷಣಾಧಿಕಾರಿ ನಿರಂಜನಮೂರ್ತಿ ಅವರಿಗೆ ಮನವಿ ಸಲ್ಲಿಸಿದರು.

**ಉತ್ತರ ವಲಯ ಮನವಿ:** ದಾವಣಗೆರೆ ಉತ್ತರ ವಲಯದ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷೆ ಕೆ.ಜಿ. ಸುಜಾತ, ಕಾರ್ಯದರ್ಶಿ ಬಿ. ಕುಮಾರಸ್ವಾಮಿ, ಉಪಾಧ್ಯಕ್ಷೆ ಎಂ.ಪಿ. ಶೋಭಾರಾಣಿ, ಜಿಲ್ಲಾ ಉಪಾಧ್ಯಕ್ಷೆ ಪಿ ಪದ್ಮಾ, ಖಜಾಂಚಿ ಪಿ. ಕರಿಬಸಪ್ಪ, ಮುಖ್ಯೋಪಾಧ್ಯಾಯರ ಸಂಘದ ಅಧ್ಯಕ್ಷ ಆರ್. ಯು. ಸೋಮಶೇಖರ್, ರವಿಶಂಕರ್, ನಾಗರಾಜ್, ಮಹಾರುದ್ರಪ್ಪ ಸೇರಿದಂತೆ ಇತರರು ಉತ್ತರ ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ಅವರಿಗೆ ಮನವಿ ಸಲ್ಲಿಸಿದರು.

# ಹೊನ್ನಾಳಿ : ವಿದ್ಯಾರ್ಥಿಗಳಿಗೆ ಬಿಸಿಯೂಟ

**(1ನೇ ಪುಟದಿಂದ)** ಭೇಟಿ ನೀಡಿ ಪರಿಶೀಲಿಸಲಾಗುವುದು ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ಭಾರತೀಯ ವಿದ್ಯಾಸಂಸ್ಥೆಯ ಅಡುಗೆ ಸಿಬ್ಬಂದಿಗಳಾದ ಕುಂಬಾರಗುಂಡಿ ಭಾರತಿ, ಗಂಗಮ್ಮ, ಮಾಲಾ, ಮರಿಯಮ್ಮ, ಸರ್ವರಕೇರಿ ಭಾರತಿಯವರು ತಮಗೆ 5 ತಿಂಗಳಿನಿಂದ ಸಂಬಳವಾಗಿಲ್ಲ ಎಂಬ ಅಳಲನ್ನು ಪತ್ರಿಕೆಯೊಂದಿಗೆ ಹಂಚಿಕೊಂಡರು.

ಇದರ ಬಗ್ಗೆ ರುದ್ರಪ್ಪನವರಿಗೆ ಪ್ರಶ್ನಿಸಿದಾಗ ಜೂನ್‌ನಿಂದ ಸೆಪ್ಟೆಂಬರ್‌ರವರೆಗೆ ಒಂದೇ ಬಾರಿ ಸಂಬಳ ಬಿಡುಗಡೆಯಾಗಲಿದೆ. ಮುಖ್ಯ ಅಡುಗೆಯವರಿಗೆ 10,800 ಸಹಾಯಕ ಸಿಬ್ಬಂದಿಗೆ 10,400 ರೂ.ಗಳು ಒಂದೇ ಕಂತಿನಲ್ಲಿ ಹಣ ಬಿಡುಗಡೆ ಆಗಲಿದೆ ಎಂಬ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಬಿವಿಎಸ್ ಶಾಲಾ ಮುಖ್ಯೋಪಾಧ್ಯಾಯ ತಿಮ್ಮೇಶ್, ಸಹಶಿಕ್ಷಕ ಗಿರೀಶ್, ಅಶೋಕ್, ಸತೀಶ್ ಬಂಗೇರ್, ಮಂಜಪ್ಪ, ಶಿವಲಿಂಗಪ್ಪ ಇನ್ನಿತರೆ ಸಹ ಶಿಕ್ಷಕರು ಉಪಸ್ಥಿತರಿದ್ದರು.

## ನೇಪಾಳ ಪ್ರವಾಹ : ಸಾವಿನ ಸಂಖ್ಯೆ ಏರಿಕೆ

ಕಠ್ಮಂಡು, ಅ. 21 – ನೇಪಾಳದಲ್ಲಿ ಉಂಟಾಗಿರುವ ಪ್ರವಾಹ ಹಾಗೂ ಭೂಕುಸಿತಗಳಿಂದ ಮೃತರ ಸಂಖ್ಯೆ 88ಕ್ಕೆ ತಲುಪಿದೆ. 30 ಜನರು ಇದುವರೆಗೂ ಕಾಣೆಯಾಗಿದ್ದಾರೆ. ಪೂರ್ವ ನೇಪಾಳದ ಪಂಚತರ್ ಜಿಲ್ಲೆಯಲ್ಲಿ ಅತಿ ಹೆಚ್ಚಿನ 27 ಜನ ಸಾವನ್ನಪ್ಪಿದ್ದಾರೆ. ನೇಪಾಳದ 20 ಜಿಲ್ಲೆಗಳಲ್ಲಿ ವಿಕೋಪ ಉಂಟಾಗಿದೆ.

# ರಾಜ್ಯ ಮಟ್ಟದ ಕರಾಟೆ ಸ್ಪರ್ಧೆಯಲ್ಲಿ ಸೋಮಶೇಖರ್‌ಗೆ ದ್ವಿತೀಯ ಸ್ಥಾನ



ದಾವಣಗೆರೆ, ಅ.21- ಕರ್ನಾಟಕ ರಾಜ್ಯ ಕರಾಟೆ ಸಂಸ್ಥೆ ಹಾಗೂ ಶಿವಮೊಗ್ಗ ಸಿಟಿ ಕರಾಟೆ ಸಂಸ್ಥೆ ಇವರ ಜಂಟಿ ಆಶ್ರಯದಲ್ಲಿ ಕಳೆದ ವಾರ ಶಿವಮೊಗ್ಗದಲ್ಲಿ ಏರ್ಪಡಿಸಿದ್ದ ರಾಜ್ಯ ಮಟ್ಟದ ಕರಾಟೆ ಸ್ಪರ್ಧೆಯಲ್ಲಿ ಸ್ಪರ್ಧೆಯಲ್ಲಿ ನಗರದ ಕು. ಎಂ.ಯು. ಸೋಮಶೇಖರ್ ದ್ವಿತೀಯ ಸ್ಥಾನ ಪಡೆದಿದ್ದಾನೆ.

ಸೋಮಶೇಖರ್, ಕರಾಟೆಯಲ್ಲಿ ರಾಜ್ಯ, ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಅನೇಕ ಪದಕಗಳನ್ನು ಪಡೆದಿದ್ದಾನೆ.

# ನೆಮ್ಮದಿ ಜೀವನಕ್ಕೆ ಯೋಧರು ಪೊಲೀಸರ ನಿಸ್ವಾರ್ಥ ಸೇವೆ ಕಾರಣ

ದಾವಣಗೆರೆ, ಅ.21- ಯೋಧರು ಮತ್ತು ಪೊಲೀಸರ ನಿಸ್ವಾರ್ಥ ಸೇವೆ, ಕರ್ತವ್ಯ ನಿಷ್ಠೆಯಿಂದಾಗಿ ಸಮಾಜದಲ್ಲಿ ಪ್ರತಿಯೊಬ್ಬರೂ ನೆಮ್ಮದಿಯ ಜೀವನ ನಡೆಸಲು ಸಾಧ್ಯವಾಗಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಶ್ವರಿ ಹೆಗಡೆ ಹೇಳಿದರು.

ನಗರದ ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ಜಿಲ್ಲಾ ಪೊಲೀಸ್ ವತಿಯಿಂದ ಹಮ್ಮಿಕೊಂಡಿದ್ದ ಪೊಲೀಸ್ ಹುತಾತ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿ ದರು.

ಎಂಥದೇ ಸಂದರ್ಭ ಬಂದರೂ ಪೊಲೀಸರು ತಮ್ಮ ಪ್ರಾಣವನ್ನು ಪಣಕ್ಕಿಟ್ಟು ಕರ್ತವ್ಯ ನಿರ್ವಹಿಸುತ್ತಾರೆ. ಕಾನೂನು ಸುವ್ಯವಸ್ಥೆ ಅನುಷ್ಠಾನಗೊಳಿಸುವಲ್ಲಿ ಸಂಚಾರಿ ಪೊಲೀಸರ ಪಾತ್ರ ಅತ್ಯಂತ ಮಹತ್ವವಾದುದು. ಆದರೆ ಜನರಲ್ಲಿ ಸಂಚಾರ ನಿಯಮಗಳ ಅರಿವು ಇದ್ದರೂ ಕೂಡ, ಅವುಗಳನ್ನು ಉಲ್ಲಂಘಿಸುವ ಪ್ರಕರಣಗಳನ್ನು ನಿತ್ಯ ನೋಡುತ್ತೇವೆ. ಈ ರೀತಿ ಆಗದಂತೆ ಸಾರ್ವಜನಿಕರೂ ಸಹ ಎಚ್ಚರ ವಹಿಸುವ ಅಗತ್ಯವಿದೆ ಎಂದರು.



ಪೊಲೀಸ್ ಹುತಾತ್ಮ ದಿನಾಚರಣೆಯಲ್ಲಿ ನ್ಯಾ.ರಾಜೇಶ್ವರಿ ಹೆಗಡೆ

ಸಾರ್ವಜನಿಕರಲ್ಲಿ ಶಿಸ್ತಿನ ನಡವಳಿಕೆಗಳನ್ನು ರೂಢಿಸಿಕೊಂಡರೆ ಪೊಲೀಸರು ಸಹ ನೆಮ್ಮದಿ ಜೀವನ ನಡೆಸಲು ಸಹಕಾರಿಯಾಗಲಿದೆ. ದೇಶದ ಗಡಿಯಲ್ಲಿ ಯೋಧರು, ದೇಶದೊಳಗೆ ಪೊಲೀಸರು ನಿತ್ಯ ರಕ್ಷಣೆಯ ಕೆಲಸ ಮಾಡುವುದರಿಂದಲೇ ಜನರ ನೆಮ್ಮದಿ ಜೀವನ ಸಾಧ್ಯವಾಗಿದೆ ಎಂದು ಹೇಳಿದರು.

ಬಿಸಿಲು, ಮಳೆಯನ್ನೂ ಲೆಕ್ಕಿಸದೇ, ಕುಟುಂಬಗಳನ್ನು ತೊರೆದು ದೇಶಕ್ಕಾಗಿ ಹಗಲಿರುಳು ಕರ್ತವ್ಯ ನಿರ್ವಹಿಸಿ, ಪ್ರಾಣ ತ್ಯಾಗ ಮಾಡಿದ ಪೊಲೀಸ್ ಹುತಾತ್ಮರ ಸ್ಮರಣೆ ಅವಶ್ಯವಾಗಿದೆ. ಹುತಾತ್ಮರ ದಿನಾಚರಣೆ ಕೇವಲ ಒಂದು ದಿನಕ್ಕೆ ಸೀಮಿತವಾಗದೇ ನಿರಂತರವಾಗಿ ಸ್ಮರಿಸುವಂತಾಗಬೇಕು ಎಂದರು.

ಇತ್ತೀಚಿಗೆ ಕೇಂದ್ರ ಸಚಿವರೊಬ್ಬರು ದೇಶದ ಒಂದು ಸಾವಿರ ಶಾಲೆಗಳಲ್ಲಿ ದೇಶದ ಸಾಧಕರ ಭಾವಚಿತ್ರ ಪ್ರದರ್ಶಿಸುವ ಮೂಲಕ ಅವರ ಸಾಧನೆಯನ್ನು ಮಕ್ಕಳಿಗೆ ಮನವರಿಕೆ ಮಾಡಿಕೊಡಲಾಗುವುದು ಎಂದು ಹೇಳಿರುವುದು ಸ್ವಾಗತಾರ್ಹ ಎಂದು ತಿಳಿಸಿದರು.

ಪೂರ್ವವಲಯ ಐಜಿಪಿ ಎಸ್. ರವಿ ಮಾತನಾಡಿ, ಶಿಸ್ತಿನ ಪೊಲೀಸ್ ಇಲಾಖೆಯಲ್ಲಿ ಪೊಲೀಸರಿಗೆ ಶಿಸ್ತೇ ಬ್ರಹ್ಮಾಸ್ತ್ರ. ಶಿಸ್ತು ತಪ್ಪಿದರೆ ಅಪಾಯ ಕಟ್ಟಿಟ್ಟ ಬುತ್ತಿ. ಸಾವು, ನೋವುಗಳು ಸಂಭವಿಸುವುದು ಅನಿವಾರ್ಯ. ಆದರೆ ನಮ್ಮ ಕೈಯಿಂದ ಆಗಬಾರದು ಎಂದು ಕಿವಿಮಾತು ಹೇಳಿದರು.

ಪ್ರಜ್ಞೆ, ಶಿಸ್ತನ್ನು ಬಲಿಕೊಟ್ಟಾಗ ಅದಕ್ಕೆ ನಾವೇ ಬಲಿಯಾಗುತ್ತೇವೆ. ಜಾಗರೂಕರಾಗಿ, ಶಿಸ್ತಿನಿಂದ ವರ್ತಿಸುವ ಜೊತೆಗೆ ಸಮಾಜ ರಕ್ಷಣೆಯ ಜವಾಬ್ದಾರಿಯನ್ನು ಹೊರಬೇಕಾಗಿದೆ ಎಂದರು.

ಎಸ್ಪಿ ಸಿ.ಬಿ. ರಿಷ್ಯಂತ್ ಹುತಾತ್ಮರ ನಾಮ ಸ್ಮರಣೆ ಮಾಡಿದರು. ಮೇಯರ್ ಎಸ್.ಟಿ. ವೀರೇಶ್, ಅಡಿಷನಲ್ ಎಸ್ಪಿ ರಾಜೀವ್, ಎಎಸ್ಪಿ ಕನ್ನಿಕಾ, ಸಹಾಯಕ ಅಭಿಯೋಜಕರಾದ ಕಲ್ಪನಾ, ಆರ್‌ಟಿಓ ಶ್ರೀಧರ ಮಲ್ನಾಡ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕ ವಿಜಯಕುಮಾರ್, ಡಿಹೆಚ್‌ಓ ನಾಗರಾಜ್, ಅಗ್ನಿಶಾಮಕ ದಳದ ಅಧಿಕಾರಿ ಬಸವಪ್ರಭು ಶರ್ಮಾ, ಸಿಪಿಐ ಗುರುಬಸವರಾಜ್, ಜಿಲ್ಲಾ ವರದಿಗಾರರ ಕೂಟದ ಅಧ್ಯಕ್ಷ ಜಿ.ಎಂ.ಆರ್. ಆರಾಧ್ಯ ಸೇರಿದಂತೆ, ಅನೇಕರು ಹುತಾತ್ಮರಿಗೆ ಪುಷ್ಪ ನಮನ ಸಲ್ಲಿಸಿದರು.

ಇದೇ ವೇಳೆ ಪೊಲೀಸ್ ಸಿಬ್ಬಂದಿ ಗಾಳಿಯಲ್ಲಿ ಮೂರು ಸುತ್ತು ಗುಂಡು ಹಾರಿಸಿದ ನಂತರ ಹುತಾತ್ಮರಿಗೆ ಎರಡು ನಿಮಿಷ ಮೌನಾಚರಣೆ ಮಾಡಲಾಯಿತು.

# 100 ಕೋಟಿ ದಾಟಿದ ಡೋಸ್

**(1ನೇ ಪುಟದಿಂದ)** ಅಭಿನಂದಿಸಿ ದ್ದಾರೆ. ಈ ಸಂದರ್ಭಕ್ಕಾಗಿ ರಾಜಧಾನಿಯಲ್ಲಿರುವ ಕೆಂಪು ಕೋಟೆಯಲ್ಲಿ ಸಂಗೀತ ಕಾರ್ಯಕ್ರಮವೊಂದನ್ನು ಆಯೋಜಿಸಲಾಗಿತ್ತು. ಇದೇ ವೇಳೆ 1,400 ಕೆಜಿ ತೂಕದ ತ್ರಿವರ್ಣ ಖಾದಿ ಧ್ವಜವನ್ನೂ ಪ್ರದರ್ಶಿಸಲಾಯಿತು. ಭಾರತೀಯ ಪುರಾತತ್ವ ಇಲಾ ಖೆಯು ತನ್ನ 100 ಸ್ಮಾರಕಗಳನ್ನು ತ್ರಿವರ್ಣದೊಂದಿಗೆ ಕಂಗೊಳಿಸು ವಂತೆ ಮಾಡಿತ್ತು. ಕೇಂದ್ರ ಸರ್ಕಾರದ ಕೆಲ ಆಸ್ಪತ್ರೆಗಳಲ್ಲೂ ಸಹ 100 ಕೋಟಿ ಡೋಸ್ ಲಸಿಕೆ ಸಾಧನೆ ಬಿಂಬಿಸುವ ಭಿತ್ತಿಪತ್ರಗಳನ್ನು ಪ್ರದರ್ಶಿಸಲಾಗಿತ್ತು.

ಈ ಬಗ್ಗೆ ಮಾತನಾಡಿರುವ ಎಐಐಎಂಎಸ್ ನಿರ್ದೇಶಕ ರಣದೀಪ್ ಗುಲೇರಿಯಾ, ಲಸಿಕಾ ಅಭಿಯಾನ ಆರಂಭವಾದಾಗ ಹಲ ವರಲ್ಲಿ ಅನುಮಾನಗಳಿದ್ದವು. 9 ತಿಂಗಳ ನಂತರ ನಾವು 100 ಕೋಟಿ ಡೋಸ್ ಲಸಿಕೆಯ ಸಾಧನೆ ಮಾಡಿದ್ದೇವೆ ಎಂದು ತಿಳಿಸಿದರು.

# ಗಾಂಧೀಜಿ ಹೆಸರು ಇಡೀ ಜಗತ್ತಿಗೇ ಅಹಿಂಸಾ ತತ್ವ

## ಅಂತರರಾಷ್ಟ್ರೀಯ ಅಹಿಂಸಾ ದಿನಾಚರಣೆ ಕಾರ್ಯಕ್ರಮದಲ್ಲಿ ಹಿರಿಯ ಸಿವಿಲ್ ನ್ಯಾ. ಪ್ರವೀಣ್ ನಾಯಕ್ ಅಭಿಮತ

ದಾವಣಗೆರೆ, ಅ.21 - ಬಾಪೂಜಿ ಹುಟ್ಟಿದ ದಿನವನ್ನು ವಿಶ್ವ ಅಹಿಂಸಾ ದಿನವನ್ನಾಗಿ ಆಚರಿಸಲಾಗುತ್ತಿದೆ. ಮಹಾತ್ಮ ಗಾಂಧಿ ಎಂಬ ಹೆಸರು ಭಾರತೀಯರಿಗೆ ಮಾತ್ರ ಪ್ರೇರಕ ಶಕ್ತಿಯಲ್ಲ. ಬದಲಾಗಿ ಇಡೀ ಜಗತ್ತಿಗೇ ಅಹಿಂಸಾ ತತ್ವವಾಗಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರಾದ ಪ್ರವೀಣ್ ನಾಯಕ್ ಅಭಿಪ್ರಾಯಪಟ್ಟರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಖಿ ಒನ್ ಸ್ಟಾಫ್ ಸೆಂಟರ್ ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ವತಿಯಿಂದ ಶ್ರೀರಾಮ ನಗರದಲ್ಲಿರುವ ರಾಜ್ಯ ಮಹಿಳಾ ನಿಲಯದಲ್ಲಿ ಇಂದು ಹಮ್ಮಿಕೊಂಡಿದ್ದ ಅಂತರ ರಾಷ್ಟ್ರೀಯ ಅಹಿಂಸಾ ದಿನಾಚರಣೆ ಕಾರ್ಯಕ್ರಮ ವನ್ನು ಉದ್ಘಾಟಿಸಿ ಅವರು ಮಾತನಾಡಿದರು.




ಗಾಂಧೀಜೀ ಹೆಸರು ಅಹಿಂಸಾ ಧ್ಯೋತಕವಾಗಿರುವುದ ರಿಂದ ಅಕ್ಟೋಬರ್ 2ನ್ನು ವಿಶ್ವಸಂಸ್ಥೆ ಅಹಿಂಸಾ ದಿನವನ್ನಾಗಿ ಘೋಷಿಸಿದೆ. ಸ್ವಾತಂತ್ರ್ಯ ಹೋರಾಟಕ್ಕೆ ಗಾಂಧೀಜೀ ಅವರ ಅಮೂಲ್ಯ ಕೊಡುಗೆಗಳನ್ನು ಗೌರವಿಸಬೇಕು. ಅವರ ಚಿಂತನೆಗಳನ್ನು, ಆದರ್ಶಗಳ ಬಗ್ಗೆ ಯುವ ಪೀಳಿಗೆಗೆ ಅರಿವು ಮೂಡಿಸುವುದು ಅಗತ್ಯವಾಗಿದೆ ಎಂದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದ ಹಿರಿಯ ವಕೀಲ ಎಲ್.ಹೆಚ್. ಅರುಣ್‌ಕುಮಾರ್, ಜಗತ್ತಿನಲ್ಲಿ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಹಿಂಸೆ, ಕ್ರೌರ್ಯಗಳನ್ನು ತಡೆಯಲು ಗಾಂಧೀಜಿಯಂತಹ ಶಾಂತಿ ಧೂತರ ತತ್ವಗಳನ್ನು ಜಗತ್ತಿಗೆ ಜ್ಞಾಪಿಸುವುದು ಅವಶ್ಯಕವಾಗಿದೆ.ಗಾಂಧೀಜಿಯವರಜೀವನವೇ ಒಂದು ಸಂದೇಶವಾಗಿದ್ದು, ಅವರ ಅಹಿಂಸಾ ಮಾರ್ಗದ ಹೋರಾಟ ಚಳವಳಿಗಳಿಗೆ ಪ್ರೇರಕ ಶಕ್ತಿಯಾಗಬೇಕು ಎಂದು ಅವರು ಆಶಿಸಿದರು.

ಆರ್‌ಎಲ್ ಲಾ ಕಾಲೇಜಿನ ಪ್ರಾಧ್ಯಾಪಕ ವಿದ್ಯಾಧರ್ ವೇಶವರ್ಮ ಮಾತನಾಡಿ, ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯು 2007ನೇ ಇಸವಿಯಿಂದ ವಿಶ್ವ ಅಹಿಂಸಾ ದಿನವನ್ನು ಘೋಷಿಸಿದೆ. ಮಹಾತ್ಮ ಗಾಂಧೀಜಿಯವರ ಆದರ್ಶವನ್ನು ಪ್ರತಿಯೊಬ್ಬರು ಪಾಲಿಸಿಕೊಂಡು ಜೀವನವನ್ನು ಯಶಸ್ವಿಗೊಳಿಸಿಕೊಳ್ಳಬೇಕು. ಗಾಂಧೀಜಿ ಅವರ ತತ್ವಗಳು ಇಂದಿಗೂ ಪ್ರಸ್ತುತವಾಗಿವೆ ಎಂದು ಹೇಳಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಕೆ.ಹೆಚ್. ವಿಜಯಕುಮಾರ್, ಜಿಲ್ಲಾ ಮಹಿಳಾ ಸಂರಕ್ಷಣಾಧಿಕಾರಿ ಪೂರ್ಣಿಮಾ, ರಾಜ್ಯ ಮಹಿಳಾ ನಿಲಯದ ಅಧೀಕ್ಷಕಿ ಸುಜಾತ, ಬಾಲಕಿಯರ ಬಾಲ ಮಂದಿರದ ಅಧೀಕ್ಷಕಿ ಮೈತ್ರಾ, ಸಖಿ ಕೇಂದ್ರದ ಕಾನೂನು ಸಲಹೆಗಾರರಾದ ತಂಜೀಮಾ ಕೌಸರಿ, ಮಧುರ ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ನಗರದಲ್ಲಿ ನಾಳೆ ಸಿದ್ಧ ಕಣ್ಣಿನ ಹನಿ ಹಾಕುವ ಕಾರ್ಯಕ್ರಮ



ದಾವಣಗೆರೆ, ಅ.22- ಉಚಿತವಾಗಿ ಸಿದ್ಧ ಕಣ್ಣಿನ ಹನಿ ಹಾಕುವ ಕಾರ್ಯಕ್ರಮವನ್ನು ಸ್ಥಳೀಯ ವಿದ್ಯಾನಗರದ ಶ್ರೀ ಈಶ್ವರ-ಪಾರ್ವತಿ-ಗಣಪತಿ ದೇವಸ್ಥಾನದ ಆವರಣದಲ್ಲಿ ನಾಡಿದ್ದು ದಿನಾಂಕ 23ರ ಶನಿವಾರ ಬೆಳಿಗ್ಗೆ 10 ರಿಂದ 11 ರವರೆಗೆ ಹಮ್ಮಿಕೊಳ್ಳಲಾಗಿದೆ. ಪಾಲಿಕೆ ಮಾಜಿ ಸದಸ್ಯ ಬೆಳವನೂರು ನಾಗರಾಜಪ್ಪ ಕಾರ್ಯಕ್ರಮದ ನೇತೃತ್ವ ವಹಿಸುವರು. ಕಣ್ಣಿಗೆ ಹನಿ ಹಾಕುವುದರಿಂದ ಕಣ್ಣಿನಲ್ಲಿ ನೀರು ಬರುವುದು, ಕಣ್ಣುರಿ, ಕಣ್ಣು ಕೆಂಪಾಗುವುದು, ಕಣ್ಣಿನ ಪೊರೆ ಬರುವ ಹಂತದಲ್ಲಿರುವವರು, ದೂರ ದೃಷ್ಟಿ, ಸಮೀಪ ದೃಷ್ಟಿ ತೊಂದರೆ ಇರುವವರು ಶಿಬಿರದಲ್ಲಿ ಭಾಗವಹಿಸ ಬಹುದು. ಕಡ್ಡಾಯವಾಗಿ ಮಾಸ್ಕ್ ಧರಿಸಿ ಹಾಗೂ ಅಂತರ ಕಾಪಾಡಿಕೊಳ್ಳಿ. ವಿವರಕ್ಕೆ ವ್ಯವಸ್ಥಾಪಕ ಎಂ.ಮೋಕ್ಷಾನಂದ (94482-55 544), ಬಿ.ಎಸ್. ವೀರೇಶ್ (88676-91155), ಕೆ.ಎಂ. ವೀರಭದ್ರಯ್ಯ (94493-88354), ಆರ್.ಕೆ.ಎಂ. ಕಂಬಾಳೇಶ್ (94484-42 713), ಎನ್.ಎಂ. ತಿಪ್ಪೇಸ್ವಾಮಿ (98868-74078) ಹೆಚ್.ಎನ್. ಸೋಮನಾಥ್ (91086-15021) ಅವರನ್ನು ಸಂಪರ್ಕಿಸಿ.

# ಪಡಿತರ ಅಕ್ಕಿ ವಶ

**(1ನೇ ಪುಟದಿಂದ)** ಆಹಾರ ನಿರೀಕ್ಷಕರಾದ ಶಬಿನಾ ಪರ್ವೀನ್ ಮತ್ತು ಸಿಬ್ಬಂದಿಗಳನ್ನೊಳಗೊಂಡ ಪೊಲೀಸ್ ತಂಡ ಎನ್. ಹೆಚ್. 4ರ ರಸ್ತೆಯ ಶಾಮನೂರು ಸೇತುವೆ ಬಳಿ ದಾಳಿ ಮಾಡಿ ಸುಮಾರು 3.42 ಲಕ್ಷ ರೂ. ಮೌಲ್ಯದ 22.50 ಕ್ವಿಂಟಾಲ್ ಅಕ್ಕಿ ಹಾಗೂ ಕೃತ್ಯಕ್ಕೆ ಬಳಸಿದ ಒಂದು ಲಾರಿ ವಶಪಡಿಸಿಕೊಂಡಿದೆ.

# ನಗರಕ್ಕೆ ಇಂದು ಜಿಲ್ಲಾ ಉಸ್ತುವಾರಿ ಸಚಿವ ಭೈರತಿ

ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ ಬಸವರಾಜ ಅವರು ನಗರಕ್ಕೆ ಆಗಮಿಸಲಿದ್ದಾರೆ. ಸಂಜೆ 4.30ಕ್ಕೆ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯುವ ಸರ್ಕಾರಿ ನೌಕರರ ಕ್ರೀಡಾ ಸ್ಪರ್ಧೆಯ ಉದ್ಘಾಟನಾ ಸಮಾರಂಭದಲ್ಲಿ ಸಚಿವರು ಭಾಗವಹಿಸುವರು.

# ಕಾಸಲ್ ಉದ್ಯಾನವನದಲ್ಲಿ ಅಪಾಯಕಾರಿ ಗುಂಡಿ...

**ಓದುಗರ ಪತ್ರ**

**ಮಾನ್ಯರೇ,**

ದಾವಣಗೆರೆಯ ಎಂ.ಸಿ.ಸಿ 'ಬಿ' ಬ್ಲಾಕ್‌ನಲ್ಲಿರುವ ಕಾಸಲ್ ಶ್ರೀನಿವಾಸಶೆಟ್ಟಿ ಉದ್ಯಾನವನ ಅತ್ಯಂತ ಪುರಾತನ, ಪ್ರಮುಖ, ದಟ್ಟವಾಗಿ ಗಿಡ ಮರಗಳಿಂದಾ ವೃತವಾದ ಮತ್ತು ಪ್ರತಿನಿತ್ಯ ಮುಂಜಾನೆ ಮತ್ತು ಸಂಜೆಯ ಹೊತ್ತಿನಲ್ಲಿ ನೂರಾರು ಜನ ವಾಯುವಿಹಾರಕ್ಕೆ ಬರುವ ಸ್ಥಳ.

ಇಂತಹ ಸುಂದರ ಹಾಗೂ ಆರೋಗ್ಯಕರ ಪಾರ್ಕ್‌ನ ವಾಕಿಂಗ್ ಮಾರ್ಗದಲ್ಲಿ ದೊಡ್ಡದಾದ ಕಂದಕದಂತಹ ಗುಂಡಿ ನಿರ್ಮಾಣ ಆಗಿದೆ.

ಮಹಿಳೆಯರು, ವೃದ್ಧರಾದಿಯಾಗಿ ವಿಶೇಷವಾಗಿ ಸಂಜೆ, ನಸುಕಿನ ವೇಳೆಯಲ್ಲಿ ವಾಕ್ ಮಾಡುವಾಗ ಕಣ್ಣಿಗೆ ಕಾಣದೇ ದೊಡ್ಡ ಅನಾಹುತ, ಭಾರೀ ಪ್ರಾಣಾಪಾಯ ಆಗುವ ಅಪಾಯವಿದೆ. ಸಂಬಂಧಪಟ್ಟವರು ತಕ್ಷಣವೇ ಗಮನ ಹರಿಸಬೇಕು

**- ಜಯಚಂದ್ ಪಿ. ಜೈನ್,**
ದಾವಣಗೆರೆ.



# ದಾವಣಗೆರೆ ತಾಲ್ಲೂಕಿನಲ್ಲಿ ಇಂದು ವಿದ್ಯುತ್ ವ್ಯತ್ಯಯ

ದಾವಣಗೆರೆ ತಾಲ್ಲೂಕಿನ ಆನಗೋಡು ವಿದ್ಯುತ್ ವಿತರಣಾ ಕೇಂದ್ರದ ಹೆಬ್ಬಾಳು, ಆರಾಧ್ಯ ಕೈಗಾರಿಕೆ, ನೀರ್ಥಡಿ, ಶಿವಪುರ, ಹಾಲುವರ್ತಿ, ಗಂಗನಕಟ್ಟೆ, ನೇರ್ಲಗಿ, ಕೊಗ್ಗನೂರು, ಚಿನ್ನಸಮುದ್ರ ಗ್ರಾಮಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳು, ಅತ್ತಿಗೆರೆ ವಿದ್ಯುತ್ ವಿತರಣಾ ಕೇಂದ್ರದ ತೋಳಹುಣಸೆ, ಕುರ್ಕಿ, ಕಬ್ಬೂರು, ಗೋಪ ನಾಳ್, ಕಂದಗಲ್ಲು, ಬಾಡ, ಅತ್ತಿಗೆರೆ, ಹನುಮನಹಳ್ಳಿ, ಹಿರೇತೋಗ ಲೇರಿ, ರಾಮಗೊಂಡನಹಳ್ಳಿ ಗ್ರಾಮಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳು ಹಾಗೂ ಮಾಯಕೊಂಡ ವಿದ್ಯುತ್ ವಿತರಣಾ ಕೇಂದ್ರದ ಬಿ.ದುರ್ಗ, ದಿಂಡದಹಳ್ಳಿ, ನರಗನಹಳ್ಳಿ, ಮಾಯಕೊಂಡ, ಬುಳ್ಳಾ ಪುರ, ಕೊಡಗನೂರು, ಹೆಚ್.ಬಸಾಪುರ, ಬಾಡ, ಮಾಯಕೊಂಡ, ನಲ್ಕುಂದ, ಬೊಮ್ಮೇನಹಳ್ಳಿ, ಬಾವಿಹಾಳು, ಅಣಬೇರು ಗ್ರಾಮಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ.

**ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ.,**
ಪ್ರಧಾನ ಕಚೇರಿ : ಪೋಸ್ಟ್ ಬಾಕ್ಸ್ ನಂ. 217, ಪಿ.ಬಿ.ರಸ್ತೆ, ದಾವಣಗೆರೆ - 577002.

**ಬ್ಯಾಂಕಿನ ಷೇರುದಾರರ ಗಮನಕ್ಕೆ**

ಮಾನ್ಯ ಸದಸ್ಯರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಕೋವಿಡ್-19 ಸಾಂಕ್ರಾಮಿಕ ರೋಗದ ಪ್ರಯುಕ್ತ ಸಹಕಾರ ಬ್ಯಾಂಕುಗಳ ವಾರ್ಷಿಕ ಸಾಮಾನ್ಯ ಸಭೆಯನ್ನು ವಿಡಿಯೋ ಕಾನ್ಫರೆನ್ಸ್/ವರ್ಚ್ಯುವಲ್ ಮೀಟಿಂಗ್ ಮುಖಾಂತರ ಜರುಗಿಸುವಂತೆ ಸರ್ಕಾರವು ಮಾರ್ಗಸೂಚಿಯನ್ನು ನೀಡಿರುತ್ತದೆ. ಈ ಮಾರ್ಗಸೂಚಿಯನ್ವಯ **ಬ್ಯಾಂಕಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ 23.10.2021ರ ಶನಿವಾರದಂದು ಬೆಳಿಗ್ಗೆ 11.30 ಗಂಟೆಗೆ ವಿಡಿಯೋ ಕಾನ್ಫರೆನ್ಸ್ ಮೂಲಕ ನಡೆಸಲು ತೀರ್ಮಾನಿಸಲಾಗಿದೆ.** ಆದ್ದರಿಂದ ಮಾನ್ಯ ಸದಸ್ಯರು ವಾರ್ಷಿಕ ಮಹಾಸಭೆಯ ವರ್ಚ್ಯುವಲ್ ಮೀಟಿಂಗ್‌ನಲ್ಲಿ ವಿಡಿಯೋ ಕಾನ್ಫರೆನ್ಸ್/ವೆಬ್‌ಕಾಸ್ಟ್ ಮೂಲಕ ಪಾಲ್ಗೊಳ್ಳುವುದು ಸಾಮಾನ್ಯ ಸಭೆಯ ಹಾಜರಾತಿಯೆಂದು ಪರಿಗಣಿಸಲ್ಪಡುವುದರಿಂದ **ತಮ್ಮ ಸದಸ್ಯತ್ವ ಖಾತೆ ನಂಬರ್ ಹಾಗೂ ಮೊಬೈಲ್ ಸಂಖ್ಯೆಯನ್ನು ಕೂಡಲೇ ನಮ್ಮ ಬ್ಯಾಂಕಿನ ಶಾಖೆಗಳಲ್ಲಿ ನೋಂದಾಯಿಸಿಕೊಳ್ಳತಕ್ಕದ್ದು. ಮಾನ್ಯ ಸದಸ್ಯರು ತಮ್ಮ ಹಾಜರಾತಿಗಾಗಿ ಹಾಗೂ ವಾರ್ಷಿಕ ವರದಿಯನ್ನು ಡೌನ್‌ಲೋಡ್ ಮಾಡಿಕೊಳ್ಳಲು ಈ ಕೆಳಗೆ ಕೊಟ್ಟಿರುವ ಲಿಂಕನ್ನು ಬಳಸಿಕೊಳ್ಳಲು ಕೋರಿದೆ.**

ಮಹಾಸಭೆಯ ಹಾಜರಾತಿಗಾಗಿ ಲಿಂಕ್ ಹಾಗೂ ಕ್ಯೂ.ಆರ್. ಕೋಡ್
https://seeall.live/ducb

ವಾರ್ಷಿಕ ವರದಿ ಡೌನ್‌ಲೋಡ್ ಮಾಡಿಕೊಳ್ಳಲು ಕ್ಯೂ.ಆರ್. ಕೋಡ್

ಕೋಗುಂಡಿ ಬಕ್ಕೇಶಪ್ಪ
ಅಧ್ಯಕ್ಷರು

ಅಂದನೂರು ಮುಪ್ಪಣ್ಣ
ಉಪಾಧ್ಯಕ್ಷರು

ಡಿ.ವಿ. ಆರಾಧ್ಯಮಠ್
ಪ್ರಧಾನ ವ್ಯವಸ್ಥಾಪಕರು

# ದೇಶದ ಶೇ.75ರಷ್ಟು ಜನರಿಗೆ ಕನಿಷ್ಠ ಒಂದು ಡೋಸ್ ಲಸಿಕೆ


ನವದೆಹಲಿ, ಅ. 21 – ದೇಶದ ಶೇ.75ರಷ್ಟು ವಯಸ್ಕರಿಗೆ ಕನಿಷ್ಠ ಒಂದು ಡೋಸ್ ಕೊರೊನಾ ಲಸಿಕೆ ನೀಡಿರುವುದಾಗಿ ಕೇಂದ್ರ ಆರೋಗ್ಯ ಸಚಿವಾಲಯದ ಅಧಿಕಾರಿಗಳು ತಿಳಿಸಿದ್ದಾರೆ.

93 ಕೋಟಿ ವಯಸ್ಕರು ಇದುವರೆಗೂ ಲಸಿಕೆ ಪಡೆದಿದ್ದಾರೆ. ಇವರಲ್ಲಿ ಶೇ.31ರಷ್ಟು ಜನರು ಎರಡು ಡೋಸ್ ಲಸಿಕೆ ಪಡೆದಿದ್ದಾರೆ.

71 ಕೋಟಿ ಯಷ್ಟು ಜನರು ಒಂದು ಡೋಸ್ ಹಾಗೂ 29 ಕೋಟಿ ಜನರು ಎರಡೂ ಡೋಸ್ ಲಸಿಕೆ ಪಡೆದಿದ್ದಾರೆ ಎಂದು ಕೊವಿನ್ ವೆಬ್ ತಾಣದಲ್ಲಿ ತಿಳಿಸಲಾಗಿದೆ.

ಅಂಡಮಾನ್ ಮತ್ತು ನಿಕೋಬಾರ್, ಚಂಡೀಘಡ, ಗೋವ, ಹಿಮಾಚಲ ಪ್ರದೇಶ, ಜಮ್ಮು - ಕಾಶ್ಮೀರ, ಲಕ್ಷದ್ವೀಪ, ಸಿಕ್ಕಿಂ, ಉತ್ತರಾಖಂಡ ಹಾಗೂ ದಾದರ್ - ನಗರ್ ಹವೇಲಿಗಳಲ್ಲಿ ಎಲ್ಲ ವಯಸ್ಕರು ಕನಿಷ್ಠ ಒಂದು ಡೋಸ್ ಲಸಿಕೆ ಪಡೆದಿದ್ದಾರೆ.ಉತ್ತರ ಪ್ರದೇಶ, ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ಗುಜರಾತ್ ಹಾಗೂ ಮಧ್ಯ ಪ್ರದೇಶಗಳು ಅತಿ ಹೆಚ್ಚು ಲಸಿಕೆ ನೀಡಿದ ರಾಜ್ಯಗಳಲ್ಲಿ ಸೇರಿವೆ.

# ದೀಪಾವಳಿಯಲ್ಲಿ ಬೀದಿಗಳಲ್ಲಿ ಪಟಾಕಿ ಬೇಡ : ಸಿಯಟ್ ಜಾಹೀರಾತಿಗೆ ಆಕ್ಷೇಪ



ಬೆಂಗಳೂರು, ಅ. 21 – ದೀಪಾವಳಿ ಸಂದರ್ಭದಲ್ಲಿ ಬೀದಿಗಳಲ್ಲಿ ಪಟಾಕಿ ಹಾರಿಸದಂತೆ ಸಿಯಟ್ ಜಾಹೀರಾತಿನಲ್ಲಿ ಹೇಳಿರುವುದಕ್ಕೆ ಆಕ್ಷೇಪಿಸಿ ಆ ಕಂಪನಿಗೆ ಪತ್ರ ಬರೆದಿರುವ ಸಂಸದ ಅನಂತ ಕುಮಾರ್ ಹೆಗಡೆ, ನಮಾಜ್ ಹೆಸರಿನಲ್ಲಿ ರಸ್ತೆ ತಡೆಯುವ ಸಮಸ್ಯೆ ಹಾಗೂ ಮಸೀದಿಗಳಲ್ಲಿ ಅಜಾನ್‌ನಿಂದ ಆಗುವ ಸದ್ದಿನ ಬಗ್ಗೆಯೂ ಅರಿವು ಮೂಡಿಸುವಂತೆ ಒತ್ತಾಯಿಸಿದ್ದಾರೆ.

ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಹಾಗೂ ಸಿಇಒ ಅನಂತ ವರ್ಧನ ಗೋಯಂಕ ಅವರಿಗೆ ಪತ್ರ ಬರೆದಿರುವ ಹೆಗಡೆ, ಕಂಪನಿಯ ಇತ್ತೀಚಿನ ಜಾಹೀರಾತುಗಳಿಂದ ಹಿಂದೂಗಳಲ್ಲಿ ಅಶಾಂತಿ ಉಂಟಾಗಿದೆ. ಮುಂದಿನ ದಿನಗಳಲ್ಲಿ ಹಿಂದೂಗಳ ಭಾವನೆಗಳನ್ನು ಗೌರವಿಸಿ ಎಂದಿದ್ದಾರೆ.

ನಿಮ್ಮ ಕಂಪನಿಯ ಇತ್ತೀಚಿನ ಜಾಹೀರಾತಿನಲ್ಲಿ ನಟ ಅಮೀರ್ ಖಾನ್ ಅವರು ರಸ್ತೆಗಳಲ್ಲಿ ಪಟಾಕಿ ಸಿಡಿಸದಂತೆ ತಿಳಿಸಿರುವುದು ಉತ್ತಮ ಸಂದೇಶ. ಸಾರ್ವಜನಿಕ ವಿಷಯಗಳ ಬಗ್ಗೆ ನಿಮ್ಮ ಕಾಳಜಿ ಮೆಚ್ಚುವಂಥದ್ದು. ಅದೇ ರೀತಿ ಶುಕ್ರವಾರ ನಮಾಜ್‌ಗಾಗಿ ರಸ್ತೆ ತಡೆಯುವುದು ಹಾಗೂ ಮುಸ್ಲಿಮರ ಇತರೆ ಪ್ರಮುಖ ಹಬ್ಬಗಳ ದಿನಗಳಲ್ಲಿ ರಸ್ತೆ ತಡೆಯುವುದರ ಬಗ್ಗೆ ಇನ್ನೊಂದು ಜಾಹೀರಾತು ಮಾಡಿ ಎಂದು ಹೆಗಡೆ ಹೇಳಿದ್ದಾರೆ.

# ಸರ್ಕಾರ ಮಟ್ಕಾ ವಿರುದ್ಧ ಮೌನ



ಬೆಂಗಳೂರು, ಅ. 21 - ರಾಜ್ಯದ ಅನೇಕ ಕಡೆ ಮಟ್ಕಾ, ಬೆಟ್ಟಿಂಗ್ ದಂಧೆಗಳು ಅವ್ಯಾಹತವಾಗಿ ನಡೆಯುತ್ತಿದ್ದು, ಅನೇಕ ಬಡ ಕುಟುಂಬಗಳು ಬೀದಿ ಪಾಲಾಗಿದ್ದರೂ, ರಾಜ್ಯ ಬಿಜೆಪಿ ಸರ್ಕಾರ ಚಕಾರ ಎತ್ತದೇ ಮೌನವಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಟೀಕಿಸಿದ್ದಾರೆ.

ರಾಜ್ಯ ಪ್ರವಾಸ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಟ್ಕಾ, ಬೆಟ್ಟಿಂಗ್ ದಂಧೆಯ ಕಬಂಧಬಾಹುಗಳು ವ್ಯಾಪ ಕವಾಗಿ ಚಾಚಿಕೊಂಡಿವೆ ಎಂದರು.

ಬಡಕುಟುಂಬಗಳು ಇದಕ್ಕೆ ಸಿಕ್ಕಿ ಬಲಿಯಾಗುತ್ತಿವೆ, ಮಕ್ಕಳು ಹೆಚ್ಚು ಬಡ್ಡಿಗೆ ಸಾಲ ತಂದು ತಮ್ಮ ಜೀವನ ಹಾಳು ಮಾಡಿಕೊಳ್ಳುತ್ತಿದ್ದಾರೆ, ದಂಧೆಯನ್ನು ಹತ್ತಿಕ್ಕದ ಸರ್ಕಾರಕ್ಕೆ ಜನರ ಹಿಡಿಶಾಪ ಹಾಕುತ್ತಿದ್ದಾರೆ ಎಂದರು.





















JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte